ಕರ್ನಾಟಕ ಸರ್ಕಾರ

ವಯಸ್ಸು 4 ರಿಂದ 5 ವರ್ಷಗಳು

# ಚಿಲಿಪಿಲಿ Plus

## ಶಿಕ್ಷಕರ ಕೈಪಿಡಿ

### ಪುಸ್ತಕ 5





- ಪರಿಸರ ಜಗತ್ತು
- ತೂಕ ಮತ್ತು ಅಳತೆಗಳು







ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಓದೋಣ - ಎಲ್ಲರೂ ಬೆಳೆಯೋಣ

ಸಮಗ್ರ ಶಿಕ್ಷಣ ಕರ್ನಾಟಕ


ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

Scanned with CamScanner



# ಪರಿವಿಡಿ







## ವಿಷಯ 5: ಪರಿಸರ ಜಗತ್ತು

### ಉಪವಿಷಯ 5.1: ಸಸ್ಯ ಪ್ರಪಂಚ


ಸಂಭಾಷಣೆ . . . . . . . . . . . . . . . . . . . . . . . . . 2

ಯೋಜನಾ ಕಾರ್ಯಗಳು. . . . . . . . . . . . . . . . . . . . 6

ಶಿಶುಗೀತೆಗಳು . . . . . . . . . . . . . . . . . . . . . . . 7

ಕಥೆ . . . . . . . . . . . . . . . . . . . . . . . . . . . . 10

ಸೃಜನಾತ್ಮಕ ಚಟುವಟಿಕೆಗಳು. . . . . . . . . . . . . . . . . 12

ಒಳಾಂಗಣ ಆಟಗಳು . . . . . . . . . . . . . . . . . . . . 14

ಹೊರಾಂಗಣ ಆಟಗಳು. . . . . . . . . . . . . . . . . . . . 16

Total Physical Response . . . . . . . . . . . . . . . . 18




### ಉಪವಿಷಯ 5.2: ಮರಗಳು, ಪೊದೆಗಳು ಮತ್ತು ಬಳ್ಳಿಗಳು




ಸಂಭಾಷಣೆ . . . . . . . . . . . . . . . . . . . . . . . . . 22

ಯೋಜನಾ ಕಾರ್ಯಗಳು. . . . . . . . . . . . . . . . . . . . 26

ಶಿಶುಗೀತೆಗಳು . . . . . . . . . . . . . . . . . . . . . . . 27

ಕಥೆ . . . . . . . . . . . . . . . . . . . . . . . . . . . . 30

ಸೃಜನಾತ್ಮಕ ಚಟುವಟಿಕೆಗಳು. . . . . . . . . . . . . . . . . 32

ಒಳಾಂಗಣ ಆಟಗಳು . . . . . . . . . . . . . . . . . . . . 33

ಹೊರಾಂಗಣ ಆಟಗಳು. . . . . . . . . . . . . . . . . . . . 35

Total Physical Response . . . . . . . . . . . . . . . . 36




### ಉಪವಿಷಯ 5.3: ಹಣ್ಣುಗಳು, ತರಕಾರಿಗಳು ಮತ್ತು ಬೀಜಗಳು


ಸಂಭಾಷಣೆ . . . . . . . . . . . . . . . . . . . . . . . . . 40

ಯೋಜನಾ ಕಾರ್ಯಗಳು. . . . . . . . . . . . . . . . . . . . 46

ಶಿಶುಗೀತೆಗಳು . . . . . . . . . . . . . . . . . . . . . . . 48

ಕಥೆ . . . . . . . . . . . . . . . . . . . . . . . . . . . . 51

ಸೃಜನಾತ್ಮಕ ಚಟುವಟಿಕೆಗಳು. . . . . . . . . . . . . . . . . 53

ಒಳಾಂಗಣ ಆಟಗಳು . . . . . . . . . . . . . . . . . . . . 55

ಹೊರಾಂಗಣ ಆಟಗಳು. . . . . . . . . . . . . . . . . . . . 56

Total Physical Response . . . . . . . . . . . . . . . . 57








## ತೂಕ ಮತ್ತು ಅಳತೆಗಳು








ಸಿದ್ಧತಾ ಚಟುವಟಿಕೆಗಳು . . . . . . . . . . . . . . . . . . 62

ಪರಿಶೋಧನಾತ್ಮಕ ಚಟುವಟಿಕೆಗಳು. . . . . . . . . . . . . . . 64

ವಿಸ್ತರಣಾ ಚಟುವಟಿಕೆ. . . . . . . . . . . . . . . . . . . . 67


Scanned with CamScanner

ಪಠ್ಯಕ್ರಮವನ್ನು ಈ ಕೆಳಗಿನಂತೆ ವಿನ್ಯಾಸಗೊಳಿಸಲಾಗಿದೆ:

## ಮೌಖಿಕ ಭಾಷಾ ಕೌಶಲ ಬೆಳವಣಿಗೆ


ಸಂಭಾಷಣೆ


ಯೋಜನಾ ಕಾರ್ಯಗಳು


ಶಿಶುಗೀತೆಗಳು


ಕಥೆ


Total Physical Response (TPR)

---

## ಸೂಕ್ಷ್ಮ ಮತ್ತು ಸ್ಥೂಲ ಚಲನ ಕೌಶಲ, ಸಾಮಾಜಿಕ-ಭಾವನಾತ್ಮಕ ಮತ್ತು ಸೃಜನಾತ್ಮಕ ಬೆಳವಣಿಗೆ


ಒಳಾಂಗಣ ಆಟಗಳು


ಹೊರಾಂಗಣ ಆಟಗಳು


ಸೃಜನಾತ್ಮಕ ಚಟುವಟಿಕೆಗಳು

---

## ಇಂದ್ರಿಯ ಗ್ರಹಿಕೆಯ ಬೆಳವಣಿಗೆ


ಸಿದ್ಧತಾ ಚಟುವಟಿಕೆಗಳು


ಪರಿಶೋಧನಾತ್ಮಕ ಚಟುವಟಿಕೆಗಳು


ವಿಸ್ತರಣಾ ಚಟುವಟಿಕೆ


ಅನ್ವಯಿಸುವಿಕೆ

Scanned with CamScanner

# ಕೃತಜ್ಞತೆಗಳು

2019–20ನೇ ಸಾಲಿನಲ್ಲಿ 276 ಕರ್ನಾಟಕ ಪಬ್ಲಿಕ್ ಶಾಲೆಗಳಲ್ಲಿ ಪೂರ್ವ ಪ್ರಾಥಮಿಕ ತರಗತಿಗಳನ್ನು ಪ್ರಾರಂಭಿಸಲಾಗಿದೆ. ಪೂರ್ವ ಪ್ರಾಥಮಿಕ ತರಗತಿಗಳ ಶಿಕ್ಷಕಿಯರಿಗೆ ಪಠ್ಯಕ್ರಮ ಅನುಸರಿಸಲು ಕೈಪಿಡಿಯ ಅವಶ್ಯಕತೆಯಿರುವುದರಿಂದ, ಸಿದ್ಧಪಡಿಸಲು ಈ ಕೆಳಕಂಡ ಪಠ್ಯಕ್ರಮ ರಚನಾ ತಂಡಕ್ಕೆ ಸೂಚನೆ ನೀಡಲಾಗಿತ್ತು.

ಪೂರ್ವ ಪ್ರಾಥಮಿಕ ತರಗತಿಗಳ ಪಠ್ಯಕ್ರಮ ರಚನೆಗೆ ಸಹಕರಿಸಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ಅಂಗನವಾಡಿ ಮೇಲ್ವಿಚಾರಕರು, ನಲಿ–ಕಲಿ ಶಿಕ್ಷಕರು, ಸಂಪನ್ಮೂಲ ವ್ಯಕ್ತಿಗಳು, ಅಕ್ಷರ ಫೌಂಡೇಷನ್, ಅಜೀಂ ಪ್ರೇಮ್‌ಜಿ ಫೌಂಡೇಷನ್, ಸೆಂಟರ್ ಫಾರ್ ಲರ್ನಿಂಗ್, ಕಮ್ಯೂನಿಟಿ ಬೇಸ್ಡ್ ರಿಹ್ಯಾಬಿಲಿಟೇಷನ್ ನೆಟ್‌ವರ್ಕ್(ಸಿ.ಬಿ.ಆರ್), ಕಲಿಕೆ–ಟಾಟಾ ಟ್ರಸ್ಟ್, ಪ್ರಜಾಯತ್ನ, ಪ್ರಜ್ಞಾ ವಿದ್ಯಾ–ಕ್ರಿಯೇಟಿವ್ ಸ್ಕೂಲ್, ಪ್ರಾಪ್ತಿ ಫೌಂಡೇಷನ್, ಪ್ರಾಮಿಸ್ ಫೌಂಡೇಷನ್, ಟ್ರೈಡ್ ಲರ್ನಿಂಗ್ ಮತ್ತು ವಿ.ಹೆಚ್.ಡಿ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ರವರು ತಮ್ಮ ಅನುಭವ, ಪರಿಣತಿಯನ್ನು ಹಂಚಿಕೊಂಡಿರುತ್ತಾರೆ. ಪೂರ್ವ ಪ್ರಾಥಮಿಕ ತರಗತಿಗಳ ಶಿಕ್ಷಕಿಯರ ಸಾಮರ್ಥ್ಯಗಳ ಅಭಿವೃದ್ಧಿಗಾಗಿ ಸಹಕರಿಸಿದವರೆಲ್ಲರಿಗೂ ಧನ್ಯವಾದಗಳನ್ನು ಸಲ್ಲಿಸುತ್ತೇನೆ.

ಚಿಲಿ ಪಿಲಿ ಕಲಿಕಾ ಸಂಪನ್ಮೂಲಗಳಿಂದ ಕೆಲವು ಆಯ್ದ ಚಟುವಟಿಕೆಗಳು, ಕಥೆಗಳು, ಪದ್ಯಗಳು, ಎನ್‌ಸಿಇಆರ್‌ಟಿ ಸಂಪನ್ಮೂಲ ಪುಸ್ತಕಗಳಿಂದ ಥೀಮ್ ಬೇಸ್ಡ್ ಅರ್ಲಿ ಚೈಲ್ಡ್ ಕೇರ್ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳನ್ನು, ಸೇವ್‌ದ ಚಿಲ್ಡ್ರನ್ ಇಂಟರ್‌ನ್ಯಾಷನಲ್ ಸಂಸ್ಥೆಯಿಂದ ರೆಡಿ ಟು ಲರ್ನ್ ಅರ್ಲಿ ಲಿಟರೆಸಿ ಆಂಡ್ ಮ್ಯಾಥ್ಸ್, www.storyweavers.org.in, ಮತ್ತು ಇತರೆ ಮುಕ್ತ ಸಂಪನ್ಮೂಲಗಳಿಂದ ಅಗತ್ಯ ಮಾಹಿತಿಗಳನ್ನು ಅವಶ್ಯಕತೆ ಮತ್ತು ಸಂದರ್ಭಕ್ಕೆ ಅನುಗುಣವಾಗಿ ಪಠ್ಯಕ್ರಮದಲ್ಲಿ ಅಳವಡಿಸಿಕೊಳ್ಳಲಾಗಿದೆ. ಈ ಕಾರ್ಯಕ್ರಮಕ್ಕೆ ಆರ್ಥಿಕ ಮತ್ತು ತಾಂತ್ರಿಕ ನೆರವು ನೀಡಿದ ಯುನಿಸೆಫ್ ಸಂಸ್ಥೆಗೆ ಧನ್ಯವಾದಗಳನ್ನು ಸಲ್ಲಿಸುತ್ತೇವೆ.

(ಡಾ. ಎಂ.ಟಿ. ರೇಜು, ಭಾ.ಆ.ಸೇ.)
ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ ಕರ್ನಾಟಕ
ಬೆಂಗಳೂರು

Scanned with CamScanner





# ಪರಿಸರ ಜಗತ್ತು

# ಸಸ್ಯ ಪ್ರಪಂಚ



Scanned with CamScanner

# ಕಲಿಕಾ ಫಲಿತಗಳು

## ಉಪವಿಷಯ 5.1: ಸಸ್ಯ ಪ್ರಪಂಚ

### 3–4 ವರ್ಷಗಳು

1. ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಕಂಡುಬರುವ ಮರಗಿಡಗಳನ್ನು ಗುರುತಿಸಿ ಹೆಸರಿಸುವರು.
2. ನಿತ್ಯ ಜೀವನದಲ್ಲಿ ಸಸ್ಯಗಳ ಕೆಲವು ಉಪಯೋಗಗಳನ್ನು ಅರ್ಥೈಸಿಕೊಂಡು ವಿವರಿಸುವರು. ಉದಾ: ಸಸ್ಯಗಳು ಆಹಾರದ ಪ್ರಮುಖ ಮೂಲ.
3. ಹೂವುಗಳನ್ನು ಕೀಳುವುದು, ಮೊಗ್ಗುಗಳನ್ನು ಮುರಿಯುವುದು, ಚಿಟ್ಟೆಗಳನ್ನು ಓಡಿಸುವುದು ಮತ್ತು ಹಿಡಿಯುವುದನ್ನು ಮಾಡದಿರುವುದು.

### 4–5 ವರ್ಷಗಳು

1. ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಕಂಡುಬರುವ ಮರಗಿಡಗಳನ್ನು ಗುರುತಿಸಿ ಹೆಸರಿಸುವರು.
2. ಸಸ್ಯಗಳಲ್ಲಿ ಹೂವು ಮತ್ತು ಎಲೆಗಳಿರುತ್ತವೆ ಎಂದು ತಿಳಿಯುವರು.
3. ಗಿಡಗಳು ಬೆಳೆಯಲು ಸೂರ್ಯನ ಬೆಳಕು, ನೀರು ಮತ್ತು ಮಣ್ಣಿನ ಅವಶ್ಯಕತೆಯಿದೆ ಎಂದು ಅರ್ಥಮಾಡಿಕೊಳ್ಳುವರು.
4. ಸಸ್ಯಗಳ ಉಪಯೋಗಗಳನ್ನು ಸರಳವಾಗಿ ವಿವರಿಸುವರು. ಉದಾಹರಣೆಗೆ, ನೆರಳು, ಔಷಧಿ, ಆಹಾರ, ಅಲಂಕಾರ, ಪೀಠೋಪಕರಣ ನಿತ್ಯದ ಕೆಲಸಗಳಿಗೆ ಇತ್ಯಾದಿ.
5. ಸಸ್ಯಗಳ ರಕ್ಷಣೆ ಹಾಗೂ ಪೋಷಣೆಯ ಕ್ರಮಗಳನ್ನು ಸರಳವಾಗಿ ವಿವರಿಸುವರು.

### 5–6 ವರ್ಷಗಳು

1. ಸಸ್ಯದ ಮುಖ್ಯ ಭಾಗಗಳಾದ ಬೇರು, ಕಾಂಡ, ಎಲೆ, ಹೂವು, ಹಣ್ಣು ಮತ್ತು ತರಕಾರಿ ಹಾಗೂ ಬೀಜಗಳನ್ನು ಗುರುತಿಸಿ ಹೆಸರಿಸುವರು.
2. ಸಸ್ಯಗಳು ಮಣ್ಣಿನಿಂದ ನೀರನ್ನು, ಸೂರ್ಯನಿಂದ ಬಿಸಿಲನ್ನು ಹೇಗೆ ಪಡೆದುಕೊಳ್ಳುತ್ತವೆ ಎಂದು ವಿವರಿಸುವರು.
3. ಸಸ್ಯದ ಎಲೆಗಳು ನೀರು ಮತ್ತು ಬಿಸಿಲಿನಿಂದ ಆಹಾರವನ್ನು ತಯಾರಿಸಿ ಹಣ್ಣು, ತರಕಾರಿ, ಬೀಜಗಳನ್ನು ಹೇಗೆ ಒದಗಿಸುತ್ತವೆ ಎಂದು ಅರ್ಥಮಾಡಿಕೊಳ್ಳುವರು.
4. ಸಸ್ಯದ ವಿವಿಧ ಭಾಗಗಳ ಉಪಯೋಗಗಳನ್ನು ಅರ್ಥೈಸಿಕೊಂಡು ಪೂರ್ಣ ವಾಕ್ಯಗಳಲ್ಲಿ ವಿವರಿಸುವರು.
5. ಸಸ್ಯಗಳು ಮತ್ತು ಮಣ್ಣು ಒಂದನ್ನೊಂದು ಹೇಗೆ ಪೋಷಿಸುತ್ತವೆ; ಭೂಮಿ, ನೀರು ಮತ್ತು ಜನರನ್ನು ಸುರಕ್ಷಿತವಾಗಿಡಲು ಮರಗಳನ್ನು ಕಡಿಯಬೇಕಾದಾಗ ಜವಾಬ್ದಾರಿಯುತವಾಗಿರಬೇಕಾದುದು ಅಗತ್ಯ ವಿವರಿಸುವರು.
6. ಸಣ್ಣ ಗಿಡಗಳಿಗಾಗಿ ಕುಂಡವನ್ನು ಸಿದ್ಧಪಡಿಸಿ ಅದನ್ನು ನೆಡಲು ಕಲಿಯುವರು.

Scanned with CamScanner

ಉಪವಿಷಯ 5.1

# ಸಸ್ಯ ಪ್ರಪಂಚ



## ಕಲಿಕಾ ಉದ್ದೇಶಗಳು

- ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಕಂಡುಬರುವ ಮರಗಿಡಗಳನ್ನು ಗುರುತಿಸಿ ಹೆಸರಿಸುವರು.
- ಸಸ್ಯಗಳಲ್ಲಿ ಹೂವು ಮತ್ತು ಎಲೆಗಳಿರುತ್ತವೆ ಎಂದು ತಿಳಿಯುವರು.
- ಗಿಡಗಳು ಬೆಳೆಯಲು ಸೂರ್ಯನ ಬೆಳಕು, ನೀರು ಮತ್ತು ಮಣ್ಣಿನ ಅವಶ್ಯಕತೆಯಿದೆ ಎಂದು ಅರ್ಥಮಾಡಿಕೊಳ್ಳುವರು.
- ಸಸ್ಯಗಳ ಉಪಯೋಗಗಳನ್ನು ಸರಳವಾಗಿ ವಿವರಿಸುವರು. ಉದಾಹರಣೆಗೆ, ನೆರಳು, ಔಷಧಿ, ಆಹಾರ, ಅಲಂಕಾರ, ಪೀಠೋಪಕರಣ ನಿತ್ಯದ ಕೆಲಸಗಳಿಗೆ ಇತ್ಯಾದಿ.
- ಸಸ್ಯಗಳ ರಕ್ಷಣೆ ಹಾಗೂ ಪೋಷಣೆಯ ಕ್ರಮಗಳನ್ನು ಸರಳವಾಗಿ ವಿವರಿಸುವರು.



Scanned with CamScanner

ಸಂಭಾಷಣೆ 1

# ನಮ್ಮ ಸುತ್ತಮುತ್ತಲಿರುವ ಸಸ್ಯಗಳ ಬಗ್ಗೆ ತಿಳಿದುಕೊಳ್ಳುವುದು



## ಕಲಿಕಾ ಫಲಿತಗಳು

- ನಮ್ಮ ಪರಿಸರದಲ್ಲಿರುವ ಪ್ರತಿಯೊಂದೂ ಸಸ್ಯವೂ ಹೂವು ಮತ್ತು ಎಲೆಗಳನ್ನು ಹೊಂದಿದೆ ಎಂಬುದನ್ನು ಗುರುತಿಸುವುದು ಮತ್ತು ಹೆಸರಿಸುವರು.
- ಸಸ್ಯಗಳು ಬೆಳೆಯಲು ಸೂರ್ಯನ ಬೆಳಕು, ನೀರು ಮತ್ತು ಮಣ್ಣು ಬೇಕು ಎಂಬುದನ್ನು ಅರ್ಥಮಾಡಿಕೊಳ್ಳುವರು.




## ಕಲಿಕಾ ಸಾಮಗ್ರಿಗಳು

ಒಣಗಿದ ಎಲೆ, ಚಿಕ್ಕಪುಟ್ಟ ರೆಂಬೆಗಳು, ಹೂವು ಮತ್ತು ಬೀಜಗಳ ಸಂಗ್ರಹ, ಚಿತ್ರಪಟ P5.1.1–ವಿವಿಧ ರೀತಿಯ ಗಿಡಗಳು.

## ಶಿಕ್ಷಕರ ಪೂರ್ವಸಿದ್ಧತೆ

ಪೂರ್ವಭಾವಿಯಾಗಿ ಚಿತ್ರಪಟಗಳು ಮತ್ತು ಬೇಕಾಗುವ ಇತರೆ ಸಾಮಗ್ರಿಗಳನ್ನು ಸಿದ್ಧಪಡಿಸಿಕೊಳ್ಳುವರು.

ಪರಿಸರದಲ್ಲಿರುವ ಸಸ್ಯಗಳಿಗೆ ವೈವಿಧ್ಯಮಯವಾದ ಎಲೆಗಳ ರಚನೆ ಇರುವುದನ್ನು ಹಾಗೂ ಸ್ಥಳೀಯ ಪರಿಸರದಲ್ಲಿ ಆ ಸಸ್ಯಗಳಿಗಿರುವ ಹೆಸರುಗಳ ಬಗ್ಗೆ ನಿಮಗೆ ತಿಳಿದಿರಲಿ.

## ಸೂಚನೆಗಳು

### ಹಂತ 1: ವಿಷಯ ಪರಿಚಯಿಸಲು ಇಡೀ ತರಗತಿಗಾಗಿ ಚಟುವಟಿಕೆ

ಮಕ್ಕಳೇ, ಈ ದಿನ ನಮ್ಮ ಸುತ್ತಲಿನ ಪರಿಸರದಲ್ಲಿನ ಸಸ್ಯಗಳನ್ನು ನೋಡಲು ಹೋಗೋಣ ಎಂದು ಹೇಳುತ್ತಾ ದಾರಿಯಲ್ಲಿ ಹೋಗುವಾಗ ಏನೇನು ಕಾಣಬಹುದು ಎಂದು ಚರ್ಚಿಸೋಣ.

1. ನಿಮ್ಮ ಮನೆಯ ಹತ್ತಿರದಲ್ಲಿ, ಈ ಕೇಂದ್ರ/ಶಾಲೆಗೆ ಬರುವ ದಾರಿಯಲ್ಲಿ ಅಥವಾ ಶಾಲೆಯ ಕೈತೋಟದಲ್ಲಿ, ಎಲ್ಲಿಯಾದರೂ ಸಸ್ಯ/ಗಿಡಮರಗಳನ್ನು ನೋಡಿದ್ದೀರಾ?
2. ಯಾವ ರೀತಿಯ ಸಸ್ಯಗಳನ್ನು ನೋಡಿದ್ದೀರ? (ಈ ಸಂದರ್ಭದಲ್ಲಿ ಮಕ್ಕಳು, ಸಣ್ಣ ಗಿಡಗಳು, ದೊಡ್ಡ ಗಿಡಗಳು ಎಂದು ಹೇಳಬಹುದು. ಈ ಮೊದಲೇ ಶಾಲೆಗೆ ಬಂದಿದ್ದರೆ ಅವರು ಕೆಲವು ಗಿಡಗಳನ್ನು ಹೆಸರಿಸಬಹುದು.)
3. P5.1.1 ಚಿತ್ರಪಟವನ್ನು ತೋರಿಸಿ. (ವಿವಿಧ ರೀತಿಯ ಸಸ್ಯಗಳು) ಯಾವುದಾದರೂ ಗಿಡವನ್ನು ಗುರುತಿಸುವುದಕ್ಕೆ ಮತ್ತು ಹೆಸರಿಸುವುದಕ್ಕೆ ಮಕ್ಕಳಿಗೆ ಅವಕಾಶ ಮಾಡಿಕೊಡಿ.
4. ಅವರು ಗಿಡಗಳನ್ನು ಗುರುತಿಸಬಹುದು ಅಥವಾ ಅದರಲ್ಲಿ ಬೆಳೆಯುವ ಹಣ್ಣು ಅಥವಾ ತರಕಾರಿಯನ್ನು ಹೆಸರಿಸಬಹುದು. ಉದಾ: "ಇದು ಬಾಳೆ ಹಣ್ಣು, ಇದು ಬಾಳೆಯ ಗಿಡ" ಈ ರೀತಿ ಮಕ್ಕಳು ಒಂದಕ್ಕೊಂದು ಸಂಬಂಧ ಕಲ್ಪಿಸುವುದಕ್ಕೆ ಸಹಾಯ ಮಾಡಿ.
5. ಚಿತ್ರ ಪಟದಲ್ಲಿರುವ ಎಲ್ಲ ಪ್ರಮುಖ ಸಸ್ಯಗಳನ್ನು ತೋರಿಸಿ ನಾವು ಹೋಗುವ ದಾರಿಯಲ್ಲಿ ಈ ಗಿಡಗಳು ಕಾಣಿಸುತ್ತವೆಯೇ? ಎಂದು ಪ್ರಶ್ನಿಸಿ ಅವುಗಳನ್ನು ನೋಡಲು ತಿಳಿಸುವುದು.

### ಹಂತ 2: ಹೊರ ಸಂಚಾರ

ಗಿಡಗಳು ಬೆಳೆಯುವ ಸ್ಥಳಗಳಾದ ಕೈತೋಟ, ಆಟದ ಮೈದಾನದ ಸುತ್ತಮುತ್ತ ಅಥವಾ ಯಾವುದಾದರೂ ಮೈದಾನ ಪ್ರದೇಶಕ್ಕೆ ಮಕ್ಕಳ ಜೊತೆಗೆ ನಡೆದುಕೊಂಡು ಹೋಗುವುದು.

1. ವಿವಿಧ ರೀತಿಯ ಗಿಡಗಳನ್ನು ಮತ್ತು ಅವುಗಳ ಎಲೆಗಳನ್ನು ನೋಡುವಂತೆ ಮಕ್ಕಳಿಗೆ ತಿಳಿಸಿ. ಅವರು ನಡೆದುಕೊಂಡು ಬರುವ ಮೊದಲು ಚಿತ್ರಪಟದಲ್ಲಿ ನೋಡಿದ ಹೂವು ಮತ್ತು ಹಣ್ಣಿನ ಗಿಡಗಳು ಇಲ್ಲಿ ಇವೆಯೋ? ಎಂದು ನೋಡಲು ಹೇಳುವುದು.



Scanned with CamScanner



2. ಮಕ್ಕಳು ಈಗಾಗಲೇ ಗಾತ್ರದ ಬಗೆಗಿನ ಭಾಗಶಃ ಅಭ್ಯಾಸಗಳಲ್ಲಿ ಇದನ್ನು ಮಾಡಿರುವುದರಿಂದ ಗಿಡಗಳನ್ನು ದೊಡ್ಡ ಮತ್ತು ಸಣ್ಣ ಎಂದು ಚಿತ್ರಪಟದಿಂದ ವಿವರಿಸಲು ಸಮರ್ಥರಾಗಿರುತ್ತಾರೆ.
3. ನೆಲದ ಮೇಲೆ ಇರುವ ಹುಲ್ಲನ್ನು ತೋರಿಸಿ "ಇವೂ ಕೂಡಾ ಗಿಡಗಳೇ?" ಹುಲ್ಲು ತುಂಬಾ ಚಿಕ್ಕ ಗಿಡಕ್ಕೆ ಒಂದು ಉದಾಹರಣೆ ಎಂದು ವಿವರಿಸುವರು.
4. ನೆಲದ ಮೇಲೆ ಇರುವ ಹುಲ್ಲು, ಮರದಲ್ಲಿರುವ ಮತ್ತು ಮರದ ಕೆಳಗೆ ಬಿದ್ದಿರುವ ಎಲೆಗಳ ಬಣ್ಣವನ್ನು ಗಮನಿಸಲು ತಿಳಿಸಿ. ಕೆಲವು ಹೆಸರಿಸಲು ತಿಳಿಸುವುದು.
5. ಕೆಲವು ಉದುರಿದ/ಒಣಗಿದ ಎಲೆ, ಹೂವು, ರೆಂಬೆ ಇತ್ಯಾದಿಗಳನ್ನು ತೋರಿಸಿ. ಇವುಗಳು ಎಲ್ಲಿಂದ ಬಂದಿರುವುದೆಂದು ಊಹಿಸಲು ಹೇಳಿ. (ಮರಗಳಿಂದ ಬಿದ್ದಿರುವುದೆಂದು ಹೇಳುತ್ತಾರೆ, ಇಲ್ಲದಿದ್ದಲ್ಲಿ ಅದನ್ನು ವಿವರಿಸುವರು.)
6. ಮಕ್ಕಳಿಗೆ ನೆಲವನ್ನು ತೋರಿಸಿ. "ಗಿಡದ ಬೇರುಗಳು ಎಲ್ಲಿವೆ?" ಭೂಮಿ ಒಳಗೇನಿದೆ ಎಂಬ ಬಗ್ಗೆ ಅವರ ಯೋಚನೆ ಏನು? ಗಿಡಗಳು ಬೀಳದಂತೆ ಮಣ್ಣು ಹಿಡಿದಿಡುತ್ತದೆ ಎಂದು ವಿವರಿಸುವರು.
7. ನೆಲಕ್ಕೆ ಬಿದ್ದಿರುವ ಎಲೆಗಳು, ರೆಂಬೆಗಳು, ಮರದ ಮೇಲಿರುವ ಎಲೆಗಳನ್ನು ಮುಟ್ಟಿ ನೋಡಿ ವ್ಯತ್ಯಾಸವೇನೆಂಬುದನ್ನು ಹೋಲಿಸಲು ತಿಳಿಸಿ. ತಾಜಾ ಮತ್ತು ಒಣಗಿದ ಎಲೆಗಳಲ್ಲಿ ಕಂಡುಬರುವ ವ್ಯತ್ಯಾಸವನ್ನು ಗಮನಿಸಿ ವಿವರಿಸಲು ತಿಳಿಸುವುದು.
8. ಒಂದು ಕೈಯಲ್ಲಿ ತಾಜಾ ಎಲೆಯನ್ನು ಮತ್ತೊಂದು ಕೈಯಲ್ಲಿ ಒಣಗಿದ ಎಲೆಯನ್ನು ಹಿಡಿದುಕೊಂಡು ಪ್ರತಿಯೊಂದರ ತೂಕವನ್ನು ಗ್ರಹಿಸುವಂತೆ ತಿಳಿಸಿ. ಯಾವುದು ಹಗುರವಾಗಿದೆ? ಜೋರಾಗಿ ಗಾಳಿ ಬಂದಾಗ ಯಾವುದು ಹಾರುತ್ತದೆ? ಅದನ್ನು ಊದಿ ಪ್ರಯತ್ನಿಸಲು ಅವಕಾಶ ನೀಡುವುದು.
9. ಪ್ರತಿಯೊಬ್ಬರಿಗೂ ಒಂದಷ್ಟು ಎಲೆಗಳನ್ನು ಸಂಗ್ರಹಿಸಲು ತಿಳಿಸುವುದು.

### ಹಂತ 3: ಹೊರ ಸಂಚಾರದ ನಂತರದ ಸಂಭಾಷಣೆಗಳು

1. ಹೊರ ಸಂಚಾರದ ಬಗ್ಗೆ ವಿವರಿಸಲು ಮಕ್ಕಳಿಗೆ ತಿಳಿಸುವುದು. ಎಲ್ಲಿಗೆ ಹೋಗಿದ್ದೆವು? ಏನನ್ನು ನೋಡಿದೆವು? ನೀವು ನೋಡಿದ ಕೆಲವು ಗಿಡಗಳನ್ನು, ಚಿತ್ರಪಟ P5.1.1ರಲ್ಲಿ ತೋರಿಸುವಂತೆ ತಿಳಿಸುವುದು.
   - ಸಂಗ್ರಹಿಸಿದ ಎಲೆ ಮತ್ತು ರೆಂಬೆಗಳ ಬಗ್ಗೆ ವಿವರಿಸಲು ಹೇಳಿ. ಅದನ್ನು ಎಲ್ಲಿ ನೋಡಿದಿರಿ? ಇದು ಯಾವುದರಂತೆ ಕಾಣಿಸುತ್ತದೆ? "ಎಲೆಗಳು ಏಕೆ ಬಿದ್ದಿರುವುದು?" ಎಂದು ಮಕ್ಕಳನ್ನು ಕೇಳಿ. (ಅವು ಒಣಗಿರುವುದರಿಂದ ಬಿದ್ದಿವೆ ಎಂದು ಮಕ್ಕಳು ಹೇಳಬಹುದು.)
   - ನೀವು ಸಂಗ್ರಹಿಸಿದ ಕೆಲವು ಎಲೆಗಳನ್ನು ಮತ್ತು ಹೂವುಗಳನ್ನು ತೋರಿಸಿ ಹೊರಸಂಚಾರದಲ್ಲಿ ಮಕ್ಕಳು ಅವುಗಳನ್ನು ನೋಡಿದ್ದರಾ ಎಂದು ಕೇಳುವುದು.
2. ಎಲೆಗಳನ್ನು, ಹೂವುಗಳನ್ನು ನೋಡಲು ಮತ್ತು ಅವುಗಳನ್ನು ಹೋಲಿಸಲು ತಿಳಿಸಿ. ಅವೆಲ್ಲವೂ ಒಂದೇ ಗಿಡದ್ದಾಗಿದೆಯೇ? ಹೌದಾ / ಇಲ್ಲ, ಏಕೆ? ಅದಕ್ಕೆ ವಿವರಣೆ ಕೊಡಲು ತಿಳಿಸುವುದು. (ಎಲೆಗಳು ಮತ್ತು ರೆಂಬೆಗಳು ಬೇರೆ ಬೇರೆ ಗಿಡ ಗಳದ್ದು ಎಂದು ಹೇಳಿ. ನೀವು ಏಕೆ ಹಾಗೆ ಹೇಳುತ್ತಿದ್ದೀರಿ ಎಂದು ವಿವರಿಸಲು ಸಾಧ್ಯವೇ ಎಂದು ಕೇಳಿ.) ಎಲೆಗಳು ಮತ್ತು ರೆಂಬೆಗಳು ಒಂದೇ ಗಿಡದ್ದಾಗಿದ್ದರೆ ಒಂದೇ ಆಕಾರದಲ್ಲಿರುತ್ತವೆ ಮತ್ತು ಬೇರೆ ಬೇರೆ ಗಿಡದ್ದಾಗಿದ್ದರೆ ಬೇರೆ ಬೇರೆ ಆಕಾರದಲ್ಲಿರುತ್ತವೆ ಎಂದು ವಿವರಿಸಿ ಮುಕ್ತಾಯಗೊಳಿಸುವುದು.
3. ಬಾಯಾರಿಕೆಯಾದಾಗ ಏನು ಮಾಡುತ್ತಾರೆಂದು ಕೇಳಿ. ಅವರ ಉತ್ತರಕ್ಕೆ ನಿರೀಕ್ಷಿಸಿ ಮತ್ತು ನಾವು ನೀರು ಕುಡಿಯುವಂತೆಯೇ, ಗಿಡಗಳು ಹಸಿರಾಗಿರಲು ಮತ್ತು ಬೆಳೆಯಲು ನೀರು ಬೇಕು ಎಂದು ತಿಳಿಸುವುದು.
4. ನಮಗೆ ಹಸಿವು ಆದಾಗ ನಾವೇನು ಮಾಡುತ್ತೇವೆ ಎಂದು ಕೇಳಿ. ಅವರ ಉತ್ತರಕ್ಕೆ ನಿರೀಕ್ಷಿಸಿ. ನಮಗೆ ಹಸಿವಾದಾಗ ಹೇಗೆ ನಾವು ಆಹಾರ ತಿನ್ನುತ್ತೇವೆಯೋ ಹಾಗೆಯೇ ಸಸ್ಯಗಳಿಗೂ ಆಹಾರ ಬೇಕಾಗುತ್ತದೆ ಎಂದು ತಿಳಿಸುವುದು.
5. ಸಸ್ಯಗಳಿಗೆ ಮಣ್ಣಿನಿಂದ ದೊರೆಯುವ ನೀರು ಹಾಗೂ ಪೋಷಕಾಂಶಗಳ ಜೊತೆಗೆ ಸೂರ್ಯನ ಬೆಳಕಿನಿಂದ ಆಹಾರ ತಯಾರಿಸಿಕೊಳ್ಳುತ್ತವೆ ಎಂಬುದನ್ನು ವಿವರಿಸಿ.



Scanned with CamScanner

## ಸಂಭಾಷಣೆ 2


## ಗಿಡಗಳ ಉಪಯೋಗಗಳು



### ಕಲಿಕಾ ಫಲಿತಗಳು

- ಸಸ್ಯಗಳ ಮುಖ್ಯ ಉಪಯೋಗಗಳನ್ನು ಅರ್ಥಮಾಡಿಕೊಡಿಕೊಂಡು ಈ ಮುಂದೆ ನೀಡಿರುವ ಅಂಶಗಳನ್ನು ಸಂಪೂರ್ಣ ವಾಕ್ಯದಲ್ಲಿ ವಿವರಿಸುವರು – ನೆರಳು, ಆಹಾರ, ಅಲಂಕಾರ, ಪೀಠೋಪಕರಣಗಳಿಗೆ ಬಳಸುವುದು ಇತ್ಯಾದಿ.

### ಕಲಿಕಾ ಸಾಮಗ್ರಿಗಳು



- ಚಿತ್ರಪಟ P5.1.1: ವಿವಿಧ ರೀತಿಯ ಗಿಡಗಳು.
- ಮಿಂಚುಪಟ್ಟಿ (ಫ್ಲ್ಯಾಶ್ ಕಾರ್ಡ್) ಸರಣಿ F5.1.1-1, 2, 3, 4, 5, 6

1. ಮರದ ಹಲಗೆಯಿಂದ ಮಾಡಿದ ಬೇಲಿ.
2. ಮರದ ಕೆಳಗಡೆ ಕುಳಿತಿರುವ ಜನರು.
3. ಬಡಗಿ ಹಲಗೆಯನ್ನು ಕತ್ತರಿಸುತ್ತಿರುವುದು.
4. ಹೂಗಳಿಂದ ಅಲಂಕೃತಗೊಂಡ ಜಡೆ ಅಥವಾ ತುರುಬು.
5. ಕಟ್ಟಿಗೆ ಬಳಸಿ ಅಡುಗೆ ಮಾಡುತ್ತಿರುವುದು.
6. ಹೂ ಜೋಡಣೆಯಿರುವ ಕೊಠಡಿ, ಪೀಠೋಪಕರಣಗಳು, ಬಾಗಿಲುಗಳು, ಕಿಟಕಿಗಳು, ಹೂವಿನ ಹಾರವಿರುವ ಚಿತ್ರ, ಅಡಿಗೆಗೆ ಬೇಕಾದ ಸೌದೆ, ಮರದಿಂದ ತಯಾರಾದ ಕೆಲವು ಅಪರೂಪದ ವಸ್ತುಗಳು ಮತ್ತು ತಟ್ಟೆಯಲ್ಲಿರುವ ಹಸಿರು ಎಲೆಯ ತರಕಾರಿಗಳು.

### ಶಿಕ್ಷಕರ ಪೂರ್ವಸಿದ್ಧತೆ

ತರಗತಿಗೆ ಬೇಕಾಗುವ ಮಿಂಚುಪಟ್ಟಿಗಳು ಮತ್ತು ಇತರ ಸಲಕರಣೆಗಳನ್ನು ಮೊದಲೇ ತಯಾರಿಟ್ಟುಕೊಳ್ಳಿ.

### ಸೂಚನೆಗಳು

#### ಹಂತ 1: ಸಹಬಾಳ್ವೆಯ ಕಲ್ಪನೆಯ ಪರಿಚಯ

"ನಾವು ಏಕೆ ಸಸ್ಯಗಳನ್ನು ಪೋಷಿಸಬೇಕು? ಅವುಗಳನ್ನು ಪೋಷಿಸದಿದ್ದರೆ ಏನಾಗುತ್ತದೆ?" ಎಂದು ಗುಂಪನ್ನು ಪ್ರಶ್ನಿಸುವುದು. ಮಕ್ಕಳಿಗೆ ಯೋಚನೆ ಮಾಡಿ ವಿವಿಧ ಉತ್ತರಗಳನ್ನು ಹೇಳಲು ಅವಕಾಶ ಮಾಡಿಕೊಡುವುದು. ನಾವು ಪೋಷಿಸದಿದ್ದರೆ ಸಸ್ಯಗಳು ಉಳಿಯುವುದಿಲ್ಲ/ ಅವು ಸತ್ತು ಹೋಗಬಹುದು ಎಂಬ ಉತ್ತರಗಳನ್ನು ಅವರು ಕೊಡಬಹುದು.

ಸಸ್ಯಗಳು ನಮ್ಮನ್ನು ಪೋಷಿಸುತ್ತವೆಯೇ? ಸಸ್ಯಗಳು ನಮಗೆ ಏನು ಕೊಡುತ್ತವೆ ಎಂದು ನೀವು ಯೋಚಿಸಬಹುದೇ? ಎಂದು ಮಕ್ಕಳಿಗೆ ಹೇಳುವುದು. ಉತ್ತರ ಹೇಳಲು ಅವಕಾಶ ಕೊಡುವುದು.

#### ಹಂತ 2: ಸಸ್ಯಗಳ ವಿವಿಧ ಉಪಯೋಗಗಳನ್ನು ಚರ್ಚಿಸಿ

ಚಿತ್ರಪಟ P5.1.1ನ್ನು ತೋರಿಸಿ (ವಿವಿಧ ಸಸ್ಯಗಳು) ಸಸ್ಯಗಳು ಕೊಡುವ ಹಣ್ಣುಗಳ ಹೆಸರುಗಳು ತಿಳಿದಿವೆಯೇ? ಎಂದು ಕೇಳುವುದು. ಉದಾಹರಣೆಗೆ, ಮಾವಿನ ಮರದ ಚಿತ್ರ ತೋರಿಸಿ ಆ ಮರದ ಹೆಸರು ಮತ್ತು ಅದು ಬಿಡುವ ಹಣ್ಣಿನ ಹೆಸರನ್ನು ಊಹಿಸಲು ಹೇಳುವುದು. ನಮಗೆ ಹಣ್ಣುಗಳು ಏಕೆ ಬೇಕು? ಮಕ್ಕಳು ಬಹುಶಃ "ತಿನ್ನಲು" ಎಂದು ಹೇಳಬಹುದು. 'ಹಣ್ಣುಗಳು ನಮ್ಮನ್ನು ಆರೋಗ್ಯವಾಗಿಡುತ್ತವೆ ಮತ್ತು ಅವು ಸಿಹಿಯಾಗಿ ರುಚಿಯಾಗಿರುವುದರಿಂದ ನಮಗೆ ತಿನ್ನಲು ಖುಷಿಯಾಗುತ್ತದೆ' ಎಂದು ಅವರ ಉತ್ತರವನ್ನು ವಿಸ್ತರಿಸಿ ವಿವರಿಸುವರು.

- ಸಸ್ಯಗಳನ್ನು ಆಹಾರವಾಗಿ ಉಪಯೋಗಿಸುವುದಲ್ಲದೆ ಅವುಗಳ ಇತರೆ ಉಪಯೋಗಗಳನ್ನು ನಾವು ನೋಡೋಣ ಎಂದು ಅವರಿಗೆ ಹೇಳುವುದು.
- ತರಗತಿಯ ಮಕ್ಕಳನ್ನು 2 ಅಥವಾ 3 ಗುಂಪುಗಳಾಗಿ ವಿಂಗಡಿಸಿ. ಪ್ರತಿಯೊಂದು ಗುಂಪಿಗೂ F5.1.1 ಸರಣಿಯ ಒಂದು ಮಿಂಚುಪಟ್ಟಿಯನ್ನು ಕೊಟ್ಟು ಇದರಲ್ಲಿ ಏನಿದೆ? ಮತ್ತು ಗಿಡಗಳು, ಮರಗಳು ನಮಗೆ ಹೇಗೆ ಉಪಕಾರಿಯಾಗಿವೆ? ಎಂದು ವಿವರಿಸಲು ಹೇಳಿ. ಪ್ರತಿಯೊಂದು ಗುಂಪೂ ಪ್ರತಿಕ್ರಿಯಿಸಲು ಅವಕಾಶ ಮಾಡಿಕೊಡಿ ಮತ್ತು ಚರ್ಚೆಗೆ ಇನ್ನಷ್ಟು ಮಾಹಿತಿಯನ್ನು ಸೇರಿಸಿ.
- ಮಿಂಚುಪಟ್ಟಿಗಳನ್ನು ತೋರಿಸುವುದರೊಂದಿಗೆ ಸಸ್ಯಗಳ ಬೇರೆ ಬೇರೆ ಉಪಯುಕ್ತತೆಗಳನ್ನು ವಿವರಿಸುತ್ತಾ ಚರ್ಚೆಯನ್ನು ಪೂರ್ಣಗೊಳಿಸಿ.



Scanned with CamScanner

ಸಂಭಾಷಣೆ 3

# ಸಸ್ಯಗಳನ್ನು ಪೋಷಿಸುವುದು




## ಕಲಿಕಾ ಫಲಿತಗಳು

- ತಮ್ಮ ಸುತ್ತಮುತ್ತಲಿರುವ ಸಸ್ಯಗಳನ್ನು ಪೋಷಿಸುವ ವಿಧಾನವನ್ನು ತಿಳಿಯುವರು ಹಾಗೂ ಸರಿಯಾದ ಪ್ರಮಾಣದಲ್ಲಿ ನೀರುಣಿಸುವುದನ್ನು ಅಭ್ಯಾಸ ಮಾಡುವರು.

## ಕಲಿಕಾ ಸಾಮಗ್ರಿಗಳು

ಮಿಂಚುಪಟ್ಟಿಯ ಸರಣಿ F5.1.1-7, ಸಸ್ಯಗಳು, ಚಿಟ್ಟೆಗಳು ಮತ್ತು ಹುಲ್ಲು.




## ಶಿಕ್ಷಕರ ಪೂರ್ವಸಿದ್ಧತೆ

ತರಗತಿಗೆ ಅಗತ್ಯವಿರುವ ಮಿಂಚುಪಟ್ಟಿ ಹಾಗೂ ಇತರೆ ಸಲಕರಣೆಗಳನ್ನು ಮೊದಲೇ ಸಿದ್ಧಪಡಿಸಿಟ್ಟುಕೊಳ್ಳುವುದು.

## ಸೂಚನೆಗಳು

ಈ ಕೆಳಗಿನ ಸಂಭಾಷಣೆಯನ್ನು ಆರಂಭಿಸಿ.

1. ನಾವು ಸಂತೋಷದಿಂದ ಇರಲು ಹಾಗೂ ಬೆಳವಣಿಗೆ ಹೊಂದಲು ಯಾವ ವಸ್ತುಗಳು ಬೇಕು. ಮಕ್ಕಳು ಏನಾದರೂ ಹೇಳಲು ಅವಕಾಶ ಮಾಡಿಕೊಡಿ. ಹೆಚ್ಚು ಹೆಚ್ಚು ಉತ್ತರಗಳು ಸಿಕ್ಕುವವರೆಗೆ ಕೇಳುತ್ತಲೇ ಇರಿ. ಎಲ್ಲಾ ಮಕ್ಕಳಿಗೂ ಹೇಳಲು ಅವಕಾಶ ಮಾಡಿಕೊಡುವುದು.
2. ಯಾವುದು ನಿಮಗೆ ಸಂತೋಷವನ್ನುಂಟುಮಾಡುತ್ತದೆ? ಮಿಂಚುಪಟ್ಟಿ F5.1.1-7 ತೋರಿಸಿ. ಸಸ್ಯಗಳಿಗೆ ಆರೈಕೆ ಮಾಡಲು ಜನರು ಬೇಕು. ಚಿಟ್ಟೆಗಳು ಹೂವುಗಳಿಗೆ ಸ್ನೇಹಿತ. ಅವುಗಳನ್ನು ಓಡಿಸಿದರೆ ಹೂವಿಗೆ ಬೇಸರವಾಗುತ್ತದೆ ಎಂದು ವಿವರಿಸುವರು.
3. ಸಸ್ಯಗಳು ತಮ್ಮ ಆಹಾರ ಮತ್ತು ನೀರನ್ನು ಹೇಗೆ ಪಡೆಯುತ್ತವೆ? ಎಂದು ಕೇಳುವುದರೊಂದಿಗೆ ಸಂಭಾಷಣೆಯನ್ನು ಮುಂದುವರಿಸಿ.
4. ಒಂದು ವೇಳೆ ಮಳೆ ಬರದಿದ್ದರೆ ಭೂಮಿಯಲ್ಲಿ ನೀರು ಇರುವುದಿಲ್ಲ. ಆಗ ನಾವೇನು ಮಾಡಬೇಕು?
5. ನಾವು ಸಸ್ಯಗಳನ್ನು ಹೇಗೆ ಆರೈಕೆ ಮಾಡಬಹುದು ಎಂದು ವಿವರಿಸಬಲ್ಲಿರಾ?
6. ಮಕ್ಕಳು ಉತ್ತರಿಸಲು ಅವಕಾಶ ಮಾಡಿಕೊಡಿ. 'ಸಸ್ಯಗಳಿಗೆ ನೀರು ಹಾಕುವುದನ್ನು' ಸೇರಿಸಿಕೊಂಡು ಉತ್ತರವನ್ನು ಕ್ರೋಢೀಕರಿಸಿ ಉತ್ತರಿಸಿ.



Scanned with CamScanner

ಯೋಜನಾ ಕಾರ್ಯ 1

## ಸಸ್ಯದ ಮಾದರಿ ಚಿತ್ರಗಳನ್ನು ಸಂಗ್ರಹಿಸುವುದು

### ಕಲಿಕಾ ಫಲಿತಗಳು

ಈ ವಿಷಯದ ಕೊನೆಯಲ್ಲಿ "ನಮ್ಮ ಸುತ್ತಮುತ್ತಲಿನ ಸಸ್ಯಗಳು" ಎಂಬ ಸಸ್ಯಮಾದರಿಗಳ ಚಿತ್ರ ಸಂಗ್ರಹ ಮಾಡುವುರು.

### ಕಲಿಕಾ ಸಾಮಗ್ರಿಗಳು

ಎಲೆಗಳು, ರೆಂಬೆಗಳು ಮತ್ತು ಹೂವಿನ ದಳಗಳು, ಎ4 ಅಳತೆಯ ಕಾಗದದ ಹಾಳೆಗಳು, ಬಣ್ಣದ ಪೆನ್ಸಿಲುಗಳು ಮತ್ತು ಅಂಟು.

### ಸೂಚನೆಗಳು

1. "ನಮ್ಮ ಸುತ್ತಮುತ್ತಲಿನ ಸಸ್ಯಗಳು" ಎಂಬ ಶೀರ್ಷಿಕೆ ಒಂದು ಪುಸ್ತಕ ಮಾಡಬಹುದು ಎಂದು ಮಕ್ಕಳಿಗೆ ಹೇಳುವುದು ಮತ್ತು ಇದಕ್ಕಾಗಿ ಅವರು ಸಸ್ಯಗಳಿಗೆ ಸಂಬಂಧಿಸಿದ ಎಲೆಗಳು, ಕಾಂಡಗಳು, ಹೂವುಗಳು ಅಥವಾ ಹೂವಿನ ದಳಗಳು ಮುಂತಾದ ವಿವಿಧ ವಸ್ತುಗಳನ್ನು ಸಂಗ್ರಹಿಸಿ ತರುವಂತೆ ತಿಳಿಸುವುದು.
2. ವಿವಿಧ ಭಾಗಗಳನ್ನು ಬೇರೆ ಬೇರೆ ಗುಂಪುಗಳಾಗಿ ಪ್ರತ್ಯೇಕಿಸಿ ಜೋಡಿಸಲು ಅವಕಾಶ ನೀಡುವುದು.
3. 2 ಅಥವಾ 3 ಮಕ್ಕಳ ಗುಂಪುಗಳಾಗಿ ಕೆಲಸ ಮಾಡಲು ತಿಳಿಸುವುದು.
4. ಬೇಕಾಗುವಷ್ಟು ಎ4 ಅಳತೆಯ ಹಾಳೆಯನ್ನು ತೆಗೆದುಕೊಂಡು ಒಂದು ಅಡ್ಡಗೆರೆಯನ್ನು ಎಳೆದು ಭೂಮಿಯ ಮೇಲೆ ಮತ್ತು ಭೂಮಿಯ ಒಳಗೆ ಇರುವ ಸಸ್ಯದ ಭಾಗಗಳನ್ನು ಅಂಟಿಸಲು ಹೇಳುವುದು.
5. ಮಧ್ಯಭಾಗದ ಕಾಂಡ ಮತ್ತು ರೆಂಬೆಯನ್ನು ತೋರಿಸಲು ಒಂದು ಗೆರೆಯನ್ನು ಎಳೆಯುವುದು.
6. ಮಧ್ಯದ ಕಾಂಡ ಮತ್ತು ಕೊಂಬೆಗಳಿಗೆ ರೆಂಬೆಗಳನ್ನು ಅಂಟಿಸಲು ಮಕ್ಕಳಿಗೆ ತಿಳಿಸುವುದು.
7. ಒಂದೇ ಗಿಡದ ಎಲೆ ಮತ್ತು ಹೂವಿನ ದಳಗಳು ಅವರ ಬಳಿ ಇದ್ದರೆ ಅವನ್ನು ರೆಂಬೆಗಳಿಗೆ ಅಂಟಿಸಲು ತಿಳಿಸಿ. ಅವರು ಬೇರುಗಳನ್ನು ಬರೆಯಬಹುದು ಅಥವಾ ಕೆಳಗೆ ಅಂಟು ಹಾಕಿ ಮಣ್ಣಿನ ಕಣಗಳನ್ನು ಅಂಟಿಸಬಹುದು.
8. ಅವರು ಏನೇನು ಮಾಡಿದರು ಎಂದು ವಿವರಿಸಲು ಮಕ್ಕಳಿಗೆ ಅವಕಾಶ ಮಾಡಿಕೊಡುವುದು.
9. ಗಿಡಗಳ ಹೆಸರುಗಳನ್ನು ಮೇಲ್ಭಾಗದಲ್ಲಿ ಹಾಗೂ ಕೆಳಗೆ ಮಕ್ಕಳ ಹೆಸರನ್ನು ಬರೆಯುವುದು.
10. ಅವುಗಳೆಲ್ಲವನ್ನೂ ಸೇರಿಸಿ ಪಿನ್ ಹಾಕಿ ಅದಕ್ಕೆ ಮುಖಪುಟವನ್ನು ಜೋಡಿಸಿ 'ಓದುವ ಮೂಲೆ'ಯಲ್ಲಿ ಇಡುವುದು.





Scanned with CamScanner

## ಶಿಶುಗೀತೆಗಳ ಸೂಚನೆಗಳು

### ಕಲಿಕಾ ಫಲಿತಗಳು

"ಹಣ್ಣಿನ ಗಿಡ" ಎಂಬ ಶಿಶುಗೀತೆಯನ್ನು ಸರಿಯಾದ ಪದಗಳು, ಉಚ್ಚಾರಣೆ ಮತ್ತು ಅಭಿನಯಗಳೊಂದಿಗೆ ಹಾಡಲು ಕಲಿಯುವರು.

### ಶಿಕ್ಷಕರ ಪೂರ್ವಸಿದ್ಧತೆ

ಶಿಶುಗೀತೆಯನ್ನು ರಾಗ ಮತ್ತು ಹಾವಾಭಾವದೊಂದಿಗೆ ಅಭ್ಯಾಸ ಮಾಡಿಕೊಳ್ಳುವರು.

### ಸೂಚನೆಗಳು

1. ಶಿಶುಗೀತೆ "ಹಣ್ಣಿನ ಗಿಡ" ವನ್ನು ಪರಿಚಯಿಸಿ ಅದು ಯಾವುದರ? ಬಗ್ಗೆ ಇದೆ ಎಂದು ವಿವರಿಸುವರು.
2. ಶಿಶುಗೀತೆಯನ್ನು ಲಯಬದ್ಧವಾಗಿ ಭಾವಾಭಿನಯದೊಂದಿಗೆ ರಾಗವಾಗಿ ಮತ್ತು ಪೂರ್ತಿಯಾಗಿ ಮಕ್ಕಳು ಕೇಳಿಸಿಕೊಳ್ಳುವಂತೆ ಹಾಡುವರು.
3. ಗೀತೆಯ ಪ್ರತಿಯೊಂದು ಸಾಲನ್ನೂ ನೀವು ಹಾಡಿದ ಮೇಲೆ ಹಾಡುವಂತೆ ಮಕ್ಕಳಿಗೆ ಹೇಳುವರು ಮತ್ತು ಚಿತ್ರವನ್ನು ತೋರಿಸಿ ಅದರ ಅರ್ಥವನ್ನು ವಿವರಿಸುವರು.
4. ಶಿಶುಗೀತೆಯನ್ನು ಅಭಿನಯಿಸಿ ತೋರಿಸಿ ಮತ್ತು ಅದನ್ನು ಮಕ್ಕಳು ಅನುಸರಿಸಲು ಹೇಳುವರು.
5. ಈಗ ನಿಮ್ಮ ಜೊತೆಗೆ ಅಭಿನಯ ಮಾಡುತ್ತಾ, ಹಾಡಲು ಹೇಳುವರು.
6. ಮಕ್ಕಳು ಗುಂಪಿನಲ್ಲಿ ಅಥವಾ ಒಬ್ಬೊಬ್ಬರಾಗಿ ಹಾಡಲು ಪ್ರೋತ್ಸಾಹಿಸುವರು.




Scanned with CamScanner

ಶಿಶುಗೀತೆ 1

## ಹಣ್ಣಿನ ಗಿಡ

### ಹಣ್ಣಿನ ಗಿಡ

ಗಿಡವೇ ಗಿಡವೇ
ಹಸಿರು ಗಿಡವೇ
ಗೊಬ್ಬರ ಇಟ್ಟು
ನೀರನು ಕೊಟ್ಟು
ದಿನ ದಿನ ಬೆಳೆವೆ
ತಂಪನು ನೀಡುತಾ
ಕಂಪನು ಬೀರುತಾ
ನೆರಳನು ಕೊಡುವೆ
ಹಸಿವನು ನೀಗಲು
ಹಣ್ಣನು ಕೊಡುವೆ
ಗಿಡವೇ ಗಿಡವೇ
ಹಣ್ಣಿನ ಗಿಡವೇ



ಶಿಶುಗೀತೆ 2

## MY GARDEN

### MY GARDEN

This is my garden
I plant it with care
Here are the seeds
I'll plant in there
The sun will shine
The rain will fall
And the seeds will sprout
And grow up tall





Scanned with CamScanner

ಶಿಶುಗೀತೆ 3

## FLOWERS



### FLOWERS

Sing a song of flowers
Flowers all around
Flowers that are growing
Growing in the ground
Can you see the colours?
Of the little flowers?
Orange pink and blue
They look so pretty too!!

ಶಿಶುಗೀತೆ 4

## ಹಣ್ಣಿನ ಗಿಡ




### A LITTLE SEED

A little seed for me to sow
A little soil to make it grow
A little sun a little shower
A little care
And then a flower



Scanned with CamScanner

## ಮಾಲೂ, ಕಾಲೂ ಮತ್ತು ಆಲೂ



### ಕಲಿಕಾ ಫಲಿತಗಳು

"ಮಾಲೂ, ಕಾಲೂ ಮತ್ತು ಆಲೂ" ಈ ಕಥೆಯನ್ನು ಅರ್ಥಮಾಡಿಕೊಂಡು, ಗ್ರಹಿಸಿ, ನೆನಪಿಸಿಕೊಂಡು, ಊಹಿಸಿ ಸರಳ ಪ್ರಶ್ನೆಗಳಾದ "ಏನು?, ಏಕೆ?, ಹೇಗೆ? ಮತ್ತು ಯಾವಾಗ?" ಇವುಗಳಿಗೆ ಉತ್ತರಿಸುವರು.

### ಶಿಕ್ಷಕರ ಪೂರ್ವಸಿದ್ಧತೆ

ಕಥೆಯನ್ನು ಮೊದಲೇ ಓದಿ ಅದನ್ನು ಸರಿಯಾಗಿ ಅರ್ಥೈಸಿಕೊಳ್ಳುವುದು ಹಾಗೂ ಕಥೆಯನ್ನು ಧ್ವನಿಯ ಏರಿಳಿತಗಳೊಂದಿಗೆ ಹೇಳುವುದನ್ನು ಅಭ್ಯಾಸ ಮಾಡಿಕೊಳ್ಳುವುದು.

### ಕಲಿಕಾ ಸಾಮಗ್ರಿಗಳು

ಕಥೆ ಪುಸ್ತಕ.




### ಕಥೆಯ ಸಂಕ್ಷಿಪ್ತ ರೂಪ

**ಮಾಲೂ, ಕಾಲೂ ಮತ್ತು ಆಲೂ**

ಮಾಲೂ ಮೊದಲನೆಯ ಸಲ, ತೋಟದಲ್ಲಿ ತರಕಾರಿಗಳನ್ನು ಕೀಳುತ್ತಿದ್ದಾನೆ. ಅವನು ಕೆಂಪನೆಯ ಟೊಮೇಟೊ, ಉದ್ದನೆಯ ನೀಲಿ ಬದನೆ, ಮತ್ತು ಹಸನಾದ ಹಸುರು ಬೆಂಡೆಕಾಯಿಗಳನ್ನು ಆರಿಸುತ್ತಿದ್ದನು.

"ಒಳ್ಳೆ ಕೆಲಸ ಮಾಡಿರುವೆ ಮಾಲೂ! ಹಾಗೇ ಒಂದಿಷ್ಟು ಆಲೂಗೆಡ್ಡೆಗಳನ್ನೂ ತಾ," ಎಂದು ಹೇಳಿದರು ಅಜ್ಜಿ.

ಮಾಲೂ ಎಲ್ಲ ಗಿಡ, ಮರ, ಬಳ್ಳಿಗಳನ್ನು ನೋಡಿದನು.

ಒಂದೂ ಆಲೂಗೆಡ್ಡೆ ಕಾಣಲಿಲ್ಲ.

ಮಾಲೂ ಖಾಲೀ ಬುಟ್ಟಿಯನ್ನು ಕೆಳಗಿಡುತ್ತಾ, "ಅಜ್ಜೀ, ಆಲೂಗೆಡ್ಡೆಗಳು ಇನ್ನೂ ಬಿಟ್ಟಿಲ್ಲ," ಎಂದನು. " ಹೇ ಇಲ್ಲ, ಮಾಲೂ, ಅಲ್ಲಿ ಎಷ್ಟೊಂದು ಆಲೂಗೆಡ್ಡೆಗಳು ಇವೆ. ಸರಿಯಾಗಿ ನೋಡು," ಎಂದರು ಅಜ್ಜಿ.

ಮಾಲೂ ಇನ್ನೊಂದು ಬಾರಿ ತೋಟಕ್ಕೆ ಹೋದನು.

ಕಾಲೂ ಕೂಡ ಅವನ ಹಿಂದೆ ಹೊರಟನು.

ಮಾಲೂ ಆಲೂಗೆಡ್ಡೆ ಹುಡುಕುವಾಗ, "ವೂಫ್! ವೂಫ್!" ಎಂಬ ಸದ್ದು ಕೇಳಿಸಿತು.

"ಕಾಲೂ! ನಿಲ್ಲಿಸು, ಕಾಲೂ! ತೋಟವನ್ನು ಹಾಳು ಮಾಡಬೇಡ," ಎಂದು ಮಾಲೂ ಅವನ ಹಿಂದೆ ಓಡುತ್ತಾ ಕೂಗಿಕೊಂಡನು. ಕಾಲೂ ಮಣ್ಣನ್ನು ಕೆದಕುತ್ತಿರುವುದನ್ನು ಮಾಲೂ ನೋಡುತ್ತಿದ್ದಂತೆಯೇ, ಆ ಮಣ್ಣಿನಿಂದ ಏನು ಹೊರಬಂತು ಗೊತ್ತಾ?

ದೊಡ್ಡ ದಪ್ಪನೆ ಆಲೂಗೆಡ್ಡೆಗಳು!

"ಒಳ್ಳೆಯ ಕೆಲಸ ಮಾಡಿದೆ ಕಾಲೂ, ನೀನೇ ಆಲೂಗೆಡ್ಡೆಗಳನ್ನು ಕಂಡುಹಿಡಿದುಬಿಟ್ಟೆ!"

ಎಂದು ಮಾಲೂ ಪೆಚ್ಚು ನಗೆ ನಗುತ್ತಾ ಆಲೂಗೆಡ್ಡೆಗಳನ್ನು ಬುಟ್ಟಿಗೆ ತುಂಬಿಕೊಂಡನು.



Scanned with CamScanner

## ಮಾಲೂ, ಕಾಲೂ ಮತ್ತು ಆಲೂ



### ಸೂಚನೆಗಳು:

ಹಂತ 1. ಮೇಲಿನ ಕಥೆಯನ್ನು ಪರಿಚಯಿಸುವುದು (ಮಕ್ಕಳೊಂದಿಗೆ ವಿಷಯದ ಬಗ್ಗೆ ಚರ್ಚಿಸುತ್ತಾ ಅದನ್ನು ಅವರ ದಿನನಿತ್ಯದ ಅನುಭವಗಳಿಗೆ ಹೋಲಿಸುವುದು. ಹಾಗೂ ಪುಸ್ತಕದ ಮುಖಪುಟವನ್ನು ತೋರಿಸುತ್ತಾ ಕಥೆ ಯಾವುದರ? ಇರಬಹುದು ಎಂದು ಚರ್ಚಿಸುವರು.)

ಹಂತ 2. ಶಿಕ್ಷಕರು ಕತೆಯನ್ನು ಹಾವಾಭಾವದಿಂದ ಧ್ವನಿಯ ಏರಿಳಿತಗಳೊಂದಿಗೆ ಎಲ್ಲರಿಗೂ ಕೇಳಿಸುವಂತೆ ಹೇಳುವುದು.

ಹಂತ 3. ಕಥೆ ಓದುತ್ತಾ ಅದಕ್ಕೆ ಸಂಬಂಧಿಸಿದ ಪ್ರತಿಧ್ವನಿ ಪ್ರಶ್ನೆಗಳನ್ನು ಕೇಳುತ್ತಾ ಮತ್ತು ಮುಖ್ಯ ಪದಗಳನ್ನು ವಿವರಿಸುತ್ತಾ ಕಥೆಯಲ್ಲಿನ ಮುಖ್ಯ ಪಾತ್ರಗಳು ಹಾಗೂ ಘಟನೆಗಳ ಕಡೆಗೆ ಗಮನ ಸೆಳೆಯುವರು.

ಕಥೆಗೆ ಸಂಬಂಧಿಸಿದ ಪ್ರಶ್ನೆಗಳ ಕೆಲವು ಉದಾಹರಣೆಗಳು:

- ಮಾಲೂ ಅವನ ಅಜ್ಜಿಯ ಮನೆಗೆ ಹೋದನು. ಮಾಲೂ ಎಲ್ಲಿಗೆ ಹೋದನು?
- ಮಾಲೂ ತರಕಾರಿಯನ್ನು ಕೀಳಲು ತೋಟಕ್ಕೆ ಹೋದನು. ಮಾಲೂ ಎಲ್ಲಿಗೆ ಹೋದನು?
- ಮಾಲೂ ಕೆಂಪು ಟೊಮ್ಯಾಟೊ ಮತ್ತು ಬದನೆಕಾಯಿಯನ್ನು ಕಿತ್ತನು. ಮಾಲೂ ಏನನ್ನು ಕಿತ್ತನು?

ಹಂತ 4. ಕಥೆಯ ಕೊನೆಯಲ್ಲಿ ಅವರ ಗ್ರಹಿಕೆ ಮತ್ತು ನೆನಪಿಟ್ಟುಕೊಳ್ಳುವಿಕೆಯನ್ನು ಪರೀಕ್ಷಿಸಲು ಕೆಲವು ಸರಳ ಪ್ರಶ್ನೆಗಳನ್ನು ಕೇಳಿ. ನೆನಪಿಟ್ಟುಕೊಳ್ಳುವಿಕೆಯ ಪ್ರಶ್ನೆಗಳಿಗೆ ಉದಾಹರಣೆ: ಮಾಲೂ ನೋಡಿದ ತರಕಾರಿಗಳು ಯಾವುವು?

ಹಂತ 5. ಮಕ್ಕಳು ಕಥೆಯಲ್ಲಿನ ಪಾತ್ರಗಳೊಂದಿಗೆ ಸಂವೇದನೆಯನ್ನು ವ್ಯಕ್ತಪಡಿಸುವಂತಹ ಸರಳ ಪ್ರಶ್ನೆಗಳನ್ನು ಕೇಳುವುದು.

- ಆಲೂಗಡ್ಡೆಗಳು ಕಾಣದಿದ್ದಾಗ ಮಾಲೂ ಏನೆಂದುಕೊಂಡ ಎಂದು ಭಾವಿಸುತ್ತೀರ?
- ಕಾಲೂ ಅವನಿಗೆ ಆಲೂಗಡ್ಡೆ ತೋರಿಸಿದಾಗ ಅವನು ಏನೆಂದುಕೊಂಡ?

ಹಂತ 6. ಮಕ್ಕಳು ಊಹಿಸಿಕೊಂಡು ಹೇಳಬೇಕಾದ ಪ್ರಶ್ನೆಗಳನ್ನು ಕೇಳಿ.

- ಮಾಲೂವಿಗೆ ಏಕೆ ಆಲೂಗಡ್ಡೆಗಳು ಕಾಣಿಸಲಿಲ್ಲ? ಕೊನೆಗೆ ಅವನಿಗೆ ಎಲ್ಲಿ ಅದು ಕಾಣಿಸಿತು?
- ಎಲ್ಲಾ ಸಸ್ಯಗಳು ಒಂದೇ ರೀತಿಯಾಗಿ ಕಾಣಿಸುತ್ತವೆಯೇ? ಮತ್ತು ಎಲ್ಲಾ ತರಕಾರಿಗಳು/ಹಣ್ಣುಗಳು ಒಂದೇ ರೀತಿಯಾಗಿ ಬೆಳೆಯುತ್ತವಯೇ? ಮಾಲೂವಿನ ತೋಟದಲ್ಲಿದ್ದ ಕೆಲವು ತರಕಾರಿಗಳ ಉದಾಹರಣೆ ಕೊಡುತ್ತೀರಾ?
- ಹಣ್ಣು ಮತ್ತು ತರಕಾರಿಗಳನ್ನು ಬೆಳೆಸಲು ಮತ್ತು ತೋಟವು ಚೆನ್ನಾಗಿ ಕಾಣಲು ಏನು ಮಾಡಬೇಕು? ಎಂದು ಕೇಳಿ ಉತ್ತರ ಪಡೆಯುವುದು. (ಹೂಗಳನ್ನು ಕೀಳುವುದು. ಚಿಟ್ಟೆಗಳನ್ನು ಓಡಿಸುವುದು ಮತ್ತು ಹುಲ್ಲನ್ನು ಕೀಳುವುದು ಕೈತೋಟದ ಅಂದವನ್ನು ಕಡಿಮೆಗೊಳಿಸುತ್ತದೆ ಎಂದು ಹೇಳಿ ಸಸ್ಯಗಳಲ್ಲಿ ಎಲೆಗಳನ್ನು ಹೂಗಳನ್ನು ಕೀಳಬಾರದೆಂದು ತಿಳಿ ಹೇಳುವುದು.)

ಹಂತ 7. ಮಕ್ಕಳು ತಮ್ಮದೇ ಮಾತುಗಳಲ್ಲಿ 2 ರಿಂದ 4 ವಾಕ್ಯಗಳಲ್ಲಿ ಕಥೆಯನ್ನು ಹೇಳಲು ಸಹಾಯ ಮಾಡುವುದು.



Scanned with CamScanner

ಚಟುವಟಿಕೆ 1


## ಹೂಗುಚ್ಛ ಮಾಡುವುದು (ಚಿತ್ರ ಬರೆಯುವುದು ಮತ್ತು ಅಂಟಿಸುವುದು)

### ಕಲಿಕಾ ಸಾಮಗ್ರಿಗಳು

ಅಭ್ಯಾಸ ಹಾಳೆ, ಪೆನ್ಸಿಲ್‌ನ ಸಿಪ್ಪೆಗಳು, ಅಂಟು, ಬಣ್ಣದ ಪೆನ್ಸಿಲ್‌ಗಳು

### ಸೂಚನೆಗಳು

1. ಪ್ರತಿಯೊಬ್ಬ ಮಗುವಿಗೂ ಒಂದು ಅಭ್ಯಾಸ ಹಾಳೆ ಕೊಡುವುದು.
2. ಪೆನ್ಸಿಲ್‌ನ ಸಿಪ್ಪೆಗಳು ಮತ್ತು ಅಂಟನ್ನು ಕೊಡುವುದು.
3. ಹಾಳೆಯ ಮೇಲೆ ಪೆನ್ಸಿಲ್‌ನ ಸಿಪ್ಪೆಗಳನ್ನು ಒಂದರಿಂದ ಇನ್ನೊಂದು ಸ್ವಲ್ಪ ದೂರದಲ್ಲಿರುವಂತೆ ಅಂಟಿಸಲು ಹೇಳುವುದು.
4. ಹೂವಿನ ತೊಟ್ಟಿನ ಹಾಗೆ ಕಾಣುವಂತೆ ಬಣ್ಣದ ಪೆನ್ಸಿಲ್‌ನಿಂದ ಗೆರೆಗಳನ್ನು ಎಳೆದು ತೋರಿಸುವುದು.
5. ಚಿತ್ರವನ್ನು ಹೇಗೆ ಮಾಡಿದರೆಂದು ವಿವರಿಸಲು ಹೇಳಿ, ಹಾಳೆಯ ಕೆಳಭಾಗದಲ್ಲಿ ಮಗುವಿನ ಹೆಸರು ಬರೆದು ತರಗತಿಯಲ್ಲಿ ನೇತುಹಾಕುವುದು.
6. ಮಕ್ಕಳಿಗೆ ಈ ಚಟುವಟಿಕೆ ಇಷ್ಟವಾಯಿತೇ ಎಂದು ಕೇಳುವುದು. ನಿಮ್ಮ ಬೆನ್ನು ನೀವೇ ತಟ್ಟಿಕೊಂಡು ಮಕ್ಕಳಿಗೆ ಅದೇ ರೀತಿ ಅನುಸರಿಸಿ “ಶಹಭಾಸ್” ಎಂದು ಹೇಳಿಕೊಳ್ಳಲು ಹೇಳುವುದು.





Scanned with CamScanner

ಚಟುವಟಿಕೆ 2

## ಚಿಟ್ಟೆ ಮಾಡುವುದು (ಕೈ ಅಚ್ಚಿನಿಂದ ಅಂಟಿಸುವುದು)

### ಕಲಿಕಾ ಸಾಮಗ್ರಿಗಳು

ಅಭ್ಯಾಸ ಹಾಳೆ, ಬಣ್ಣಗಳು, ಬಣ್ಣದ ಪೆನ್ಸಿಲ್‌ಗಳು

### ಸೂಚನೆಗಳು

1. ಅಭ್ಯಾಸ ಹಾಳೆಗಳನ್ನು ಮಕ್ಕಳಿಗೆ ಕೊಡುವರು.
2. ಒಂದು ತಟ್ಟೆಯಲ್ಲಿ ಯಾವುದಾದರೂ ಎರಡು ಬಣ್ಣಗಳನ್ನು ಕೊಡುವರು.
3. ಎರಡು ಬೇರೆ ಬೇರೆ ಬಣ್ಣಗಳಲ್ಲಿ ತಮ್ಮ ಎರಡೂ ಅಂಗೈಗಳನ್ನು ಅದ್ದಿಕೊಳ್ಳಲು ಮಕ್ಕಳಿಗೆ ಹೇಳುವರು.
4. ಎರಡೂ ಕೈಗಳ ಹೆಬ್ಬೆರಳುಗಳನ್ನೂ ಸೇರಿಸಿ ಅಂಗೈಯನ್ನು ಜಾಗರೂಕತೆಯಿಂದ ಹಾಳೆಯ ಮೇಲೆ ಇಡುವಂತೆ ತಿಳಿಸುವರು.
5. ಕೈಗಳನ್ನು ಸ್ವಚ್ಛವಾಗಿ ತೊಳೆದುಕೊಳ್ಳಲು ಹೇಳುವರು.
6. ಚಿಟ್ಟೆಯ ಸ್ಪರ್ಶತಂತುವಿನ ಹಾಗೆ ಕಾಣುವಂತೆ ಎರಡು ಗೆರೆಗಳನ್ನು ಬರೆಯಲು ಹೇಳುವರು.
7. ಈ ಚಿತ್ರ ಮಾಡಲು ಅವರು ಅನುಸರಿಸಿದ ಹಂತಗಳನ್ನು ವಿವರಿಸಲು ಮತ್ತು ಬಳಸಿದ ಬಣ್ಣಗಳ ಹೆಸರುಗಳನ್ನು ಹೇಳಲು ಹೇಳುವುದು. ಅವನ/ಳ ಹೆಸರನ್ನು ಹಾಳೆಯ ಕೆಳಭಾಗದಲ್ಲಿ ಬರೆದು ತರಗತಿಯಲ್ಲಿ ತೂಗುಹಾಕುವರು.
8. ಮಕ್ಕಳಿಗೆ ಈ ಚಟುವಟಿಕೆ ಇಷ್ಟವಾಯಿತೇ ಎಂದು ಕೇಳುವುದು. ತಮ್ಮ ಬೆನ್ನನ್ನು ತಾವೇ ತಟ್ಟಿಕೊಂಡು "ಶಹಭಾಸ್" ಎಂದು ಹೇಳಿಕೊಳ್ಳಲು ಹೇಳುವರು.





Scanned with CamScanner

ಚಟುವಟಿಕೆ 1

## ಕಟ್ಟಡ ಕಟ್ಟುವ ಸ್ಪರ್ಧೆ

### ಕಲಿಕಾ ಫಲಿತಗಳು


ಇಟ್ಟಿಗೆಯಿಂದ ಗೋಪುರದ ಕಟ್ಟಡವನ್ನು ಕಟ್ಟುವಾಗ ಭಾರದ ಇಟ್ಟಿಗೆ ಕೆಳಭಾಗದಲ್ಲಿರುತ್ತದೆ ಮತ್ತು ಹಗುರವಾದವು ಮೇಲ್ಭಾಗದಲ್ಲಿರುತ್ತವೆ ಎಂದು ಅರ್ಥಮಾಡಿಕೊಳ್ಳುವರು.

### ಕಲಿಕಾ ಸಾಮಗ್ರಿಗಳು

ಒಂದರ ಮೇಲೆ ಒಂದನ್ನು ಜೋಡಿಸುವಂತಹ ಇಟ್ಟಿಗೆಗಳು/ರಿಂಗ್‌ಗಳ ಎರಡು ಸೆಟ್‌ಗಳು.

### ಸೂಚನೆಗಳು

1. ಐದು ಘನಾಕೃತಿಗಳ ಎರಡು ಸೆಟ್‌ಗಳನ್ನು ಅಂತರದಲ್ಲಿ ಇಡುವುದು.
2. ಪ್ರತೀ ಗುಂಪಿನ ಘನಾಕೃತಿಗಳ ಎದುರಿನಲ್ಲಿ ಸುಮಾರು 4–5 ಅಡಿಗಳ ಅಂತರದಲ್ಲಿ ಮಕ್ಕಳು ಎರಡು ಸಾಲನ್ನು ಮಾಡುವಂತೆ ತಿಳಿಸುವುದು.
3. ಕೆಳಗಿನ ನಿಯಮಗಳನ್ನು ವಿವರಿಸುವರು
   - ನೀವು ಹೋಗು ಎಂದು ಹೇಳಿದಾಗ, ಪ್ರತೀ ಸಾಲಿನಲ್ಲಿ ಮುಂದೆ ಇರುವ ಎರಡು ಮಕ್ಕಳು ಬಂದು ಒಂದರ ಮೇಲೊಂದು ಘನಾಕೃತಿಗಳನ್ನು ಇಡಬೇಕು.
   - ಯಾವ ಗುಂಪಿನ ಮಗು ಬೇಗ ಮುಗಿಸುತ್ತದೆಯೋ ಆ ಗುಂಪು ಒಂದು ಅಂಕವನ್ನು ಪಡೆಯುತ್ತದೆ.
   - ಯಾವ ಗುಂಪಿಗೆ ಹೆಚ್ಚು ಅಂಕಗಳು ಬರುತ್ತದೆಯೋ ಆ ಗುಂಪು ಗೆಲ್ಲುತ್ತದೆ.
4. ಎಲ್ಲಾ ಮಕ್ಕಳಿಗೂ ಅವಕಾಶ ಸಿಗುವವರೆಗೂ ಆಟವನ್ನು ಮುಂದುವರೆಸುವುದು.





Scanned with CamScanner

ಚಟುವಟಿಕೆ 2

# ನಕ್ಷತ್ರವನ್ನು ಮಾಡುವುದು

## ಕಲಿಕಾ ಫಲಿತಗಳು

ದೃಷ್ಟಿ ಮತ್ತು ಕೈಗಳ ಸಮನ್ವಯತೆಯನ್ನು ಅಭ್ಯಾಸ ಮಾಡುವರು.

## ಕಲಿಕಾ ಸಾಮಗ್ರಿಗಳು

ಬೇರೆ ಬೇರೆ ಆಕಾರದ ಎಲೆಗಳು ಮತ್ತು ಕಲ್ಲುಗಳು/ಹರಳುಗಳು.

## ಸೂಚನೆಗಳು

1. ತರಗತಿಯ ಮಕ್ಕಳನ್ನು 3 ಅಥವಾ 4 ಗುಂಪುಗಳಾಗಿ ವಿಂಗಡಿಸುವರು.
2. ಪ್ರತಿ ಗುಂಪಿಗೆ ಕೆಲವು ಎಲೆಗಳನ್ನು ಮತ್ತು ಕಲ್ಲುಗಳನ್ನು ಕೊಡುವರು.
3. ನೆಲದ ಮೇಲೆ ಸೀಮೆಸುಣ್ಣದ ಸಹಾಯದಿಂದ ನಕ್ಷತ್ರದ ಆಕಾರವನ್ನು ಬರೆಯುವರು.
4. ನಕ್ಷತ್ರದ ಹೊರಗಿನ ಗೆರೆಯನ್ನು ಕಲ್ಲುಗಳಿಂದ ಮತ್ತು ಒಳಭಾಗವನ್ನು ಎಲೆಗಳಿಂದ ತುಂಬಿಸುವಂತೆ ಮಕ್ಕಳಿಗೆ ತಿಳಿಸುವರು.
5. ಮಕ್ಕಳಿಗೆ ಈ ಚಟುವಟಿಕೆ ಇಷ್ಟವಾಯಿತೇ? ಎಂದು ಕೇಳುವರು.
6. ಮಕ್ಕಳು ಮಾಡಿರುವ ಒಳ್ಳೆಯ ಕೆಲಸಕ್ಕೆ ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸುವಂತೆ ತಿಳಿಸುವರು.






Scanned with CamScanner

ಚಟುವಟಿಕೆ 1

## ಆಲೂಗಡ್ಡೆ ಮತ್ತು ಕುಂಬಳಕಾಯಿ ಪಂದ್ಯ

### ಕಲಿಕಾ ಫಲಿತಗಳು

ಎರಡು ಬೇರೆ ಬೇರೆ ತರಕಾರಿಗಳ ತೂಕ ಅಂದಾಜು ಮಾಡುವುದನ್ನು ಅರಿಯುವರು.


### ಕಲಿಕಾ ಸಾಮಗ್ರಿಗಳು

ಆಲೂಗಡ್ಡೆ ಮತ್ತು ಸಣ್ಣ ಕುಂಬಳಕಾಯಿ.

### ಸೂಚನೆಗಳು

1. ತರಗತಿಯ ಒಟ್ಟು ಮಕ್ಕಳನ್ನು, ಒಂದು ತಂಡದಲ್ಲಿ ಆರು ಮಕ್ಕಳಿರುವಂತೆ ಸಮವಾಗಿ ವಿಂಗಡಿಸುವರು.
2. ಮೊದಲ ಆರು ಮಕ್ಕಳ ಒಂದು ತಂಡದಲ್ಲಿ ಮೂರು ಮಕ್ಕಳು ಆಲೂಗಡ್ಡೆ, ಉಳಿದ ಮೂರು ಮಕ್ಕಳು ಸಣ್ಣ ಕುಂಬಳಕಾಯಿಯನ್ನು ತಲೆಯ ಮೇಲಿರಿಸಿಕೊಳ್ಳುವರು.
3. ಆರಂಭದ ಸ್ಥಳವನ್ನು ಗೆರೆಹಾಕಿ ಗುರುತಿಸಿ ಅಲ್ಲಿ ನಿಲ್ಲುವಂತೆ ಸೂಚಿಸುವರು.
4. ಅವರು ಅಂತಿಮಗೆರೆ ತಲುಪವರೆಗೂ ತಲೆಯ ಮೇಲಿರುವ ತರಕಾರಿ ಬೀಳಿಸದೆ ಹೇಗೆ? ನಡೆಯಬೇಕು ಎಂಬುದನ್ನು ತೋರಿಸುವರು.
5. ಪ್ರತಿ ತಂಡಕ್ಕೂ ಸರದಿಗನುಸಾರವಾಗಿ ಅವಕಾಶ ನೀಡುವರು.
6. ಆಲೂಗಡ್ಡೆ ಏಕೆ ಕೆಳಗೆ ಬಿದ್ದಿತು? ಕುಂಬಳಕಾಯಿ ಏಕೆ ಕೆಳಗೆ ಬೀಳಲಿಲ್ಲ? ಎಂದು ಕೇಳಿ, ಮಕ್ಕಳ ನಿರ್ಧಾರದ ಉತ್ತರವನ್ನು ಹೇಳುವಂತೆ ಪ್ರೇರೇಪಿಸುವರು.
7. ಅವರ ಪ್ರಯತ್ನಕ್ಕೆ ಆಟದ ಕೊನೆಯಲ್ಲಿ ಎಲ್ಲಾ ಮಕ್ಕಳಿಗೂ ಶಹಭಾಸ್!! ಹೇಳುವರು.
8. ಆಲೂಗಡ್ಡೆ ಮತ್ತು ಕುಂಬಳಕಾಯಿ ಸಿಗದಿದ್ದಲ್ಲಿ ಸ್ಥಳೀಯವಾಗಿ ದೊರೆಯುವ ವಿಭಿನ್ನ ರೀತಿಯ ಗಾತ್ರ ಮತ್ತು ಭಾರದ ತರಕಾರಿಗಳನ್ನು ಉಪಯೋಗಿಸಿ ಚಟುವಟಿಕೆ ಮಾಡಿಸುವರು.







Scanned with CamScanner

ಚಟುವಟಿಕೆ 2

## ಚಿಟ್ಟೆಯನ್ನು ಗಿಡಕ್ಕೆ ಅಂಟಿಸುವುದು



### ಕಲಿಕಾ ಫಲಿತಗಳು

ಸ್ಥಳ ಮತ್ತು ದಿಕ್ಕನ್ನು ಅಂದಾಜು ಮಾಡುವುದನ್ನು ಅರಿಯುವರು.

### ಕಲಿಕಾ ಸಾಮಗ್ರಿಗಳು

ಸಸ್ಯದ ಚಿತ್ರವಿರುವ ಒಂದು ಚಿತ್ರಪಟ, ಅಂಟಿಸಲು ಬರುವಂತಹ ಒಂದು ಚಿಟ್ಟೆಯ ಚಿತ್ರ, ಕಣ್ಣು ಕಟ್ಟಲು ಒಂದು ದುಪ್ಪಟ/ಬಟ್ಟೆಯ ಪಟ್ಟಿ.

### ಸೂಚನೆಗಳು

1. ಸಸ್ಯದ ಚಿತ್ರಪಟವನ್ನು ಮಕ್ಕಳಿಗೆ ಎಟುಕುವಂತೆ ಶಾಲೆಯ ಒಳಗೆ ಅಥವಾ ಹೊರಗಿನ ಗೋಡೆಗೆ ತೂಗು ಹಾಕುವರು.
2. ಕಣ್ಣು ಕಟ್ಟಿಕೊಂಡಾಗ ಚಿಟ್ಟೆಯನ್ನು ಹೇಗೆ ಸಸ್ಯದ ಚಿತ್ರಪಟಕ್ಕೆ ಅಂಟಿಸಬಹುದೆಂದು ತೋರಿಸುವರು.
3. ಒಬ್ಬರಾದ ಮೇಲೆ ಒಬ್ಬರಂತೆ ಚಿಟ್ಟೆಯನ್ನು ಸಸ್ಯದ ಚಿತ್ರಪಟಕ್ಕೆ ಅಂಟಿಸುವುದನ್ನು ಪುನರಾವರ್ತಿಸಲು ತಿಳಿಸುವರು.
4. ಒಂದು ಮಗು ಚಿಟ್ಟೆಯನ್ನು ಅಂಟಿಸುತ್ತಿರುವಾಗ ಉಳಿದ ಮಕ್ಕಳು ಅದನ್ನು ಪ್ರೋತ್ಸಾಹಿಸುವಂತೆ ತಿಳಿಸುವರು.
5. ಮಕ್ಕಳು ಚಿಟ್ಟೆಯನ್ನು ಚಿತ್ರಪಟಕ್ಕೆ ಅಂಟಿಸಲು ಸಾಧ್ಯವಾಗದಿದ್ದರೂ ಪರವಾಗಿಲ್ಲ. ಆಟಕ್ಕೆ ಹಾಸ್ಯ ವಾತಾವರಣದ ನೆರವು ನೀಡುವರು.
6. ಒಂದು ಮಗು ಸಸ್ಯದ ಚಿತ್ರಪಟಕ್ಕೆ ಚಿಟ್ಟೆಯನ್ನು ಅಂಟಿಸುವಾಗ ಉಳಿದ ಮಕ್ಕಳು ಎಡಕ್ಕೆ, ಬಲಕ್ಕೆ, ಮೇಲಕ್ಕೆ, ಕೆಳಕ್ಕೆ ಎಂಬ ಸೂಚನೆಗಳನ್ನು ನೀಡುತ್ತ ಪ್ರೋತ್ಸಾಹಿಸುವರು.
7. ಮಕ್ಕಳೆಲ್ಲರೂ ಮಾಡಿದ ಒಳ್ಳೆಯ ಪ್ರಯತ್ನಕ್ಕೆ ಒಬ್ಬರು ಇನ್ನೊಬ್ಬರ ಬೆನ್ನು ತಟ್ಟುವಂತೆ ತಿಳಿಸಿ ಪ್ರೋತ್ಸಾಹಿಸುವರು.

ಇದೇ ಆಟವನ್ನು ಸ್ವಲ್ಪ ಬದಲಿಸಿ ಒಬ್ಬ ಮಗು ಕಣ್ಣು ಕಟ್ಟಿಕೊಂಡು ಮತ್ತು ಎರಡನೆಯವನು/ಳು ಕೈಗಳನ್ನು ಎಲ್ಲಿ ಚಲಿಸಬೇಕು ಎಂದು ಸೂಚಿಸುವಂತೆ ಎರಡೆರಡು ಮಕ್ಕಳು ಜೋಡಿಯಾಗಿ ಆಡುವಂತೆ ಯೋಜಿಸಿ ಆಟವಾಡಿಸಿ.



Scanned with CamScanner

## ಸಸ್ಯ ಪ್ರಪಂಚ

1. Look for the flowers
2. point to the flowers
3. Smell the flowers

1. Look for the flowers
2. point to the flowers
3. Smell the flowers

1. Look for the flowers
2. point to the flowers
3. Smell the flowers

1. Pluck the flowers
2. Make a -garland
3. Garland your friend

1. Pluck the flowers
2. Make a -garland
3. Garland your friend

1. Pluck the flowers
2. Make a -garland
3. Garland your friend

Say

gesture

model

1. Look for the flowers
2. point to the flowers
3. Smell the flowers
4. Pluck the flowers
5. Make a -garland
6. Garland your friend

1. Pluck the flowers
2. Garland your friend
3. Look for the flowers
4. Smell the flowers
5. point to the flowers
6. Make a -garland





Scanned with CamScanner





ಪರಿಸರ ಜಗತ್ತು

# ಮರಗಳು,
# ಪೊದೆಗಳು ಮತ್ತು ಬಳ್ಳಿಗಳು



Scanned with CamScanner

# ಕಲಿಕಾ ಫಲಿತಗಳು

## ಉಪವಿಷಯ 5.2: ಮರಗಳು, ಪೊದೆಗಳು ಮತ್ತು ಬಳ್ಳಿಗಳು

### 3–4 ವರ್ಷಗಳು

1. ಆಕಾರ, ಗಾತ್ರ, ಹಣ್ಣುಗಳು ಮತ್ತು ಹೂವುಗಳಿಗನುಗುಣವಾಗಿ ಸಸ್ಯಗಳು ಒಂದರಿಂದ ಇನ್ನೊಂದು ಭಿನ್ನವಾಗಿವೆ ಎಂದು ಅರ್ಥಮಾಡಿಕೊಳ್ಳುವರು.
2. ಮರಗಳ ಲಕ್ಷಣಗಳನ್ನು ತಿಳಿದುಕೊಳ್ಳುವುದು – ಅವುಗಳು ಉದ್ದವಾಗಿರುತ್ತವೆ. ಮಧ್ಯದಲ್ಲಿ ಕಾಂಡ, ದಪ್ಪ ಕೊಂಬೆಗಳು ಮತ್ತು ಬೇರುಗಳಿರುತ್ತವೆ ಎಂದು ತಿಳಿದುಕೊಳ್ಳುವುದು.
3. ಸಾಮಾನ್ಯವಾದ ಮರಗಳ ಹೆಸರುಗಳನ್ನು ತಿಳಿದುಕೊಳ್ಳುವುದು ಮತ್ತು ಅವುಗಳ ಎಲೆಗಳನ್ನು ಗುರುತಿಸುವುದು.
4. ಅನಾವಶ್ಯಕವಾಗಿ ಮರಗಳನ್ನು ಕತ್ತರಿಸುವುದು ಏಕೆ ತಪ್ಪು ಮತ್ತು ಅದು ಪ್ರಾಣಿ, ಪಕ್ಷಿಗಳ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂದು ತಿಳಿದುಕೊಳ್ಳುವುದು ಹಾಗೂ ವಿವರಿಸುವರು.

### 4–5 ವರ್ಷಗಳು

1. ಸಸ್ಯಗಳು ಭಿನ್ನವಾಗಿವೆ ಹಾಗೂ ಅವು ಮರ ಅಥವಾ ಗಿಡಗಳಾಗಿರಬಹುದು ಎಂದು ಅರ್ಥಮಾಡಿಕೊಳ್ಳುವರು.
2. ಮರಗಳು ಮತ್ತು ಗಿಡಗಳ ನಡುವಿನ ವ್ಯತ್ಯಾಸಗಳನ್ನು ವಿವರಿಸಲು ಸಾಧ್ಯವಾಗುವುದು.
3. ನೆಲಕ್ಕೆ ಹತ್ತಿರವಿರುವ, ಚಿಕ್ಕದಾದ ಮತ್ತು ಮೃದುವಾದ ತೆಳ್ಳಗಿನ ಕಾಂಡವನ್ನು ಹೊಂದಿರುವ ಸಾಮಾನ್ಯ ಪೊದೆಗಳು ಮತ್ತು ಗಿಡಗಂಟಿಗಳ ಗುಣಲಕ್ಷಣಗಳನ್ನು ತಿಳಿದುಕೊಳ್ಳುವುದು.
4. ಹೂಗಳನ್ನು ಬಿಡುವ, ಹೂಗಳನ್ನು ಬಿಡದಿರುವ ಹಾಗೂ ಮುಳ್ಳುಗಳನ್ನು ಹೊಂದಿರುವ ಸಸ್ಯಗಳ ಬಗ್ಗೆ ತಿಳಿಯುವರು.
5. ಸಾಮಾನ್ಯ ಗಿಡಗಂಟಿಗಳನ್ನು ಮತ್ತು ಪೊದೆಗಳನ್ನು ಗುರುತಿಸಿ ಹೆಸರಿಸಲು ಸಾಧ್ಯವಾಗುವುದು.
6. ಪ್ರಾಣಿಗಳಿಗೆ ಮತ್ತು ಪಕ್ಷಿಗಳಿಗೆ ಗಿಡಮರಗಳಿಂದಾಗುವ ಉಪಯೋಗಗಳನ್ನು ತಿಳಿದುಕೊಳ್ಳುವುದು (ಗಿಡ ಮತ್ತು ಮರ ಇವೆರಡರ ಮೇಲೂ ಗಮನ ಹರಿಸುವುದು)
7. ಅನಾವಶ್ಯಕವಾಗಿ ಮರಗಿಡಗಳನ್ನು ಕಡಿಯುವುದರಿಂದ ಪ್ರಾಣಿಗಳು ಮತ್ತು ಪಕ್ಷಿಗಳಿಗೆ ತೊಂದರೆಯಾಗುವುದನ್ನು ತಪ್ಪಿಸುವುದು.

### 5–6 ವರ್ಷಗಳು

1. ಸಸ್ಯಗಳೆಂದರೆ ಮರ, ಪೊದೆ ಅಥವಾ ಬಳ್ಳಿಗಳಾಗಿರಬಹುದು ಎಂದು ಅರ್ಥಮಾಡಿಕೊಳ್ಳುವರು.
2. ಬಳ್ಳಿಗಳ ಕಾಂಡ ದುರ್ಬಲವಾಗಿದ್ದು ಅವು ನೆಲ, ಗೋಡೆಗೆ ಅಥವಾ ಗಿಡಗಳಿಗೆ ಹಬ್ಬಿರುತ್ತವೆ. ಕೆಲವು ಬಳ್ಳಿಗಳ ಹಣ್ಣುಗಳು ದೊಡ್ಡ ಆಕಾರದವಾಗಿದ್ದು ಅವು ನೆಲದ ಮೇಲೆಯೇ ಇರುತ್ತವೆ.
3. ನೆಲದ ಮೇಲೆ ಹಬ್ಬುವ ಹಾಗೂ ಗಿಡಕ್ಕಂಟಿ ಬೆಳೆಯುವ ಕೆಲವು ಸಾಮಾನ್ಯ ಬಳ್ಳಿಗಳನ್ನು ಗುರುತಿಸಿ ಹೆಸರಿಸುವರು.
4. ಹತ್ತಿ, ಔಷಧಿ ಮತ್ತು ಸುಗಂಧ ದ್ರವ್ಯಗಳಾಗಿ ಸಸ್ಯಗಳ ಇತರ ಉಪಯೋಗಗಳನ್ನು ತಿಳಿದುಕೊಳ್ಳುವುದು. ಯಾವ ರೀತಿ ಅಲಂಕಾರಕ್ಕಾಗಿ ಅಥವಾ ಬೇಲಿಯಂತೆ ಬೆಳೆಸಬಹುದು ಎಂದು ಅರ್ಥಮಾಡಿಕೊಳ್ಳುವರು.
5. ಬಳ್ಳಿಗಳಿಗೆ ಒಂದು ಕೋಲು ಅಥವಾ ಒಂದು ಆಧಾರವನ್ನು ಕೊಟ್ಟು ಅವು ಬೆಳೆಯುವಂತೆ ನೋಡಿಕೊಳ್ಳುವುದು ಮತ್ತು ಅವುಗಳನ್ನು ಗೋಡೆಯ ಪಕ್ಕದಲ್ಲಿ ನೆಡುವುದು. ಇಟ್ಟಿಗೆ ಮತ್ತು ಕಾಂಕ್ರೀಟ್‌ನ ಬೇಲಿಗಳಿಗಿಂತ ನೈಸರ್ಗಿಕ ಬೇಲಿಗಳು ಮತ್ತು ಅವುಗಳ ಉಪಯೋಗಗಳನ್ನು ಅರ್ಥಮಾಡಿಕೊಳ್ಳುವರು ಮತ್ತು ವಿವರಿಸುವರು.

Scanned with CamScanner

ಉಪವಿಷಯ 5.2

# ಮರಗಳು, ಪೊದೆಗಳು, ಮತ್ತು ಬಳ್ಳಿಗಳು



## ಕಲಿಕಾ ಉದ್ದೇಶಗಳು

- ಸಸ್ಯಗಳು ಭಿನ್ನವಾಗಿವೆ ಹಾಗೂ ಅವು ಮರ ಅಥವಾ ಗಿಡಗಳಾಗಿರಬಹುದು ಎಂದು ಅರ್ಥಮಾಡಿಕೊಳ್ಳುವರು.
- ಮರಗಳು ಮತ್ತು ಗಿಡಗಳ ನಡುವಿನ ವ್ಯತ್ಯಾಸಗಳನ್ನು ವಿವರಿಸಲು ಸಾಧ್ಯವಾಗುವುದು.
- ನೆಲಕ್ಕೆ ಹತ್ತಿರವಿರುವ, ಚಿಕ್ಕದಾದ ಮತ್ತು ಮೃದುವಾದ ತೆಳ್ಳಗಿನ ಕಾಂಡವನ್ನು ಹೊಂದಿರುವ ಸಾಮಾನ್ಯ ಪೊದೆಗಳು ಮತ್ತು ಗಿಡಗಂಟಿಗಳ ಗುಣಲಕ್ಷಣಗಳನ್ನು ತಿಳಿದುಕೊಳ್ಳುವರು.
- ಹೂಗಳನ್ನು ಬಿಡುವ, ಹೂಗಳನ್ನು ಬಿಡದಿರುವ ಹಾಗೂ ಮುಳ್ಳುಗಳನ್ನು ಹೊಂದಿರುವ ಸಸ್ಯಗಳ ಬಗ್ಗೆ ತಿಳಿಯುವರು.
- ಸಾಮಾನ್ಯ ಗಿಡಗಂಟಿಗಳನ್ನು ಮತ್ತು ಪೊದೆಗಳನ್ನು ಗುರುತಿಸಿ ಹೆಸರಿಸುವರು.
- ಪ್ರಾಣಿಗಳಿಗೆ ಮತ್ತು ಪಕ್ಷಿಗಳಿಗೆ ಗಿಡಮರಗಳಿಂದಾಗುವ ಉಪಯೋಗಗಳನ್ನು ತಿಳಿದುಕೊಳ್ಳುವರು. (ಗಿಡ ಮತ್ತು ಮರ ಇವೆರಡರ ಮೇಲೂ ಗಮನ ಹರಿಸುವರು.)
- ಅನವಶ್ಯಕವಾಗಿ ಮರಗಿಡಗಳನ್ನು ಕಡಿಯುವುದರಿಂದ ಪ್ರಾಣಿಗಳು ಮತ್ತು ಪಕ್ಷಿಗಳಿಗೆ ತೊಂದರೆಯಾಗುವುದನ್ನು ತಪ್ಪಿಸುವುದು.
- ಮುಕ್ತ ಮತ್ತು ಮಾರ್ಗದರ್ಶನಯುಕ್ತ ಸಂಭಾಷಣೆ.




Scanned with CamScanner



## ಸಂಭಾಷಣೆ 1

# ಗಿಡಗಳು ಮತ್ತು ಮರಗಳ ಗುಣಲಕ್ಷಣಗಳು




### ಕಲಿಕಾ ಫಲಿತಗಳು

- ಗಿಡಮರಗಳು ಮತ್ತು ಬಳ್ಳಿಗಳ ನಡುವಿನ ವ್ಯತ್ಯಾಸವನ್ನು ತಿಳಿದುಕೊಳ್ಳುವರು.

### ಕಲಿಕಾ ಸಾಮಗ್ರಿಗಳು

ಚಿತ್ರಪಟ P5.2.1 – ಮರಗಳು, ಪೊದೆಗಳು ಮತ್ತು ಬಳ್ಳಿಗಳು

### ಶಿಕ್ಷಕರ ಪೂರ್ವಸಿದ್ಧತೆ

ತರಗತಿಗೆ ಪೂರ್ವಭಾವಿಯಾಗಿ ಚಿತ್ರಪಟಗಳು ಮತ್ತು ಬೇಕಾಗುವ ಇತರೆ ಸಾಮಗ್ರಿಗಳನ್ನು ಸಿದ್ಧಪಡಿಸಿಟ್ಟುಕೊಳ್ಳುವುದು.

### ಸೂಚನೆಗಳು

1. ಹಿಂದೆ ಕೈಗೊಂಡ ಹೊರ ಸಂಚಾರವನ್ನು ಮಕ್ಕಳಿಗೆ ಜ್ಞಾಪಿಸಿ. "ಗಿಡಗಳ ಬಗ್ಗೆ ನಿಮಗೆ ಏನು ಗೊತ್ತಿದೆ?" ಎಂದು ಕೇಳುವುದು.
2. ಹಿಂದಿನ ವಾರದಲ್ಲಿ ಅವರು ನೋಡಿರುವ ಮತ್ತು ಕಲಿತಿರುವುದೆಲ್ಲವುಗಳ ಬಗ್ಗೆ ಮಾತನಾಡಲು ಅವಕಾಶ ಮಾಡಿಕೊಡುವುದು.
3. ಸಸ್ಯಗಳಿಗಿರುವ ಇನ್ನೊಂದು ವ್ಯತ್ಯಾಸವೆಂದರೆ ಅವುಗಳಲ್ಲಿ ಕೆಲವು ಮರಗಳೂ ಇವೆ ಎಂದು ವಿವರಿಸಿ. ಮಕ್ಕಳನ್ನು ತರಗತಿಯಿಂದ ಹೊರಗೆ ಕರೆದುಕೊಂಡು ಹೋಗಿ ಶಾಲೆಯ ಆವರಣದಲ್ಲಿರುವ ಗಿಡ ಮತ್ತು ಮರಗಳನ್ನು ತೋರಿಸಿ ಅವುಗಳ ನಡುವಿನ ವ್ಯತ್ಯಾಸವನ್ನು ವಿವರಿಸಲು ಹೇಳುವುದು.
4. ಉದಾಹರಣೆ: ಒಂದು ಟೈರ್ ಉಪಯೋಗಿಸಿಕೊಂಡು ಉಯ್ಯಾಲೆ ಮಾಡಬೇಕು ಎಂದು ಕಲ್ಪಿಸಿಕೊಳ್ಳಿ. ನಾನು, ಮರವನ್ನು ಅಥವಾ ಗಿಡವನ್ನು ಆರಿಸಿಕೊಳ್ಳಲೇ? ಏಕೆ? ಉಯ್ಯಾಲೆಯಲ್ಲಿ ಟೈರ್‌ನ ಚಲನೆ ಹೇಗಿರುತ್ತದೆ ಎಂಬುದನ್ನು ಅಭಿನಯಿಸಿ ತೋರಿಸಿ. ಇದನ್ನು ಎಲ್ಲಿ ಕಟ್ಟೋಣ? ಎಂದು ಕೇಳಿ. ಮರದ ಕೊಂಬೆಗಳು ಎತ್ತರದಲ್ಲಿರುವುದರಿಂದ ಉಯ್ಯಾಲೆ ತೂಗಲು ಸಾಕಷ್ಟು ಸ್ಥಳಾವಕಾಶ ಇದೆ ಎಂದು ಅರ್ಥ ಮಾಡಿಕೊಳ್ಳಲು ಸಹಾಯ ಮಾಡಿ. ಮರಗಳು ಎತ್ತರವಾಗಿದ್ದು ರೆಂಬೆಗಳು ಗಟ್ಟಿಯಾಗಿರುತ್ತವೆ. ಆದ್ದರಿಂದ ರೆಂಬೆ ಹಿಡಿದು ನೇತಾಡಲು ಸಾಧ್ಯ. ಅದೇ ರೀತಿ ಕಾಂಡದಲ್ಲಿ ನೇತಾಡಲು ಸಾಧ್ಯವೇ? ಮಕ್ಕಳಿಗೆ ಅವರ ಯೋಚನೆಗಳನ್ನು ವಿವರಿಸಲು ಅವಕಾಶ ಮಾಡಿಕೊಡಿ (ಕಾಂಡ ಮುರಿಯಬಹುದು/ ಬಗ್ಗಬಹುದು/ ನೀವು ಬಿದ್ದುಬಿಡಬಹುದು ಇತ್ಯಾದಿ). ಮರದ ಕೊಂಬೆಗಳು ದಪ್ಪವಾಗಿ ಗಟ್ಟಿಯಾಗಿದ್ದು ಮತ್ತು ಅವುಗಳಿಗೆ ನಮ್ಮ ಭಾರವನ್ನು ತಡೆದುಕೊಳ್ಳಲು ಸಾಧ್ಯವಿದೆ. ಆದರೆ ಗಿಡದ ಕಾಂಡವು ತೆಳ್ಳಗಿದ್ದು ದುರ್ಬಲವಾಗಿರುವುದರಿಂದ ನಮ್ಮ ಭಾರವನ್ನು ತಡೆದುಕೊಳ್ಳಲು ಸಾಧ್ಯವಿಲ್ಲ ಎಂದು ವಿವರಿಸುವರು.
5. ಮರಗಳು ಮತ್ತು ಗಿಡಗಳ ಚಿತ್ರಗಳಿರುವ ಚಿತ್ರಪಟ P5.2.1ನ್ನು ತೋರಿಸಿ– ಮರಗಳು, ಪೊದೆಗಳು ಮತ್ತು ಬಳ್ಳಿಗಳ ಬಗ್ಗೆ ತಿಳಿಸುತ್ತಾ ಮರಗಳು ಎತ್ತರವಾಗಿರುತ್ತವೆ ಮತ್ತು ಗಿಡಗಳಿಗಿಂತ ಹೆಚ್ಚು ಗಟ್ಟಿಯಾದ ಕಾಂಡ ಮತ್ತು ಕೊಂಬೆಗಳನ್ನು ಹೊಂದಿವೆ ಎಂದು ವಿವರಿಸುತ್ತಾ ಪೂರ್ಣಗೊಳಿಸುವುದು.
6. ಪೊದೆಗಳು ಸಣ್ಣ ಕಾಂಡಗಳನ್ನು ಹೊಂದಿದ್ದು ಗುಂಪಾಗಿ ಕವಲು ಒಡೆದಿರುತ್ತದೆ ಮತ್ತು ಹೆಚ್ಚು ರೆಂಬೆಗಳನ್ನು ಹೊಂದಿರುತ್ತದೆ ಎಂದು ತಿಳಿಸುವುದು.
7. ಬಳ್ಳಿಗಳ ಕಾಂಡ ಮೃದುವಾಗಿದ್ದು ಉದ್ದವಾಗಿ ಹಬ್ಬಿರುತ್ತದೆ ಮತ್ತು ಆಧಾರಕ್ಕೆ ಬೇರೆ ಸಸ್ಯಗಳನ್ನು ಅವಲಂಬಿಸಿರುತ್ತವೆ ಎಂದು ತಿಳಿಸಿ ಅರ್ಥೈಸುವುದು.

Scanned with CamScanner


ಸಂಭಾಷಣೆ 2

# ಪೊದೆಗಳು ಮತ್ತು ಗಿಡಗಂಟಿಗಳ ಗುಣಲಕ್ಷಣಗಳು



## ಕಲಿಕಾ ಫಲಿತಗಳು

- ಹೂ ಬಿಡುವ, ಹೂ ಬಿಡದ ಮತ್ತು ಮುಳ್ಳುಗಳನ್ನು ಹೊಂದಿರುವ ಗಿಡಗಳ ಬಗ್ಗೆ ತಿಳಿಯುವರು.
- ಈ ಗಿಡಗಳು ನೆಲಕ್ಕೆ ಹತ್ತಿರವಾಗಿರುತ್ತವೆ, ಚಿಕ್ಕದಾಗಿರುತ್ತವೆ ಹಾಗೂ ಅವುಗಳ ಕಾಂಡಗಳು ಮೃದುವಾಗಿ ಮತ್ತು ತೆಳುವಾಗಿರುತ್ತವೆ ಎಂದು ತಿಳಿದುಕೊಳ್ಳುವರು.
- ತಮ್ಮ ಪರಿಸರದಲ್ಲಿನ ಸಾಮಾನ್ಯ ಗಿಡಗಳನ್ನು ಗುರುತಿಸುವುದು ಮತ್ತು ಹೆಸರಿಸುವರು.




## ಕಲಿಕಾ ಸಾಮಗ್ರಿಗಳು

ಚಿತ್ರಪಟ P5.2.1 – ಮರಗಳು, ಪೊದೆಗಳು ಮತ್ತು ಬಳ್ಳಿಗಳು

## ಶಿಕ್ಷಕರ ಪೂರ್ವಸಿದ್ಧತೆ

ತರಗತಿಗೆ ಪೂರ್ವಭಾವಿಯಾಗಿ ಚಿತ್ರಪಟಗಳು ಮತ್ತು ಬೇಕಾಗುವ ಇತರೆ ಸಾಮಗ್ರಿಗಳನ್ನು ಸಿದ್ದಪಡಿಸಿಟ್ಟುಕೊಳ್ಳುವುದು.

## ಸೂಚನೆಗಳು

1. ತರಗತಿಯಲ್ಲಿನ ಮಕ್ಕಳನ್ನು ಮೂರು ಗುಂಪುಗಳಾಗಿ ವಿಂಗಡಿಸಿ. ಶಾಲೆಯ ದಾರಿಯಲ್ಲಿ ಇರುವ ಗಿಡಗಳನ್ನು ಗಮನಿಸಲು ಅವರಿಗೆ ಹೇಳಿ. ಮೊದಲನೆಯ ಗುಂಪು ಹೂವುಗಳಿರುವ ಗಿಡಗಳನ್ನು, ಎರಡನೆಯ ಗುಂಪು ತರಕಾರಿಗಳು ಅಥವಾ ಹಣ್ಣುಗಳಿರುವ ಗಿಡಗಳನ್ನು ಮತ್ತು ಮೂರನೆಯ ಗುಂಪು ಗಿಡಗಳ ಎಲೆಗಳನ್ನು ಗಮನಿಸಬೇಕು ಎಂದು ಹೇಳಿ. ಮನೆಗೆ ಹೋಗುವ ಮೊದಲು ಇದನ್ನು ಅವರಿಗೆ ಇನ್ನೊಮ್ಮೆ ಜ್ಞಾಪಿಸಿ. ಮಕ್ಕಳನ್ನು ಶಾಲೆಗೆ ಕರೆತರುವ ಪೋಷಕರಿಗೂ ಸಹಾಯ ಮಾಡಲು ಹೇಳುವುದು.
2. ಮರುದಿನ ಮಕ್ಕಳ ಉತ್ತರಗಳನ್ನು ಚರ್ಚಿಸಿ. ಮಕ್ಕಳು ಗಿಡಗಳನ್ನು ತಂದರೂ ತರಬಹುದು, ತರದೆಯೂ ಇರಬಹುದು. ದಾರಿಯಲ್ಲಿ ತುಂಬಾ ಗಿಡಗಳನ್ನು ನೋಡಿದ್ದೀರಾ ಎಂದು ಮಕ್ಕಳನ್ನು ಕೇಳಿ. ಎಲ್ಲಾ ಗಿಡಗಳಲ್ಲಿ ಹೂವುಗಳಿದ್ದವೇ? ಹಣ್ಣುಗಳಿದ್ದವೇ? ಎಲೆಗಳಿದ್ದವೇ? ಎಂದು ಕೇಳುತ್ತಾ ಮಕ್ಕಳಿಂದ ಉತ್ತರಗಳನ್ನು ಪಡೆಯಿರಿ. ಎಲ್ಲಾ ಗಿಡಗಳಲ್ಲಿ ಎಲೆಗಳಿರುತ್ತವೆ ಆದರೆ ಹೂವುಹಣ್ಣುಗಳು ಮತ್ತು ಕಾಯಿಗಳು ಎಲ್ಲಾ ಗಿಡಗಳಲ್ಲಿ ಇರುವುದಿಲ್ಲ, ಎಂದು ಹೇಳುತ್ತಾ ಪೂರ್ಣಗೊಳಿಸುವುದು.
3. ಪೊದೆಗಳು ಮತ್ತು ಗಿಡಗಂಟಿಗಳಿರುವ ಚಿತ್ರಪಟ P5.2.1ನ್ನು ತೋರಿಸಿ. ನೀವು ಈ ಗಿಡಗಳನ್ನು ನೋಡಿದ್ದೀರಾ? ಎಲ್ಲಿ ನೋಡಿದ್ದೀರಿ? ಈ ಎಲ್ಲಾ ಗಿಡಗಳಲ್ಲಿ ಒಂದೇ ರೀತಿಯಾಗಿವೆಯೇ? ಅವುಗಳು ಯಾವ ರೀತಿ ಮರಗಳಿಗಿಂತ ಭಿನ್ನವಾಗಿವೆ? ಮರಗಳ ಬಗ್ಗೆ ನಾವು ಏನು ಚರ್ಚೆ ಮಾಡಿದ್ದೇವೆಂದು ನಿಮಗೆ ನೆನಪಿದೆಯೇ? ಎಂದು ಮಕ್ಕಳನ್ನು ಕೇಳಿ. ಯಾವುದೇ ಉತ್ತರಗಳನ್ನು ಹೇಳಲಿ (ಅವರು ಮರಗಳ ಮತ್ತು ಗಿಡಗಳ ಬಗೆಗಿನ ವಿಷಯಗಳನ್ನು ನೆನಪಿಸಿಕೊಳ್ಳುತ್ತಾರೆ ಮತ್ತು ಅದೇ ಉತ್ತರಗಳನ್ನು ಅಂದರೆ, ಎತ್ತರವಾದ, ಗಟ್ಟಿಯಾದ ಬುಡ ಮತ್ತು ಕೊಂಬೆಗಳು ಎನ್ನುವುದನ್ನು ಹೇಳುತ್ತಾರೆ) ಅವರ ಉತ್ತರಗಳಿಗೆ ಪೂರಕವಾಗಿ ಅವರಿಗೆ ಅರ್ಥವಾಗುವಂತೆ ಮತ್ತೊಮ್ಮೆ ಪುನರುಚ್ಚರಿಸಿ. ಪೊದೆಗಳನ್ನು ಸೂಕ್ಷ್ಮವಾಗಿ ಗಮನಿಸಲು ಮಕ್ಕಳಿಗೆ ಹೇಳಿ. "ಒಂದು ಉಯ್ಯಾಲೆಯನ್ನು ಈ ಗಿಡದ ರೆಂಬೆಗಳಿಗೆ ತೂಗುಹಾಕಬಹುದೇ?" ಏಕೆ ಸಾಧ್ಯವಿಲ್ಲ? ಎಂದು ಅದೇ ಪ್ರಶ್ನೆಯನ್ನು ಕೇಳುವುದು.
4. ಮಕ್ಕಳಿಂದ ಉತ್ತರಗಳನ್ನು ಪಡೆದ ನಂತರ, ಗಿಡಗಂಟಿಗಳು ಮತ್ತು ಪೊದೆಗಳು ಗಿಡ್ಡವಾಗಿರುತ್ತವೆ, ಅವುಗಳ ಕೊಂಬೆಗಳು ಮೆದುವಾಗಿ, ತೆಳ್ಳಗಿದ್ದು ನೆಲಕ್ಕೆ ಹತ್ತಿರವಾಗಿ ಇರುತ್ತವೆ ಎಂದು ವಿವರಿಸುವರು.



Scanned with CamScanner

## ಸಂಭಾಷಣೆ 3

# ಸಸ್ಯಗಳ ಉಪಯೋಗಗಳು



### ಕಲಿಕಾ ಫಲಿತಗಳು

- ಮರ ಮತ್ತು ಸಸ್ಯಗಳು ಪ್ರಾಣಿಗಳಿಗೆ ಆಶ್ರಯ ಕೊಡುತ್ತವೆ ಹಾಗು ಗಾಳಿಯನ್ನು ಶುದ್ಧಗೊಳಿಸುತ್ತವೆ ಎಂದು ತಿಳಿಯುವರು.
- ಅನವಶ್ಯಕವಾಗಿ ಮರಗಿಡಗಳನ್ನು ಕಡಿಯುವುದರಿಂದ ಪ್ರಾಣಿಗಳಿಗೆ ಆಶ್ರಯ ಮತ್ತು ಆಹಾರ ಇಲ್ಲದಂತಾಗುತ್ತದೆ ಎಂದು ತಿಳಿದುಕೊಳ್ಳುವರು.

### ಕಲಿಕಾ ಸಾಮಗ್ರಿಗಳು



- ಮಿಂಚುಪಟ್ಟಿ ಸರಣಿ : F5.2.1-1, 2, 3, 4, 5

1. ಹೂವಿನ ಮೇಲೆ ಕುಳಿತಿರುವ ಜೇನುಹುಳ.
2. ಹುಲ್ಲು ತಿನ್ನುತ್ತಿರುವ ಮೇಕೆ.
3. ಎಲೆ ತಿನ್ನುತ್ತಿರುವ ಹುಳ.
4. ಜೇನುಹುಳಗಳಿಂದ ಕೂಡಿರುವ ಜೇನುಗೂಡು.
5. ಪ್ರಾಣಿ ಪಕ್ಷಿಗಳಿಗೆ ಮರಗಳಿಂದಾಗುವ ಉಪಯೋಗಗಳು. (ಹಕ್ಕಿಗಳು ಗೂಡು ಕಟ್ಟಿರುವ, ರೆಂಬೆಯ ಮೇಲೆ ಕುಳಿತಿರುವ, ಹಣ್ಣನ್ನು ಕುಕ್ಕುತ್ತಿರುವ ಮತ್ತು ಮರಿಹಕ್ಕಿಗಳೊಂದಿಗೆ ಗೂಡಿನಲ್ಲಿ ಕೂತಿರುವ ಚಿತ್ರಗಳು)

### ಶಿಕ್ಷಕರ ಪೂರ್ವಸಿದ್ಧತೆ

ಅವಧಿಗೆ ಪೂರ್ವಭಾವಿಯಾಗಿ ಎಲ್ಲಾ ಮಿಂಚುಪಟ್ಟಿಗಳನ್ನು ಸಿದ್ಧಪಡಿಸಿಟ್ಟುಕೊಳ್ಳುವುದು.

### ಸೂಚನೆಗಳು

#### ಹಂತ 1: ನಮಗೆ ಗಿಡಮರಗಳಿಂದಾಗುವ ಉಪಯೋಗಗಳನ್ನು ಪುನರಾವರ್ತನೆ ಮಾಡುವುದು

1. ಗಿಡಗಳು ನಮ್ಮನ್ನು ಹೇಗೆ ಉಪಕಾರಿಯಾಗಿವೆ? ನಾವೂ ಕೂಡ ಅವುಗಳನ್ನು ರಕ್ಷಣೆ ಮಾಡಬೇಕು ಎಂದು ಹಿಂದಿನ ವಾರದಲ್ಲಿ ಕಲಿತಿರುವುದನ್ನು ಜ್ಞಾಪಿಸಿ. ಅವುಗಳಿಗೆ ನೀರು ಹಾಕಿ ಪೋಷಿಸುವುದು. ಏಕೆಂದರೆ ಮರಗಿಡಗಳು ನಮಗೆ ಹೇಗೆ ಉಪಯೋಗ ಎಂಬುದರ ಬಗ್ಗೆ ನಾವು ಈಗಾಗಲೇ ತಿಳಿದಿದ್ದೇವೆ. ಅವು ನೆನಪಿವೆಯೇ? ಮರಗಿಡಗಳನ್ನು ಬೇಲಿ ಹಾಕಲು, ಸೌದೆಗಾಗಿ, ನೆರಳಿಗಾಗಿ, ಪೀಠೋಪಕರಣಗಳಿಗಾಗಿ ಬಳಸುತ್ತೇವೆ. ಹಾಗೆಯೇ ಗಿಡಗಳ ಹೂಗಳನ್ನು, ಎಲೆಗಳನ್ನು ಮನೆಗಳಲ್ಲಿ ಅಲಂಕಾರಿಕ ವಸ್ತುಗಳಾಗಿ ಬಳಸುತ್ತೇವೆ ಎಂಬುದನ್ನು ಜ್ಞಾಪಿಸಿಕೊಳ್ಳಲು ಅವಕಾಶ ಮಾಡಿಕೊಟ್ಟು ಒಂದೊಂದಾಗಿ ವಿವರಿಸುವರು.



Scanned with CamScanner



## ಹಂತ 2: ಪ್ರಾಣಿ ಪಕ್ಷಿಗಳಿಗೆ ಗಿಡಮರಗಳು ಎಷ್ಟು ಮುಖ್ಯ ಎಂಬುದನ್ನು ಪರಿಚಯಿಸುವುದು

1. ಗಿಡಮರಗಳು ಕೇವಲ ನಮಗೆ ಮಾತ್ರ ಉಪಯುಕ್ತವಲ್ಲ, ಅವು ಪ್ರಾಣಿ ಪಕ್ಷಿಗಳಿಗೂ ತುಂಬಾ ಮುಖ್ಯವಾಗಿವೆ, ಎಂದು ವಿವರಿಸಿ. ನಾವು ಗಿಡ ಮರಗಳು, ಪ್ರಾಣಿ ಪಕ್ಷಿಗಳಿಗೆ ಹೇಗೆ? ಸಹಾಯ ಮಾಡುತ್ತವೆ ಎಂಬುದನ್ನು ಚರ್ಚಿಸೋಣ. 3–4 ಮಕ್ಕಳ ಸಣ್ಣ ಗುಂಪುಗಳನ್ನು ಮಾಡುವುದು. F5.2.1-1, 2, 3, 4, 5 ಮಿಂಚುಪಟ್ಟಿಗಳನ್ನು ಈ ಗುಂಪುಗಳಿಗೆ ಹಂಚಿ. ಇವುಗಳಲ್ಲಿರುವ ಚಿತ್ರಗಳು, ಗಿಡಗಳು ಪ್ರಾಣಿಗಳನ್ನು ಕಾಪಾಡುತ್ತಿರುವುದನ್ನು ತೋರಿಸುತ್ತವೆ ಎಂದು ತಿಳಿಸಿ. ಅವುಗಳನ್ನು ಗಮನಿಸಿ ಅವರು ಏನನ್ನು ನೋಡುತ್ತಿದ್ದಾರೆಂದು ವಿವರಿಸಲು ಮಕ್ಕಳಿಗೆ ಹೇಳಿ. ಹೆಚ್ಚು ಹೆಚ್ಚು ಪ್ರಶ್ನೆಗಳನ್ನು ಕೇಳುತ್ತಾ ಚಿತ್ರಗಳೊಂದಿಗೆ ಸಂಬಂಧೀಕರಿಸಿಕೊಂಡು ಅವು ಹೇಳುತ್ತಿರುವುದನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಿ. ಉದಾಹರಣೆಗೆ, ಪಕ್ಷಿಗಳು ಮರದ ಮೇಲೆ ಕುಳಿತಿವೆ ಎಂದು ಅವರು ಹೇಳಬಹುದು. "ಹಾಗಾದರೆ ಮರವು ಪಕ್ಷಿಗೆ ಹೇಗೆ ಉಪಕಾರಿಯಾಗಿದೆ ಎಂದು ನಿಮಗನಿಸುತ್ತದೆ? ಸಾಮಾನ್ಯವಾಗಿ ಪಕ್ಷಿಗಳು ಏನು ಮಾಡುತ್ತವೆ? ಪಕ್ಷಿಯು ಮರದ ಮೇಲೆ ಏಕೆ ಕುಳಿತಿದೆಯೆಂದು ನಿಮಗನಿಸುತ್ತದೆ" (ಸ್ವಲ್ಪ ಓಡಾಡಿದ ಮೇಲೆ ನೀವು ಏಕೆ ಕುಳಿತುಕೊಳ್ಳುವಿರಿ?) ಎಂದು ಪ್ರಶ್ನಿಸಿ. ಇಂತಹ ಪ್ರಶ್ನೆಗಳಿಗೆ ಉತ್ತರಿಸಲು ಮಕ್ಕಳಿಗೆ ಸ್ವಲ್ಪ ಸಮಯ ಮತ್ತು ಪ್ರಯತ್ನ ಬೇಕಾಗುತ್ತವೆ. ಆದರೆ, ಅವರಿಗೆ ನೇರವಾಗಿ ಮಾಹಿತಿಯನ್ನು ನೀಡುವ ಬದಲು ಮಕ್ಕಳೇ ಉತ್ತರವನ್ನು ಊಹಿಸಲು ಅವಕಾಶ ಮಾಡಿಕೊಡುವುದು.

2. ಅಳಿಲು ಮತ್ತು ಕೋತಿಗಳಂತಹ ಇತರ ಪ್ರಾಣಿಗಳೂ ಸಹ ಮರದ ಮೇಲಿರುತ್ತವೆ. ಮರದ ಮೇಲೆ ಅವು ಏನು ಮಾಡುತ್ತಿದೆ? ಮರವು ಅವುಗಳಿಗೆ ಹೇಗೆ ಸಹಾಯ ಮಾಡುತ್ತಿದೆ? ಎಂದು ಕೇಳುವುದು. (ಉತ್ತರ ಹೇಳಿಕೊಡಬೇಕೆಂಬ ನಿಮ್ಮಲ್ಲಿನ ಕಾತುರವನ್ನು ಹಿಡಿದಿಟ್ಟುಕೊಳ್ಳಿ, ಹೆಚ್ಚು ಪ್ರಶ್ನೆಗಳನ್ನು ಕೇಳಿ ಮಕ್ಕಳೇ ಉತ್ತರ ಕಂಡುಕೊಳ್ಳುವಂತೆ ಮಾಡಿ).

ಗಮನಿಸಿ: ಮರಗಿಡಗಳಲ್ಲಿ ಜೇನುಗೂಡು ಕಟ್ಟಿವಾಸಿಸುತ್ತವೆ. ಜೇನು ನೊಣಗಳು ಹೂಗಳಿಂದ ಮಕರಂದ ಹೀರಿ ಜೇನುತುಪ್ಪ ತಯಾರಿಸುತ್ತವೆ. ಅದೇ ಜೇನುತುಪ್ಪ ತಿಂದು ನಾವು ಖುಷಿ ಪಡುತ್ತೇವೆ ಅಲ್ಲವೇ ಎಂದು ವಿವರಿಸಿ.

## ಹಂತ 3: ಗಿಡ ಮರಗಳನ್ನು ಏಕೆ ರಕ್ಷಿಸಬೇಕು ಎನ್ನುವುದನ್ನು ವಿವರಿಸುವರು

1. ಗಿಡಮರಗಳು–ಪ್ರಾಣಿ ಪಕ್ಷಿಗಳಿಗೆ ಆಶ್ರಯ, ತಿನ್ನಲು ಆಹಾರ ಕೊಡುವುದರಿಂದ ಅವುಗಳು ತುಂಬಾ ಮುಖ್ಯ ಎಂದು ವಿವರಿಸುವರು.

2. ಎಲ್ಲಾ ಮರ ಗಿಡಗಳನ್ನು ಕಡಿದು ಒಂದೂ ಇಲ್ಲದಿದ್ದರೆ ಏನಾಗುತ್ತದೆ? ಪ್ರಾಣಿ ಪಕ್ಷಿಗಳಿಗೆ ಏನಾಗುತ್ತದೆ? ನಿಮಗೆ ಮನೆಯು ಇಲ್ಲವಾದರೆ ಏನಾಗುತ್ತದೆ? ನೀವು ಏನು ಮಾಡುವಿರಿ? ಮರಗಳೇ ಇಲ್ಲದಿದ್ದರೆ ಪ್ರಾಣಿ ಪಕ್ಷಿಗಳು ಏನು ಮಾಡುತ್ತವೆ? ಎಂದು ಮಕ್ಕಳನ್ನು ಕೇಳಿ. ಸಾಧ್ಯವಾದ ಪರ್ಯಾಯ ಉತ್ತರಗಳನ್ನು ಮಕ್ಕಳು ವಿವರಿಸಲಿ. ಪ್ರಾಣಿ ಪಕ್ಷಿಗಳಿಗೆ ವಾಸಿಸಲು ಮನೆಗಳು ಇಲ್ಲವಾದಲ್ಲಿ ಅವುಗಳು ಬೇರೆ ಯಾವುದೋ ಪ್ರದೇಶಕ್ಕೆ ಹೋಗಬಹುದು ಅಥವಾ ನಾವು ಮುಂದೆಂದೂ ಅವುಗಳನ್ನು ನೋಡಲು ಸಾಧ್ಯವಿಲ್ಲದಂತೆ ಆಗಬಹುದು ಎನ್ನುವುದರೊಂದಿಗೆ ಪೂರ್ಣಗೊಳಿಸುವುದು.



Scanned with CamScanner

## ಯೋಜನಾ ಕಾರ್ಯ 1

## ವಿವಿಧ ಗಿಡಗಳು ಮತ್ತು ಎಲೆಗಳ ಮಾದರಿ ಚಿತ್ರಗಳನ್ನು ಸಂಗ್ರಹಿಸುವುದು



### ಕಲಿಕಾ ಫಲಿತಗಳು

ವಿವಿಧ ಗಿಡಗಳು ಮತ್ತು ಎಲೆಗಳ ಮಾದರಿ ಚಿತ್ರಗಳನ್ನು ಸಂಗ್ರಹಿಸುವರು.

### ಕಲಿಕಾ ಸಾಮಗ್ರಿಗಳು

1. ಬಣ್ಣದ ಪೆನ್ಸಿಲ್‌ಗಳು, ಬಿಳಿ ಕಾಗದದ ಹಾಳೆಗಳು, ಬಣ್ಣಗಳು, ನೀರು, ಬಟ್ಟಲು, ಅಂಟು
2. ಮಕ್ಕಳ ಅಭ್ಯಾಸ ಪುಸ್ತಕಗಳು
3. ವಿವಿಧ ಆಕಾರ ಮತ್ತು ಗಾತ್ರದ ಎಲೆಗಳು.

### ಶಿಕ್ಷಕರ ಪೂರ್ವಸಿದ್ಧತೆ

1. ಮಕ್ಕಳ ಜೊತೆಗೂಡಿ ಹಣ್ಣಿನ ಮರಗಳ (ಮಾವು, ಪೇರಲ, ಪಪ್ಪಾಯ) ತರಕಾರಿ ಗಿಡಬಳ್ಳಿಗಳು (ಟೊಮ್ಯಾಟೋ, ಬಸಳೆ ಸೊಪ್ಪು, ಹೀರೆ, ಕುಂಬಳ) ಮತ್ತು ಬೇರೆ ಮರಗಳ ಕೆಲವು ಎಲೆಗಳನ್ನು ಸಂಗ್ರಹಿಸಿಕೊಳ್ಳುವುದು.
2. ಎಲೆಗಳು ತುಂಬಾ ಒಣಗಿರಬಾರದು ಏಕೆಂದರೆ ಅವು ಪುಡಿಯಾಗಬಹುದು.
3. ತರಗತಿಯ ಮಧ್ಯಭಾಗದಲ್ಲಿ ಕೆಲವು ಬಟ್ಟಲುಗಳಲ್ಲಿ ಬಣ್ಣ, ಬಣ್ಣದ ಪೆನ್ಸಿಲ್‌ಗಳು, ಮತ್ತು ಖಾಲಿ ಕಾಗದದ ಹಾಳೆಗಳನ್ನು ಇಡುವುದು.

### ಸೂಚನೆಗಳು

1. ಮಕ್ಕಳನ್ನು ಸಣ್ಣಸಣ್ಣ ಗುಂಪುಗಳಾಗಿ ವಿಂಗಡಿಸುವುದು.
2. ಒಂದು ಎಲೆಯನ್ನು ಅಚ್ಚು ಮಾಡಲು ಒಳ್ಳೆಯ ವಿಧಾನ ಏನೆಂದು ಮಕ್ಕಳನ್ನು ಕೇಳಿ. ಮಕ್ಕಳು ಅವರದೇ ಆದ ಉತ್ತರ ನೀಡಲಿ. ಎಲೆಯ ಚಿತ್ರ ಬರೆಯುವುದು ಅಥವಾ ಎಲೆಯ ಚಿತ್ರವನ್ನು ಕಾಗದದ ಮೇಲೆ ಅಚ್ಚು ಮಾಡಲು ಪ್ರಯತ್ನಿಸುವುದು ಇತ್ಯಾದಿ ಉತ್ತರಗಳನ್ನು ಕೊಡಬಹುದು.
3. ಎಲೆಗಳ ಆಕಾರವನ್ನು ಬೇರೆ ಬೇರೆ ವಿಧಾನಗಳಿಂದ ಹೇಗೆ ಮಾಡಬಹುದು ಎಂಬುದನ್ನು ವಿವರಿಸುವರು.
4. ಎಲೆಯ ಒಂದು ಬದಿಗೆ ಮಾತ್ರ ಬಣ್ಣ ಅಂಟುವಂತೆ ಜಾಗರೂಕತೆಯಿಂದ ಒಂದು ಎಲೆಯನ್ನು ಬಣ್ಣದಲ್ಲಿ ಅದ್ದಿ ತೋರಿಸುವುದು.
5. ಆ ಎಲೆಯನ್ನು ಒಂದು ಕಾಗದದ ಮೇಲೆ ಸ್ಥಿರವಾಗಿ ಇಡಿರಿ. ಅದರ ಮೇಲ್ಭಾಗವನ್ನು ಮೆತ್ತಗೆ ಉಜ್ಜಿ ನಂತರ ಎಲೆಯನ್ನು ತೆಗೆದು ಎಲೆಯ ಅಚ್ಚನ್ನು ಮಕ್ಕಳಿಗೆ ತೋರಿಸುವುದು.
6. ಬಣ್ಣದ ಪೆನ್ಸಿಲ್‌ಗಳ ಸಹಾಯದಿಂದಲೂ ಎಲೆಯ ಚಿತ್ರವನ್ನು ಮೂಡಿಸಬಹುದೆಂದು ಮಕ್ಕಳಿಗೆ ಹೇಳುವುದು.
7. ಒಂದು ಎಲೆಯನ್ನು ಕಾಗದದ ಕೆಳಗಿಟ್ಟು ಮೇಲಿನಿಂದ ಬಣ್ಣದ ಪೆನ್ಸಿಲ್‌ನಿಂದ ನಿಧಾನವಾಗಿ ಎಲೆಯ ಆಕೃತಿಯು ಕಾಣುವವರೆಗೆ ಉಜ್ಜುವುದು.
8. ಪ್ರತಿಯೊಂದು ಗುಂಪು ಕೂಡ ಬಣ್ಣದಿಂದ ಅಥವಾ ಬಣ್ಣದ ಪೆನ್ಸಿಲ್‌ನಿಂದ ಎಲೆಯ ಆಕಾರವನ್ನು ಮಾಡಲು ಅವಕಾಶ ಮಾಡಿಕೊಡುವುದು.
9. ಮಕ್ಕಳಿಗೆ ಎಲೆಯ ಆಕಾರವನ್ನು ಕತ್ತರಿಸಲು ಸಹಾಯ ಮಾಡುವುದು.
10. ಒಂದು ಎ4 ಅಳತೆಯ ಕಾಗದವನ್ನು ಇಟ್ಟು – (ಅ) ಅದರ ಮೇಲ್ಭಾಗದಲ್ಲಿ ಒಂದು ಎಲೆಯನ್ನು ಅಂಟಿಸುವುದು. (ಬ) ಕತ್ತರಿಸಿದ ಎಲೆಯ ಅಚ್ಚುಗಳನ್ನು ಕಾಗದದ ಮೇಲೆ ಅಂಟಿಸುವುದು. (ಕ) ಗಿಡಗಳ ಹೆಸರುಗಳನ್ನು ಪುಟದ ಮೇಲ್ಭಾಗದಲ್ಲಿ ಬರೆದು, ಬೇರೆ ಬೇರೆ ಎಲೆಗಳಿಂದ ಮಾಡಿದ ಕಾಗದಗಳನ್ನು ಒಟ್ಟಿಗೆ ಜೋಡಿಸಿ ಒಂದು ಮಾದರಿ ಪುಸ್ತಕ ಮಾಡುವುದು.
11. ಪುಸ್ತಕಗಳಿಗೆ "ಮರಗಳು ಮತ್ತು ಎಲೆಗಳು" ಎಂದು ಹೆಸರುಕೊಟ್ಟು ಅದನ್ನು "ಓದುವ ಮೂಲೆ"ಯಲ್ಲಿ ಇರಿಸಿ. ಮಕ್ಕಳು ಆಗಾಗ ನೋಡುತ್ತಾ ಆಯಾ ಎಲೆಗಳನ್ನು ಆಯಾ ಮರಗಳ ಜೊತೆಗೆ ಸಂಬಂಧೀಕರಿಸಿಕೊಳ್ಳಲು ಸಹಾಯ ಮಾಡುವುದು.



Scanned with CamScanner

## ಶಿಶುಗೀತೆಗಳ ಸೂಚನೆಗಳು

### ಕಲಿಕಾ ಫಲಿತಗಳು

"ಉಂಡೆ ಉಂಡೆ ತೆಂಗಿನಕಾಯಿ" ಶಿಶುಗೀತೆಯನ್ನು ಸರಿಯಾದ ಪದಗಳು, ಉಚ್ಚಾರಣೆ ಮತ್ತು ಹಾವಭಾವ ಅಭಿನಯದೊಂದಿಗೆ ಹಾಡಲು ಶಕ್ತರಾಗುವರು.

### ಶಿಕ್ಷಕರ ಪೂರ್ವಸಿದ್ಧತೆ

ಶಿಶುಗೀತೆಯನ್ನು ಮತ್ತು ಅದಕ್ಕನುಗುಣವಾದ ಅಭಿನಯವನ್ನು ಚೆನ್ನಾಗಿ ಅಭ್ಯಾಸ ಮಾಡುವುದು.

### ಸೂಚನೆಗಳು


1. ಶಿಶುಗೀತೆ "ಉಂಡೆ ಉಂಡೆ ತೆಂಗಿನಕಾಯಿ" ಯನ್ನು ಪರಿಚಯಿಸುವುದು ಮತ್ತು ಅದು ಯಾವುದರ ಕುರಿತಾಗಿ ಇದೆ ಎಂದು ವಿವರಿಸುವರು.
2. ಶಿಶುಗೀತೆಯನ್ನು ಲಯಬದ್ಧವಾಗಿ ಹಾವಭಾವದೊಂದಿಗೆ ಧ್ವನಿಯ ಏರಿಳಿತದಿಂದ ಮಕ್ಕಳು ಕೇಳಿಸಿಕೊಳ್ಳುವಂತೆ ಹಾಡುವುದು.
3. ಗೀತೆಯ ಪ್ರತಿಯೊಂದು ಸಾಲನ್ನೂ ನೀವು ಹಾಡಿದ ಮೇಲೆ ಹಾಡುವಂತೆ ಮಕ್ಕಳಿಗೆ ಹೇಳುವುದು ಮತ್ತು ಚಿತ್ರವನ್ನು ತೋರಿಸಿ ಅದರ ಅರ್ಥವನ್ನು ವಿವರಿಸುವರು.
4. ಶಿಶುಗೀತೆಯ ಪ್ರತಿ ಪದಕ್ಕನುಗುಣವಾಗಿ ಅಭಿನಯಿಸಿ ತೋರಿಸುವುದು ಮತ್ತು ಅದನ್ನು ಮಕ್ಕಳು ಅನುಸರಿಸಲು ಹೇಳುವುದು.
5. ಈಗ ನಿಮ್ಮ ಜೊತೆಗೆ ಅಭಿನಯ ಮಾಡುತ್ತಾ ಹಾಡಲು ಹೇಳುವುದು.
6. ಮಕ್ಕಳು ಗುಂಪಿನಲ್ಲಿ ಅಥವಾ ಒಬ್ಬೊಬ್ಬರಾಗಿ ಹಾಡಲು ಪ್ರೋತ್ಸಾಹಿಸುವುದು.



Scanned with CamScanner

ಶಿಶುಗೀತೆ 1

## ಉಂಡೆ ಉಂಡೆ ತೆಂಗಿನಕಾಯಿ



### ಉಂಡೆ ಉಂಡೆ ತೆಂಗಿನಕಾಯಿ


ಉಂಡೆ ಉಂಡೆ ತೆಂಗಿನಕಾಯಿ ಮರದ ಮೇಲಿದೆ
ಗುಂಡನೆ ಗುಂಡನೆ ಕುಂಬಳಕಾಯಿ ಬಳ್ಳಿಯಲ್ಲಿದೆ
ಉದ್ದ ಉದ್ದದ ನುಗ್ಗೆಕಾಯಿ ಮರದ ಮೇಲಿದೆ
ಚಿಕ್ಕ ಚಿಕ್ಕ ಕಡ್ಲೆಕಾಯಿ ಭೂಮಿಯೊಳಗೆ ಬೇರಿನಲ್ಲಿದೆ
ಗೀರು ಗೀರು ಹೀರೆಕಾಯಿ ಬೇಲಿ ಮೇಲಿದೆ
ಚಿಕ್ಕ ಚಿಕ್ಕ ಮೆಣಸಿನಕಾಯಿ ಗಿಡದ ಮೇಲಿದೆ.



Scanned with CamScanner

ಶಿಶುಗೀತೆ 2

## SHRUBS AND TREES



### SHRUBS AND TREES

Shrubs are short and trees are tall
And creepers always grow on walls
Plants have stems and trees have trunks
Stems are weak but trunks are strong
The Creepers stems are very weak
So, the help of walls they seek
Some have flowers, some have fruits
But all of them have very strong roots



Scanned with CamScanner

# ಮೀನು ಮತ್ತು ಮರ



## ಕಲಿಕಾ ಫಲಿತಗಳು


"ಮೀನು ಮತ್ತು ಮರ" ಕಥೆಯನ್ನು ನೆನಪಿಸಿಕೊಂಡು, ಗ್ರಹಿಸಿ, ಸರಳ ಪ್ರಶ್ನೆಗಳಾದ "ಏನು?, ಏಕೆ?, ಹೇಗೆ? ಮತ್ತು ಯಾವಾಗ?" ಇವುಗಳಿಗೆ ಉತ್ತರಿಸಲು ಸಮರ್ಥರಾಗುವರು.

## ಶಿಕ್ಷಕರ ಪೂರ್ವಸಿದ್ಧತೆ

ಕಥೆಯನ್ನು ಮೊದಲೇ ಓದಿ ಅದನ್ನು ಸರಿಯಾಗಿ ಅರ್ಥೈಸಿಕೊಳ್ಳುವುದು ಹಾಗೂ ಕಥೆಯನ್ನು ಧ್ವನಿಯ ಏರಿಳಿತಗಳೊಂದಿಗೆ ಹೇಳುವುದನ್ನು ಅಭ್ಯಾಸ ಮಾಡಿಕೊಳ್ಳುವುದು.

## ಕಲಿಕಾ ಸಾಮಗ್ರಿಗಳು

ಕಥೆ ಪುಸ್ತಕ




### ಕಥೆಯ ಸಂಕ್ಷಿಪ್ತ ರೂಪ

**ಮೀನು ಮತ್ತು ಮರ**

ಮೀನು ತುಂಬಾ ಖುಷಿಯಾಗಿದ್ದಳು. ಅವಳ ತಾಯಿ ಅವಳನ್ನು ಉದ್ಯಾನವನಕ್ಕೆ ಕರೆದುಕೊಂಡು ಹೋಗುತ್ತೇನೆಂದು ಮಾತುಕೊಟ್ಟಿದ್ದರು. ಮೀನುಗೆ ಮರಗಳು, ಹೂವುಗಳು ಮತ್ತು ಪಕ್ಷಿಗಳೆಂದರೆ ತುಂಬಾ ಇಷ್ಟ. ಅವಳ ಮನೆಯ ಹತ್ತಿರ ಆಟವಾಡುತ್ತಿದ್ದಳು. ಅಲ್ಲಿ ತುಂಬಾ ಮರಗಳು, ಪಕ್ಷಿಗಳು, ಕೆಂಪು ಹೂವುಗಳು ಮತ್ತು ಚಿಟ್ಟೆಗಳಿದ್ದವು. ಒಂದು ಮರ ಅಳುತ್ತಿರುವುದನ್ನು ಅವಳು ನೋಡಿದಳು. ಅದರ ಹತ್ತಿರ ಹೋಗಿ "ನಿನಗೆ ಏನಾಯಿತು?" ಎಂದು ಕೇಳಿದಳು. "ಒಬ್ಬ ಮನುಷ್ಯ ನನ್ನಲ್ಲಿರುವ ಹಣ್ಣಿಗಾಗಿ ನನ್ನ ಕೊಂಬೆ ಮುರಿದನು. ನನಗೆ ನೋವಾಗುತ್ತಿದೆ. ಆದ್ದರಿಂದ ನಾನು ಅಳುತ್ತಿದ್ದೇನೆ." ಎಂದು ಮರ ದುಃಖದಿಂದ ಹೇಳಿತು. ಮೀನುಗೆ ಬೇಸರವಾಯಿತು. ಅವಳಿಗೆ ಏನು ಮಾಡಬೇಕೆಂದು ತಿಳಿಯಲಿಲ್ಲ. ಸ್ವಲ್ಪ ಸಮಯದ ನಂತರ ಅವಳಿಗೆ ಒಂದು ಉಪಾಯ ಹೊಳೆಯಿತು. ಮನೆಗೆ ಓಡಿ ಹೋಗಿ ಒಂದು ಹಗ್ಗ ತಂದಳು. ಮರದ ಕೊಂಬೆಯನ್ನು ಮರಕ್ಕೆ ಜೋಡಿಸಿ ಗಟ್ಟಿಯಾಗಿ ಕಟ್ಟಿದಳು. "ಓ ದೇವರೇ, ಅದು ಅಂಟಿಕೊಳ್ಳಲಿಲ್ಲ". ಪುನಃ ಮನೆಗೆ ಹೋಗಿ ಅವಳು ಒಂದು ಸೆಲ್ಲೊ ಟೇಪನ್ನು ತಂದಳು. ಅದು ಕೂಡ ಕೆಲಸ ಮಾಡಲಿಲ್ಲ. ಆದರೆ ಮೀನು ಅದನ್ನು ಹಾಗೆ ಬಿಡಲು ತಯಾರಾಗಿರಲಿಲ್ಲ. ಹೊಸ ಉಪಾಯ ಮಾಡಿದಳು. ಅವಳು ಇನ್ನೊಂದು ಸಸಿಯನ್ನು ಆ ಮರದ ಹತ್ತಿರ ನೆಟ್ಟಳು. ತನ್ನ ಹತ್ತಿರವಿರುವ ಎಳೆಯ ಸಸಿಯನ್ನು ನೋಡಿ ಮರಕ್ಕೆ ತುಂಬಾ ಸಂತೋಷವಾಯಿತು ಮತ್ತು ಮೀನು ಕೂಡ ತುಂಬಾ ಖುಷಿಪಟ್ಟಳು.



Scanned with CamScanner

## ಮೀನು ಮತ್ತು ಮರ



### ಸೂಚನೆಗಳು

ಹಂತ 1. ಮೇಲಿನ ಕಥೆಯನ್ನು ಪರಿಚಯಿಸಿ. (ಮಕ್ಕಳೊಂದಿಗೆ ವಿಷಯದ ಬಗ್ಗೆ ಚರ್ಚಿಸುತ್ತಾ ಅದನ್ನು ಅವರ ದಿನನಿತ್ಯದ ಅನುಭವಗಳಿಗೆ ಹೋಲಿಸುವುದು. ಹಾಗೂ ಪುಸ್ತಕದ ಮುಖಪುಟವನ್ನು ತೋರಿಸುತ್ತಾ ಕಥೆ ಯಾವುದರ ಬಗ್ಗೆ ಇರಬಹುದು ಎಂಬುದರ ಕುರಿತು ಚರ್ಚಿಸಿ.)

ಹಂತ 2. ಶಿಕ್ಷಕರು ಕತೆಯನ್ನು ಹಾವಭಾವದಿಂದ ಧ್ವನಿಯ ಏರಿಳಿತಗಳೊಂದಿಗೆ ಎಲ್ಲಾ ಮಕ್ಕಳಿಗೂ ಕೇಳಿಸುವಂತೆ ಹೇಳುವುದು.

ಹಂತ 3. ಕಥೆ ಓದುತ್ತಾ ಹೋದಂತೆ ಅದಕ್ಕೆ ಸಂಬಂಧಿಸಿದ ಪ್ರತಿಧ್ವನಿ ಪ್ರಶ್ನೆಗಳನ್ನು ಕೇಳುತ್ತಾ ಹೋಗಿ ಮತ್ತು ಮುಖ್ಯ ಪದಗಳನ್ನು ವಿವರಿಸುತ್ತಾ ಕಥೆಯಲ್ಲಿನ ಮುಖ್ಯ ಪಾತ್ರಗಳು ಹಾಗೂ ಘಟನೆಗಳ ಕಡೆಗೆ ಗಮನ ಸೆಳೆಯುವುದು.

ಕತೆ ಹೇಳಿದ ನಂತರ ಅವರಿಗೆ ಅರ್ಥವಾಗಿದೆಯೇ? ಎಂದು ತಿಳಿಯಲು ಕಥೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುವುದು.

- ಮೀನುಳ ಅಮ್ಮ ಅವಳನ್ನು ಉದ್ಯಾನವನಕ್ಕೆ ಕರೆದುಕೊಂಡು ಹೋಗುತ್ತೇನೆಂದು ಮಾತು ಕೊಟ್ಟಿದ್ದರು. ಮೀನುಳ ಅಮ್ಮ ಮೀನುವಿಗೆ ಏನೆಂದು ಮಾತು ಕೊಟ್ಟಿದ್ದರು?
- ಮೀನುಳ ಮನೆಯ ಹತ್ತಿರ ತುಂಬಾ ಮರಗಳು, ಪಕ್ಷಿಗಳು, ಕೆಂಪು ಹೂವುಗಳು ಮತ್ತು ಚಿಟ್ಟೆಗಳಿದ್ದವು. ಮೀನುಳ ಮನೆಯ ಹತ್ತಿರ ಏನೇನು ಇದ್ದವು?
- ಮೀನು ಮರದ ಬಳಿ "ನಿನಗೆ ಏನಾಯಿತು?" ಎಂದು ಕೇಳಿದಳು. ಮೀನು ಮರದ ಬಳಿ ಏನೆಂದು ಕೇಳಿದಳು?

ಹಂತ 4. ಕಥೆ ಓದಿದ ಮೇಲೆ ಸರಳವಾದ ನೆನಪಿಸುವ ಮತ್ತು ಗ್ರಹಿಕೆಯ ಪ್ರಶ್ನೆಗಳನ್ನು ಕೇಳುವುದು.

- ಮರ ಏಕೆ ಅಳುತ್ತಿತ್ತು?
- ಮರದ ಕೊಂಬೆಯನ್ನು ಯಾರು ಮುರಿದಿದ್ದರು?
- ಮನುಷ್ಯನು ಮರದ ಕೊಂಬೆಯನ್ನು ಏಕೆ ಮುರಿದಿದ್ದನು?
- ಮರದ ಮುರಿದ ಕೊಂಬೆಯನ್ನು ಜೋಡಿಸಲು ಮೀನು ಮನೆಯಿಂದ ತಂದ ವಸ್ತುಗಳು ಯಾವವು?
- ಕೊನೆಗೆ ಮರವನ್ನು ಖುಷಿಪಡಿಸಲು ಮೀನು ಏನು ಮಾಡಿದಳು?

ಹಂತ 5. ಮಕ್ಕಳು ಕಥೆಯಲ್ಲಿನ ಪಾತ್ರಗಳೊಂದಿಗೆ ವ್ಯಕ್ತಪಡಿಸುವುದರ ಕುರಿತು ಸರಳ ಪ್ರಶ್ನೆಗಳನ್ನು ಕೇಳುವುದು.

- ಮರ ಅಳುತ್ತಿರುವುದನ್ನು ನೋಡಿ ಮೀನು ಏನು ಭಾವಿಸಿದಳೆಂದು ನೀವು ಯೋಚಿಸುತ್ತೀರಿ?
- ಮೀನು ಮರಕ್ಕೆ ಏಕೆ ಸಹಾಯ ಮಾಡಿದಳು ಎಂದು ನೀವು ಯೋಚಿಸುತ್ತೀರಿ?

ಹಂತ 6. ಮಕ್ಕಳು ಊಹೆ ಮಾಡಬೇಕಾದಂತಹ ಪ್ರಶ್ನೆಗಳನ್ನು ಕೇಳುವುದು.

- ಹಗ್ಗವು ಏಕೆ ಕೆಲಸ ಮಾಡಲಿಲ್ಲ?
- ಸೆಲ್ಲೊ ಟೇಪ್ ಏಕೆ ಕೆಲಸ ಮಾಡಲಿಲ್ಲ? (ಮರ ದೊಡ್ಡದು ಮತ್ತು ಕೊಂಬೆ ಭಾರವಾಗಿರುವುದು ಮತ್ತು ಮೀನು ಚಿಕ್ಕದಾದ, ಹಗುರವಾದ ಸೆಲ್ಲೊ ಟೇಪನ್ನು ಬಳಸಿದಳು ಎಂಬ ಅಂಶವನ್ನು ಗಮನಕ್ಕೆ ತರುವುದು)
- ಇದು ಒಂದು ಮರ ಅಲ್ಲ, ಒಂದು ಸಣ್ಣ ಗಿಡವಾಗಿದ್ದರೆ– ಸೆಲ್ಲೊ ಟೇಪ್ ಕೆಲಸ ಮಾಡುವುದೇ? ನಾವು ಪ್ರಯತ್ನಿಸೋಣವೇ? (ಒಂದು ಸಣ್ಣ ಗಿಡ ತಂದು ಒಂದು ಸಣ್ಣ ರೆಂಬೆಯನ್ನು ಅದಕ್ಕೆ ಸೆಲ್ಲೊ ಟೇಪಿನಿಂದ ಅಂಟಿಸಿ ಈಗ ರೆಂಬೆಯನ್ನು ಅಂಟಿಸಲು ಸಾಧ್ಯವೇ? ಎಂದು ಮಕ್ಕಳನ್ನು ಕೇಳಿ. ಮಕ್ಕಳಿಂದ ಬೇರೆ ಬೇರೆ ಉತ್ತರಗಳನ್ನು ಪಡೆಯಿರಿ).

ಹಂತ 7. ಕಥೆಯನ್ನು 2–4 ವಾಕ್ಯಗಳಲ್ಲಿ ವಿವರಿಸಲು ಮಕ್ಕಳಿಗೆ ಸಹಾಯ ಮಾಡುವುದು.



Scanned with CamScanner

## ಚಟುವಟಿಕೆ 1

## ಗೂಡನ್ನು ಕಟ್ಟುವುದು

### ಕಲಿಕಾ ಸಾಮಗ್ರಿಗಳು

ಅಭ್ಯಾಸ ಹಾಳೆ, ತೆಂಗಿನ ನಾರು, ಅಂಟು

### ಸೂಚನೆಗಳು

1. ಮಕ್ಕಳಿಗೆ ಅಭ್ಯಾಸ ಹಾಳೆ ಕೊಡುವುದು.
2. ತೆಂಗಿನ ನಾರು ಮತ್ತು ಅಂಟನ್ನು ಕೊಡುವುದು.
3. ತೆಂಗಿನ ನಾರನ್ನು ಕೊಟ್ಟಿರುವ ಗೂಡಿನ ರೇಖಾಕೃತಿಗೆ ಅಂಟಿಸಲು ಹೇಳುವುದು.
4. ಅವರು ಏನು ಮಾಡಿದರೆಂದು ಕೇಳಿ. ಈ ಚಟುವಟಿಕೆ ಅವರಿಗೆ ಇಷ್ಟವಾಯಿತೇ? ಎಂದು ಕೇಳಿ. ನಿಮ್ಮ ಬೆನ್ನು ನೀವೇ ತಟ್ಟಿಕೊಳ್ಳಿರಿ ಮಕ್ಕಳಿಗೆ ಅದೇ ರೀತಿ ಮಾಡಿಕೊಂಡು "ಶಹಭಾಸ್" ಎಂದು ಹೇಳಿಕೊಳ್ಳಲು ಹೇಳುವುದು.

---

## ಚಟುವಟಿಕೆ 2

## ಮಡಕೆಯ ಚಿತ್ರಬಂಧ ಮಾಡುವುದು

### ಕಲಿಕಾ ಸಾಮಗ್ರಿಗಳು

ಒಂದು ಮಡಕೆಯ ಆಕಾರದಲ್ಲಿ ಕತ್ತರಿಸಿದ ಹಳೆಯ ದಿನ ಪತ್ರಿಕೆ (12" X 12"), ಬಣ್ಣದ ಕಾಗದದ ಚೂರುಗಳು, ಅಂಟು.

### ಸೂಚನೆಗಳು

1. ಮಕ್ಕಳಿಗೆ ಹಳೆಯ ವಾರ್ತಾ ಪತ್ರಿಕೆಯಲ್ಲಿ ಕತ್ತರಿಸಿದ ದೊಡ್ಡ ಮಡಕೆಯ ಚಿತ್ರವನ್ನು ಕೊಡುವುದು.
2. ಬಣ್ಣದ ಕಾಗದದ ಚೂರು ಹಾಗೂ ಅಂಟನ್ನು ಕೊಡುವುದು.
3. ಬೇರೆ ಬೇರೆ ಬಣ್ಣದ ಕಾಗದಗಳನ್ನು ಉಪಯೋಗಿಸಿ (ಒಂದು ಗುಂಪಿಗೆ ಒಂದು ಬಣ್ಣದಂತೆ) ಮಡಕೆಯ ಚಿತ್ರದ ಮೇಲೆ ಅಂಟಿಸಲು ಹೇಳುವುದು.
4. ಒಂದು ಕಾರ್ಡ್‌ಬೋರ್ಡ್‌ನ ಮೇಲೆ ಮಡಕೆಯ ಚಿತ್ರವನ್ನು ಅಂಟಿಸಿ. ಈಗ ಮಡಕೆಯ ಚಿತ್ರವನ್ನು ಅದರ ಆಕಾರದಲ್ಲಿ ಕತ್ತರಿಸಿ. ನಂತರ 4 – 5 ಚಿತ್ರಬಂಧದ ತುಂಡುಗಳಾಗಿ ಕತ್ತರಿಸುವುದು.
5. ಈ ಚಿತ್ರಬಂಧವನ್ನು ತರಗತಿಯ ಚಟುವಟಿಕೆಯ ಜಾಗದಲ್ಲಿಟ್ಟು, ಮಕ್ಕಳಿಗೆ ಅವುಗಳನ್ನು ಬಣ್ಣಗಳ ಆಧಾರದ ಮೇಲೆ ಜೋಡಿಸಲು ಹೇಳುವುದು.



Scanned with CamScanner

ಚಟುವಟಿಕೆ 1


## ವಸ್ತುವನ್ನು ಊಹಿಸುವುದು

### ಕಲಿಕಾ ಸಾಮಗ್ರಿಗಳು

ಚೀಲ, ಚೂಪಾದ ಭಾಗಗಳಿರದ ನುಣುಪಾದ ಕಲ್ಲು, ರೆಂಬೆಗಳು, ಎಲೆಗಳು, ಹೂವುಗಳು, ಸ್ವಲ್ಪ ಹುಲ್ಲು, ತಕ್ಕಡಿ.

### ಸೂಚನೆಗಳು

1. ಒಂದು ತಕ್ಕಡಿಯನ್ನು ತರಗತಿ ಮಧ್ಯದಲ್ಲಿಟ್ಟು, ಅದರ ಜೊತೆಗೆ ಸ್ವಲ್ಪ ಎಲೆಗಳು ಮತ್ತು ರೆಂಬೆಗಳನ್ನು ಇರಿಸುವುದು.
2. ಇಬ್ಬರು ಮಕ್ಕಳನ್ನು ಕರೆದು ತಕ್ಕಡಿಯನ್ನು ಹಿಡಿದುಕೊಳ್ಳಲು ಹೇಳುವುದು.
3. ಇನ್ನೂ ಕೆಲವು ಮಕ್ಕಳಿಗೆ ಒಂದು ರೆಂಬೆಯನ್ನು ತಕ್ಕಡಿಯ ಒಂದು ತಟ್ಟೆಯಲ್ಲಿಡಲು ಹೇಳುವುದು.
4. ತಕ್ಕಡಿಯ ಇನ್ನೊಂದು ತಟ್ಟೆಯಲ್ಲಿ ಕೆಲವು ಎಲೆಗಳನ್ನು ಇಡಲು ಹೇಳುವುದು.
5. ತಕ್ಕಡಿಯಲ್ಲಿ ಏನಾದರೂ ಬದಲಾವಣೆ ಆಯಿತೇ ಎಂದು ಗಮನಿಸಲು ತಿಳಿಸುವುದು.
6. ಎಲೆಗಳಿದ್ದ ತಟ್ಟೆ ಕೆಳಗೆ ಹೋದರೆ, ಅದರಿಂದ ಕೆಲವು ಎಲೆಗಳನ್ನು ತೆಗೆದು ಈಗ ಏನಾಗುತ್ತದೆ ಎಂದು ಗಮನಿಸಲು ಹೇಳುವುದು.
7. ಇತರ ಬೇರೆ ಬೇರೆ ವಸ್ತುಗಳನ್ನು, ಉದಾಹರಣೆಗೆ ಒಂದು ದೊಡ್ಡ ಕಲ್ಲು ಮತ್ತು ಕೆಲವು ಕಲ್ಲಿನ ಚೂರುಗಳನ್ನು ಉಪಯೋಗಿಸಿ ಅದೇ ರೀತಿ ಪ್ರಯತ್ನಿಸಲು ಹೇಳುವುದು.
8. ನಂತರ ಅವರು ಈ ಚಟುವಟಿಕೆಯ ಬಗ್ಗೆ ಏನು ಯೋಚಿಸಿದರೆಂದು ಕೇಳುವುದು. ತಕ್ಕಡಿಯ ಒಂದು ತಟ್ಟೆ ಏಕೆ ಕೆಳಗೆ ಹೋಯಿತು? ಇತ್ಯಾದಿ...





Scanned with CamScanner

ಚಟುವಟಿಕೆ 2


## ಒಬ್ಬರನ್ನು ವಿಜೇತರನ್ನಾಗಿ ಮಾಡುವುದು

### ಕಲಿಕಾ ಸಾಮಗ್ರಿಗಳು

ಆರು ವಿವಿಧ ರೀತಿಯ ಎಲೆಗಳು, ಸೀಮೆಸುಣ್ಣ, ಆರು ವಿವಿಧ ರೀತಿಯ ಎಲೆಗಳನ್ನು ಅಂಟಿಸಿದ ಅಥವಾ ಅವುಗಳ ಚಿತ್ರಗಳಿರುವ ಕಾರ್ಡುಗಳು.

### ಸೂಚನೆಗಳು

1. ನೆಲದ ಮೇಲೆ ಆರು ಚೌಕಗಳನ್ನು ಬರೆದು ಒಂದೊಂದರಲ್ಲೂ ಒಂದೊಂದು ರೀತಿಯ ಎಲೆಯನ್ನು ಇಡುವುದು.
2. ಒಂದು ಹಾಡನ್ನು ಕೇಳಿಸಿ ಮತ್ತು ಮಕ್ಕಳು ಚೌಕಗಳ ಸುತ್ತಲೂ ಸುತ್ತಲು ಹೇಳುವುದು.
3. ಹಾಡನ್ನು ನಿಲ್ಲಿಸಿ ಮಕ್ಕಳು ಅವರು ಯಾವ ಚೌಕದ ಬಳಿ ಇರುವರೋ ಅಲ್ಲಲ್ಲೇ ಒಂದೊಂದು ಚೌಕದೊಳಗೆ ನಿಲ್ಲಲು ಹೇಳುವುದು.
4. ನಿಮ್ಮ ಕೈಯಲ್ಲಿರುವ ಆರು ಎಲೆಗಳ ಕಾರ್ಡುಗಳಲ್ಲಿ ಒಂದನ್ನು ಮೇಲೆತ್ತಿ ಹಿಡಿಯಿರಿ.
5. ನೀವು ಮೇಲೆತ್ತಿ ಹಿಡಿದ ಎಲೆಯ ಆಕಾರವಿರುವ ಚೌಕದಲ್ಲಿರುವ ಮಕ್ಕಳು ಆಟದಿಂದ ಹೊರಬೀಳುತ್ತಾರೆ. ಕೊನೆಗೆ ಒಂದೇ ಮಗು ಉಳಿಯುವವರೆಗೆ ಆಟ ಮುಂದುವರಿಸಿ. ಆ ಮಗುವೇ ಸ್ಪರ್ಧೆಯಲ್ಲಿ ವಿಜೇತನಾಗುತ್ತಾನೆ.





Scanned with CamScanner

ಚಟುವಟಿಕೆ 1

## ಪುಸ್ತಕದ ಓಟ



### ಕಲಿಕಾ ಸಾಮಗ್ರಿಗಳು

ಶಾಲೆಯ ಗ್ರಂಥಾಲಯದಲ್ಲಿರುವ ಪುಸ್ತಕಗಳು, ಇತರೆ ಯಾವುದೇ ಪುಸ್ತಕಗಳು.

### ಸೂಚನೆಗಳು

1. ಮಕ್ಕಳಿಗೆ ಪುಸ್ತಕವನ್ನು ತಲೆಯ ಮೇಲೆ ಇಟ್ಟುಕೊಳ್ಳಲು ಹೇಳುವುದು.
2. ತಲೆಯ ಮೇಲಿರುವ ಪುಸ್ತಕಗಳನ್ನು ಕೈಯಿಂದ ಹಿಡಿಯದೇ ಪುಸ್ತಕ ಕೆಳಗೆ ಬೀಳದಂತೆ ಕೊನೆಯವರೆಗೂ ಅವರು ಹೇಗೆ ನಡೆಯಬೇಕೆಂದು ನಡೆದು ತೋರಿಸುವುದು.
3. ಆರಂಭದ ಸ್ಥಳ ಮತ್ತು ಅಂತ್ಯದ ಸ್ಥಳವನ್ನು ಗುರುತಿಸಿ ಆರಂಭದ ಸ್ಥಳದಲ್ಲಿ ಮಕ್ಕಳನ್ನು ನಿಲ್ಲಿಸುವುದು.
4. ನೀವು "1, 2, 3, ಹೊರಡಿ" ಎಂದು ಹೇಳುವವರೆಗೆ ಪ್ರಾರಂಭಿಸಬಾರದೆಂದು ಹೇಳುವುದು.
5. ಪುಸ್ತಕಗಳು ಕೆಳಗೆ ಬೀಳದಂತೆ ಗುರಿ ತಲುಪಿದ ವಿದ್ಯಾರ್ಥಿಗಳನ್ನು ಪ್ರಶಂಸಿಸಿ, ಕೊನೆಯಲ್ಲಿ ಮಕ್ಕಳು ಅವರ ಪ್ರಯತ್ನಕ್ಕೆ ಒಬ್ಬರನ್ನೊಬ್ಬರು ಬೆನ್ನು ತಟ್ಟಲು ಹೇಳುವುದು.

---

ಚಟುವಟಿಕೆ 2

## ಚಿಟ್ಟೆಯನ್ನು ಗಿಡಕ್ಕೆ ಅಂಟಿಸುವುದು

### ಕಲಿಕಾ ಸಾಮಗ್ರಿಗಳು

ಸಸ್ಯವಿರುವ ಒಂದು ಚಿತ್ರಪಟ, ನಾಲ್ಕು ಚಿಟ್ಟೆಯ ಗೊಂಬೆಗಳು ಜೊತೆಗೆ ಇವುಗಳನ್ನು ಅಂಟಿಸಲು ಬೇಕಾಗುವ ಪಿನ್‌ಗಳು, ಕಣ್ಣುಕಟ್ಟಲು ಬಟ್ಟೆ

### ಸೂಚನೆಗಳು

1. ಸಸ್ಯದ ಚಿತ್ರಪಟವನ್ನು ಮಕ್ಕಳ ಕೈಗೆ ಎಟುಕುವಂತೆ ಶಾಲೆಯ ಒಳಗೆ ಅಥವಾ ಹೊರಗಿನ ಗೋಡೆಗೆ ತೂಗು ಹಾಕುವುದು.
2. ಕಣ್ಣು ಕಟ್ಟಿಕೊಂಡಾಗ ಚಿಟ್ಟೆಯನ್ನು ಹೇಗೆ ಸಸ್ಯದ ಚಿತ್ರಪಟಕ್ಕೆ ಅಂಟಿಸಬಹುದೆಂದು ತೋರಿಸುವುದು.
3. ಅಂಟಿಸಲು ಪ್ರಯತ್ನಿಸುವಾಗ ಮಗುವಿನ ಕೈ ಹೂವಿನ ಹತ್ತಿರ ಬಂದರೆ ಆಗ ಅವನ/ಳನ್ನು ಹುರಿದುಂಬಿಸಲು ಉಳಿದ ಮಕ್ಕಳಿಗೆ ಹೇಳುವುದು.
4. ಮಗುವಿನ ಕೈ ಇನ್ನೊಂದು ಚಿಟ್ಟೆಯ ಹತ್ತಿರ ಬಂದರೆ ಆಗ 'ಅದು ಅಲ್ಲ' ಎಂದು ಕೂಗುವಂತೆ ಉಳಿದ ಮಕ್ಕಳಿಗೆ ಹೇಳುವುದು.
5. ಮಕ್ಕಳು ಚಿಟ್ಟೆಯನ್ನು ಚಿತ್ರಪಟಕ್ಕೆ ಅಂಟಿಸಲು ಸಾಧ್ಯವಾಗದಿದ್ದರೂ ಪರವಾಗಿಲ್ಲ ಆದರೆ ಅವರ ಸ್ನೇಹಿತರು ಮಾಡುವ ಶಬ್ದಕ್ಕೆ ಕಿವಿಗೊಡಲು ಹೇಳುವುದು.
6. ನಾಲ್ಕು ಮಕ್ಕಳು ಒಬ್ಬರಾದ ಮೇಲೆ ಒಬ್ಬರಂತೆ ಚಿಟ್ಟೆಯನ್ನು ಸಸ್ಯದ ಚಿತ್ರಪಟಕ್ಕೆ ಅಂಟಿಸಲು ಹೇಳುವುದು ಮತ್ತು ಇದೇ ಆಟವನ್ನು ಮೊದಲಿನಿಂದ ಪ್ರಾರಂಭಿಸಿ.



Scanned with CamScanner

## ಮರಗಳು, ಪೊದೆಗಳು, ಮತ್ತು ಬಳ್ಳಿಗಳು

1. Dig the ground
2. Make a hole
3. Plant the seed

1. Dig the ground
2. Make a hole
3. Plant the seed

1. Dig the ground
2. Make a hole
3. Plant the seed

1. Pat the soil
2. Water the ground
3. Wait for the sun

1. Pat the soil
2. Water the ground
3. Wait for the sun

1. Pat the soil
2. Water the ground
3. Wait for the sun


Say
gesture
model

1. Dig the ground
2. Make a hole
3. Plant the seed
4. Pat the soil
5. Water the ground
6. Wait for the sun

1. Water the ground
2. Dig the ground
3. Plant the seed
4. Pat the soil
5. Wait for the sun
6. Make a hole



Scanned with CamScanner



ಪರಿಸರ ಜಗತ್ತು



# ಹಣ್ಣುಗಳು, ತರಕಾರಿಗಳು ಮತ್ತು ಬೀಜಗಳು



Scanned with CamScanner

# ಕಲಿಕಾ ಫಲಿತಗಳು

## ಉಪವಿಷಯ 5.3: ಹಣ್ಣುಗಳು, ತರಕಾರಿಗಳು ಮತ್ತು ಬೀಜಗಳು

### 3–4 ವರ್ಷಗಳು

1. ಎಲ್ಲಾ ಹೂವು, ಹಣ್ಣು ಮತ್ತು ಕೆಲವು ತರಕಾರಿಗಳಲ್ಲಿ ಬೀಜಗಳಿರುತ್ತವೆ ಸಾಮಾನ್ಯವಾಗಿ ಅದು ಅವುಗಳ ಒಳಗಿರುತ್ತದೆ ಎಂದು ತಿಳಿದುಕೊಳ್ಳುವರು.
2. ಸಸ್ಯಗಳು ಮೊಳೆತು ಬೆಳೆಯುವಲ್ಲಿ ಬೀಜವು ಪಾತ್ರ ವಹಿಸುತ್ತವೆ. (ಕೆಲವು ಬೀಜಗಳನ್ನು ತಿನ್ನಬಹುದು, ಇನ್ನೂ ಕೆಲವನ್ನು ತಿನ್ನಲಾಗುವುದಿಲ್ಲ).
3. ಸೂರ್ಯಕಾಂತಿ, ಕಿತ್ತಳೆ, ಟೊಮ್ಯಾಟೊ ಮತ್ತು ಕುಂಬಳಕಾಯಿ ಮುಂತಾದ ಬೀಜಗಳನ್ನು ಗುರುತಿಸಿ ಹೆಸರಿಸುವರು.
4. ಕಾಲಕ್ಕನುಗುಣವಾಗಿ ತರಕಾರಿ ಮತ್ತು ಹಣ್ಣುಗಳನ್ನು ಬೆಳೆಯುವುದು. (ಯಾವ ತರಕಾರಿ ಮತ್ತು ಹಣ್ಣನ್ನು ಹಸಿಯಾಗಿ ತಿನ್ನಬಹುದು. ಯಾವುದನ್ನು ಬೇಯಿಸಬೇಕು ಎನ್ನುವುದನ್ನು ಹಾಗೂ ತಿನ್ನುವುದಕ್ಕೆ ಮೊದಲು ಅವುಗಳನ್ನು ಸ್ವಚ್ಛಗೊಳಿಸುವುದನ್ನು ತಿಳಿದುಕೊಳ್ಳುವರು.)

### 4–5 ವರ್ಷಗಳು

1. ಭತ್ತ ಮತ್ತು ಗೋಧಿ ಕಾಳುಗಳು ಕೂಡ ಬೀಜಗಳಾಗಿದ್ದು ತಿಳಿದುಕೊಳ್ಳುವುದು. ಹುಲ್ಲಿನಂತಹ ಗಿಡಗಳಲ್ಲಿ ಬೆಳೆಯುವ ಇವುಗಳಿಂದ ಇನ್ನೂ ಹೆಚ್ಚು ಗಿಡಗಳನ್ನು ಬೆಳೆಸಬಹುದೆಂದು ಅರ್ಥೈಸಿಕೊಳ್ಳುವರು.
2. ಧಾನ್ಯಗಳಾದ ಅಕ್ಕಿ, ಗೋಧಿ ಮತ್ತು ಜೋಳವನ್ನು ಹೆಸರಿಸಿ ವಿವರಿಸುವರು.
3. ಧಾನ್ಯಗಳು ಯಾವ ರೀತಿ ನಮ್ಮ ಆಹಾರದ ಮುಖ್ಯ ಭಾಗವಾಗಿವೆ ಮತ್ತು ಅವುಗಳಿಂದ ಆಹಾರವನ್ನು ಹೇಗೆ ತಯಾರಿಸುವುದು ಹಾಗೂ ಸೇವಿಸುವುದು ಎಂದು ಅರ್ಥೈಸಿಕೊಳ್ಳುವರು.
4. ಧಾನ್ಯಗಳನ್ನು ಬಿತ್ತುವ ಮತ್ತು ಕೊಯ್ಯುವ ವರ್ಷದ ವಿವಿಧ ಋತುಗಳನ್ನು ತಿಳಿದುಕೊಳ್ಳುವರು.

### 5–6 ವರ್ಷಗಳು

1. ದ್ವಿದಳ ಧಾನ್ಯ ಮತ್ತು ಒಣ ಹಣ್ಣು ಕೂಡ ಬೀಜಗಳಾಗಿದ್ದು ಅವು ಗಿಡಗಳಿಂದ ದೊರೆಯುತ್ತವೆ.
2. ತರಕಾರಿ ಮತ್ತು ಹಣ್ಣುಗಳಂತೆ ಧಾನ್ಯ, ಬೇಳೆ ಮತ್ತು ಕಾಯಿಗಳ ರೂಪದಲ್ಲಿಯೂ ಸಸ್ಯಗಳು ಆಹಾರ ಹೊಂದಿರುತ್ತವೆ.
3. ಸಾಮಾನ್ಯವಾದ ಬೇಳೆಗಳಾದ ಉದ್ದು, ಹೆಸರು, ಕಡಲೆ, ಕಡಲೆಕಾಯಿ (ಶೇಂಗಾ), ರಾಜ್ಮಾ ಮತ್ತು ಬಾದಾಮಿಗಳನ್ನು ಹೆಸರಿಸುವರು. ಅವುಗಳನ್ನು ತಿನ್ನುವ ವಿಧಾನವನ್ನು ತಿಳಿಯುವರು.
4. ಬೇಳೆ ಮತ್ತು ಕಾಳುಗಳು ಹೇಗೆ ನಮ್ಮ ಆಹಾರದ ಪ್ರಮುಖ ಭಾಗವಾಗಿವೆ ಹಾಗೂ ಅವುಗಳನ್ನು ಆಹಾರವಾಗಿ ಸೇವಿಸುವ ಕ್ರಮವನ್ನು ಅರ್ಥೈಸಿಕೊಳ್ಳುವರು.
5. ಧಾನ್ಯಗಳನ್ನು ಬೆಳೆಸಿ ಶೇಖರಿಸುವಾಗ ಕೀಟಗಳಿಂದ ಅವನ್ನು ಹೇಗೆ ರಕ್ಷಿಸುವುದು ಎನ್ನುವುದನ್ನು ಅರಿಯುವರು.

Scanned with CamScanner

ಉಪವಿಷಯ 5.3

## ಹಣ್ಣುಗಳು, ತರಕಾರಿಗಳು ಮತ್ತು ಬೀಜಗಳು



### ಕಲಿಕಾ ಉದ್ದೇಶಗಳು

- ಭತ್ತ ಮತ್ತು ಗೋಧಿ ಕಾಳುಗಳು ಕೂಡ ಬೀಜಗಳೆಂದು ತಿಳಿದು. ಇವುಗಳು ಹುಲ್ಲಿನಂತಹ ಗಿಡಗಳಲ್ಲಿ ಬೆಳೆಯುತ್ತವೆ ಹಾಗೂ ಇವುಗಳಿಂದ ಇನ್ನೂ ಹೆಚ್ಚು ಗಿಡಗಳನ್ನು ಬೆಳೆಸಬಹುದೆಂದು ಅರ್ಥಮಾಡಿಕೊಳ್ಳುವರು.
- ಧಾನ್ಯಗಳಾದ ಅಕ್ಕಿ, ಗೋಧಿ ಮತ್ತು ಜೋಳಗಳನ್ನು ಹೆಸರಿಸಿ ವಿವರಿಸುವರು.
- ಧಾನ್ಯಗಳು ಯಾವ ರೀತಿ ನಮ್ಮ ಆಹಾರದ ಮುಖ್ಯ ಭಾಗವಾಗಿವೆ ಮತ್ತು ಅವುಗಳಿಂದ ಆಹಾರವನ್ನು ಹೇಗೆ ತಯಾರಿಸುವುದು ಮತ್ತು ಸೇವಿಸುವುದು ಎಂದು ಅರ್ಥಮಾಡಿಕೊಳ್ಳುವರು.
- ಧಾನ್ಯಗಳನ್ನು ಬಿತ್ತುವ ಮತ್ತು ಕೊಯ್ಯುವ ವರ್ಷದ ವಿವಿಧ ಕಾಲಗಳನ್ನು ತಿಳಿದುಕೊಳ್ಳುವರು.




Scanned with CamScanner

ಸಂಭಾಷಣೆ 1



## ಕಾಳುಗಳು ಕೂಡ ಬೀಜಗಳು



### ಕಲಿಕಾ ಫಲಿತಗಳು

ಈ ಸಂಭಾಷಣೆಯ ಕೊನೆಯಲ್ಲಿ ಮಕ್ಕಳು ಕೆಳಗಿನವುಗಳನ್ನು ಅರಿಯುವರು.

- ಭತ್ತ ಮತ್ತು ಗೋಧಿಯ ಕಾಳುಗಳು ಸಹ ಬೀಜಗಳೆಂದು ಹಾಗೂ ಅವುಗಳಿಂದ ಇನ್ನೂ ಹೆಚ್ಚುಗಿಡಗಳನ್ನು ಬೆಳೆಸಬಹುದೆಂದು ಅರ್ಥಮಾಡಿಕೊಳ್ಳುವರು.

### ಕಲಿಕಾ ಸಾಮಗ್ರಿಗಳು

- ಬೀಜವಿರುವ ಯಾವುದೇ ಹಣ್ಣು ಮತ್ತು ಬೀಜವಿರುವ ಯಾವುದೇ ತರಕಾರಿ.
- **ಮಿಂಚುಪಟ್ಟಿಯ ಸರಣಿ F5.3.1** – ಬೀಜವಿರುವ ಹಣ್ಣುಗಳು: 1. ದ್ರಾಕ್ಷಿ 2. ಮಾವಿನಹಣ್ಣು 3. ಹಲಸಿನ ಹಣ್ಣು 4. ಸೀಬೆಹಣ್ಣು 5. ಬಾಳೆಹಣ್ಣು 6. ಕಿತ್ತಳೆ ಹಣ್ಣು 7. ಕಲ್ಲಂಗಡಿ ಹಣ್ಣು 8. ಲಿಚ್ಚಿ ಹಣ್ಣು.
- **ಮಿಂಚುಪಟ್ಟಿಯ ಸರಣಿ F5.3.2:** ಬೀಜವಿರುವ ತರಕಾರಿಗಳು 1. ಟೊಮೆಟೊ 2. ಬೆಂಡೆಕಾಯಿ 3. ಹಾಗಲಕಾಯಿ 4. ಕುಂಬಳಕಾಯಿ 5. ಸೌತೆಕಾಯಿ
- **ಮಿಂಚುಪಟ್ಟಿಯ ಸರಣಿ F5.3.3:** ಅಕ್ಕಿ, ಗೋಧಿ ಮತ್ತು ಜೋಳ

### ಶಿಕ್ಷಕರ ಪೂರ್ವಸಿದ್ಧತೆ

1. ತರಗತಿಗೆ ಮುನ್ನ ಮಿಂಚುಪಟ್ಟಿಗಳು ಮತ್ತು ಬೇಕಾಗುವ ಇತರೆ ಸಾಮಗ್ರಿಗಳನ್ನು ಸಿದ್ಧಪಡಿಸಿಟ್ಟುಕೊಳ್ಳುವುದು.
2. ಸ್ಥಳೀಯವಾಗಿ ದೊರೆಯುವ ಬೀಜಗಳಿರುವ ಕೆಲವು ಹಣ್ಣುಗಳು ಮತ್ತು ತರಕಾರಿಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುವುದು.
3. ಒಂದೊಂದು ಮುಷ್ಟಿಯಾಗುವಷ್ಟು ಅಕ್ಕಿ /ಭತ್ತ, ಗೋಧಿ, ಮತ್ತು ಜೋಳಗಳನ್ನು ದಿನಪತ್ರಿಕೆಯಲ್ಲಿ ಸುತ್ತಿ ಇಟ್ಟುಕೊಳ್ಳುವುದು.

### ಸೂಚನೆಗಳು

**ಹಂತ 1: ಹಿಂದೆ ಕಲಿತ ಹಣ್ಣುಗಳು ಮತ್ತು ತರಕಾರಿಗಳಲ್ಲಿ ಬೀಜಗಳಿರುತ್ತವೆ ಎಂಬುದನ್ನು ಪುನರಾವರ್ತಿಸಿ**

1. ಚಿತ್ರಪಟ P5.1.1ನ್ನು ತೋರಿಸಿ ಅದರಲ್ಲಿ ಏನಿದೆ ಎಂದು ವಿವರಿಸಲು ಮಕ್ಕಳಿಗೆ ಹೇಳಿ. ತೆಂಗಿನ ಮರದಲ್ಲಿನ ತೆಂಗಿನಕಾಯಿ, ಬಾಳೆಗಿಡದಲ್ಲಿನ ಬಾಳೆಹಣ್ಣು ಮತ್ತು ಮಾವಿನ ಮರದಲ್ಲಿನ ಮಾವಿನ ಹಣ್ಣುಗಳನ್ನು ತೋರಿಸಿ.
2. "ಈ ಸಸ್ಯಗಳು ಹೇಗೆ ಬೆಳೆಯುತ್ತವೆ ಎಂದು ನಿಮಗನಿಸುತ್ತದೆ?" ಎಂದು ಕೇಳುವುದು.
3. ಅವರು ತಂದಿರುವ ಯಾವುದಾದರೊಂದು ಹಣ್ಣನ್ನು ಬಿಡಿಸಿ ಅದರ ಒಳಗೆ ಏನಿದೆ ಎಂದು ತೋರಿಸಿ ಅವರು ಗಮನಿಸಿರುವುದನ್ನು ವಿವರಿಸಲು ಹೇಳುವುದು.
4. **ಮಿಂಚುಪಟ್ಟಿಯ ಸರಣಿ** F5.3.1 ತೋರಿಸಿ. "ಹಣ್ಣಿನ ಒಳಭಾಗ ಹೇಗೆ ಕಾಣಿಸುತ್ತಿದೆ, ಅದರಲ್ಲಿ ತಿರುಳು ಇದೆಯೇ? ಗಟ್ಟಿಯಾಗಿದೆಯೇ?"ಎಂದು ಕೇಳುವುದು.
5. ಹಣ್ಣಿನ ಒಳಗಿರುವ ಈ ಚಿಕ್ಕವುಗಳು ಏನು ಎಂದು ಯಾರಾದರೂ ಹೇಳಬಲ್ಲಿರಾ? ಅವುಗಳನ್ನು ಏನೆಂದು ಕರೆಯುತ್ತಾರೆ?
6. **ಮಿಂಚುಪಟ್ಟಿಯ ಸರಣಿ** F5.3.2 ತೋರಿಸಿ. ತರಕಾರಿಗಳನ್ನೂ ಬಿಡಿಸಿ ತೋರಿಸಿ ಇದೇ ಪ್ರಶ್ನೆಗಳನ್ನು ಪುನರಾವರ್ತಿಸಿ.



Scanned with CamScanner



7. ಹಣ್ಣುಗಳಿಂದ ಮತ್ತು ತರಕಾರಿಗಳಿಂದ ಬೀಜಗಳನ್ನು ಬಿಡಿಸಿ ಅವುಗಳನ್ನು ಒಂದು ಕಾಗದದಲ್ಲಿ ತರಗತಿಯ ಮಧ್ಯದಲ್ಲಿ ಎಲ್ಲರಿಗೂ ಕಾಣುವ ಹಾಗೆ ಇಡಿ. ಮಕ್ಕಳು ಇವುಗಳನ್ನು ಈ ಮೊದಲೆ ಎಲ್ಲಿಯಾದರೂ ನೋಡಿದ್ದೀರಾ? ಹಾಗಾದರೆ ಎಲ್ಲಿ? ಎಂದು ಕೇಳುವುದು.
8. ಒಂದು ಬೀಜವನ್ನು ತೋರಿಸಿ ಅದು ಯಾವ ಹಣ್ಣು / ತರಕಾರಿಯದು ಎಂದು ಕೇಳುವುದು.
9. ಹೆಚ್ಚಿನ ಹಣ್ಣು ಮತ್ತು ತರಕಾರಿಗಳಲ್ಲಿ ಬೀಜಗಳಿರುತ್ತವೆ ಮತ್ತು ಕೆಲವನ್ನು ನಾವು ತಿನ್ನುತ್ತೇವೆ. ಇನ್ನು ಕೆಲವನ್ನು ತಿನ್ನುವುದಿಲ್ಲ ಎಂಬುದರ ಬಗ್ಗೆ ಅವರ ಗಮನ ಸೆಳೆಯುವುದು ಹಾಗು ಪ್ರಶ್ನಿಸುವುದು. ಮಿಂಚುಪಟ್ಟಿ F5.3.1, F5.3.3ನ್ನು ತೋರಿಸಿ.
   - "ಹಣ್ಣುಗಳು ಮತ್ತು ತರಕಾರಿಗಳ ಜೊತೆಗೆ ಅವುಗಳ ಬೀಜಗಳನ್ನೂ ತಿನ್ನುವ ಕೆಲವು ಹಣ್ಣು ಮತ್ತು ತರಕಾರಿಗಳನ್ನು ಹೆಸರಿಸಬಲ್ಲಿರಾ?" ಎಂದು ಮಕ್ಕಳನ್ನು ಕೇಳಿ. ಉದಾಹರಣೆಗೆ: ಸೀಬೆಹಣ್ಣು, ಟೊಮ್ಯಾಟೊ, ದಾಳಿಂಬೆ, ಸೌತೆಕಾಯಿ ಇತ್ಯಾದಿ...
   - "ಬೀಜಗಳನ್ನು ತೆಗೆದು ತಿನ್ನುವ ಹಣ್ಣುಗಳು ಮತ್ತು ತರಕಾರಿಗಳನ್ನು ಹೆಸರಿಸಬಲ್ಲಿರಾ?" ಎಂದು ಮಕ್ಕಳನ್ನು ಕೇಳುವುದು. ಉದಾಹರಣೆಗೆ: ಹಲಸಿನ ಹಣ್ಣು, ದ್ರಾಕ್ಷಿ, ಕುಂಬಳಕಾಯಿ, ಸೋರೆಕಾಯಿ, ಹಾಗಲಕಾಯಿ ಇತ್ಯಾದಿ...
   - ಆದರೆ ನಾವು ಕೆಲವು ಬೀಜಗಳನ್ನು ತಿನ್ನುವುದಿಲ್ಲ. ಆದರೂ ಅದು ಏಕೆ ಇದೆ? ಪ್ರಕೃತಿಯು ಅದನ್ನು ಏಕೆ ಅಲ್ಲಿ ಇರಿಸಿದೆ? ಅದರ ಪಾತ್ರವೇನು?
   - ಮಕ್ಕಳು ಇದರ ಬಗ್ಗೆ ಸ್ವಲ್ಪ ಯೋಚಿಸಿ ಉತ್ತರ ಕೊಡಲು ಪ್ರಯತ್ನಿಸಲು ಅವಕಾಶ ಕೊಡುವುದು.
10. ಹಣ್ಣುಗಳು ಮತ್ತು ತರಕಾರಿಗಳಲ್ಲಿರುವ ಬೀಜಗಳನ್ನು ಶೇಖರಿಸಿ ಇಟ್ಟುಕೊಂಡು ಮುಂದೆ ಹೊಸ ಗಿಡಗಳನ್ನು ಬೆಳೆಸಲು ಉಪಯೋಗಿಸುತ್ತೇವೆ. ಎನ್ನುವುದರೊಂದಿಗೆ ಚರ್ಚೆಯನ್ನು ಪೂರ್ಣಗೊಳಿಸಿ.

### ಹಂತ 2: ಧಾನ್ಯಗಳೂ ಕೂಡ ಬೀಜಗಳು

1. ಮಿಂಚುಪಟ್ಟಿ F5.3.3ನ್ನು ತೋರಿಸಿ– ಅದರಲ್ಲಿರುವ ಗಿಡ ಮತ್ತು ಧಾನ್ಯಗಳನ್ನು, ಗಿಡಗಳ ಗುಣಲಕ್ಷಣಗಳನ್ನು ವಿವರಿಸಲು ಹೇಳಿ. ಅವರು ಹೇಳಿರುವುದಕ್ಕೆ ಇನ್ನೂ ಕೆಲವು ಅಂಶಗಳನ್ನು ಸೇರಿಸುತ್ತಾ ಇವುಗಳು ಹುಲ್ಲಿನಂತಿರುವ ಸಸ್ಯಗಳು, ಇವುಗಳಲ್ಲಿ ಧಾನ್ಯ ಬೆಳೆಯುತ್ತದೆ ಎಂದು ವಿವರಿಸುವರು.
2. ಬಟ್ಟಲುಗಳಲ್ಲಿಟ್ಟಿರುವ ಅಕ್ಕಿ, ಗೋಧಿ, ಜೋಳದ ಧಾನ್ಯಗಳನ್ನು ತೋರಿಸಿ. "ಅವುಗಳನ್ನು ಎಲ್ಲಿ ನೋಡಿದ್ದೀರಿ? ಅವುಗಳಿಂದ ಏನು ಮಾಡುತ್ತೇವೆ?" ಎಂದು ಮಕ್ಕಳನ್ನು ಕೇಳುವುದು.
3. ಇವು ಧಾನ್ಯಗಳು ಮತ್ತು ಇವುಗಳನ್ನು ನಾವು ಬೇಯಿಸಿ ತಿನ್ನುತ್ತೇವೆ. ಎಂದು ಹೇಳುತ್ತಾ ಮುಕ್ತಾಯಗೊಳಿಸಿ.
4. "ಬೀಜಗಳನ್ನು ಬಿತ್ತಿ ತರಕಾರಿ ಮತ್ತು ಗಿಡಗಳನ್ನು ಬೆಳೆದರೆ, ಅಕ್ಕಿ/ಭತ್ತ, ಗೋಧಿ ಅಥವಾ ಜೋಳಗಳನ್ನು ಬೆಳೆಯಲು ಏನನ್ನು ಬಿತ್ತುತ್ತೇವೆ?" ಎಂದು ಕೇಳುತ್ತಾ ಮಕ್ಕಳ ಉತ್ತರಕ್ಕಾಗಿ ಕಾಯಿರಿ.
5. ಬೀಜದಿಂದ ಗಿಡ ಹೇಗೆ ಬೆಳೆಯುತ್ತದೆಂದು ತಿಳಿಸಿ. ಬೀಜದಿಂದ ನೆಲದೊಳಕ್ಕೆ ಬೇರು ಹುಟ್ಟುತ್ತದೆ ಅದು ಕಾಂಡವಾಗಿ ಬೆಳೆದು ನೆಲದ ಮೇಲೆ ಗಿಡವಾಗಿ ಬೆಳೆಯುತ್ತದೆ ಎಂದು ವಿವರಿಸುವರು.
6. ನಾವು ಭತ್ತವನ್ನೂ ಕೂಡ ಬಿತ್ತಿ ಹೆಚ್ಚು ಭತ್ತ ಬೆಳೆಯುತ್ತೇವೆ ಎಂದು ವಿವರಿಸಿ.

### ಹಂತ 3: ಹಣ್ಣುಗಳು, ತರಕಾರಿಗಳು ಮತ್ತು ಧಾನ್ಯಗಳು ಬೆಳೆಯುವ ಕಾಲಗಳು

1. ಕೆಲವು ಹಣ್ಣುಗಳು ಮತ್ತು ತರಕಾರಿಗಳು ವರ್ಷಪೂರ್ತಿ ಸಿಗುವುದಿಲ್ಲ ಎನ್ನುವುದರೊಂದಿಗೆ ಪ್ರಾರಂಭಿಸಿ. ಅವುಗಳು ಕೆಲವು ನಿರ್ದಿಷ್ಟ ಸಮಯದಲ್ಲಿ ಮಾತ್ರ ಸಿಗುತ್ತವೆ. ರೈತರಿಗೆ ಯಾವಾಗ ಹಣ್ಣುಗಳನ್ನು ಮತ್ತು ತರಕಾರಿಗಳನ್ನು ಬೆಳೆಯಬೇಕೆಂದು ತಿಳಿದಿರುತ್ತದೆ.
2. ಹೇಗೆ ಹಣ್ಣುಗಳು ಮತ್ತು ತರಕಾರಿಗಳು ಕೆಲವು ಸಮಯದಲ್ಲಿ ಬೆಳೆಯುತ್ತವೆಯೋ ಅದೇ ರೀತಿ ಧಾನ್ಯಗಳನ್ನೂ ಕೂಡ ನಿರ್ದಿಷ್ಟ ಸಮಯದಲ್ಲಿ ಬೆಳೆಯಬೇಕಾಗುತ್ತದೆ ಎಂದು ಹೇಳುವುದು.
3. ಮಿಂಚುಪಟ್ಟಿ F5.3.3 ತೋರಿಸಿ. ಈ ಗಿಡಗಳು ವರ್ಷದ ಬೇರೆ ಬೇರೆ ಹೇಳುವುದು ಬೆಳೆಸಿರುವುದೆಂದು ವಿವರಿಸಿ. ಗಿಡಗಳು ಬೆಳೆದು ನಮಗೆ ತಿನ್ನಲು ಬೇಕಾದ ಬೀಜಗಳನ್ನು ಉತ್ಪಾದಿಸಲು ಸೂಕ್ತ ಹವಾಮಾನವು ತುಂಬಾ ಮುಖ್ಯವಾದುದು ಎಂದು ತಿಳಿಸುವುದು.



Scanned with CamScanner

ಸಂಭಾಷಣೆ 2

# ನನ್ನ ಸುತ್ತಮುತ್ತಲಿರುವ ಸಾಮಾನ್ಯ ಧಾನ್ಯಗಳು





## ಕಲಿಕಾ ಫಲಿತಗಳು

ಈ ಸಂಭಾಷಣೆಯ ಕೊನೆಯಲ್ಲಿ ಮಕ್ಕಳು ಕೆಳಗಿನವುಗಳನ್ನು ಅರಿಯುವರು.

- ಸಾಮಾನ್ಯ ಧಾನ್ಯಗಳಾದ ಅಕ್ಕಿ, ಗೋಧಿ, ಜೋಳವನ್ನು ಹೆಸರಿಸಿ ವಿವರಿಸುವರು.

## ಕಲಿಕಾ ಸಾಮಗ್ರಿಗಳು

ಮಿಂಚುಪಟ್ಟಿಯ ಸರಣಿ F5.3.3: ಅಕ್ಕಿ, ಗೋಧಿ, ಜೋಳ, ಹಣ್ಣು ಮತ್ತು ತರಕಾರಿಗಳ ಬೀಜಗಳು.

## ಶಿಕ್ಷಕರ ಪೂರ್ವಸಿದ್ಧತೆ

ಧಾನ್ಯಗಳು, ಸೂರ್ಯಕಾಂತಿ, ಕುಂಬಳಕಾಯಿ ಮತ್ತು ಇತರ ಸಸ್ಯಗಳ ಬೀಜಗಳನ್ನು ಚಿಕ್ಕ ಬಟ್ಟಲುಗಳಲ್ಲಿ ಹಾಕಿ. ಮಿಂಚುಪಟ್ಟಿಗಳನ್ನು ಮತ್ತು ಇತರ ಸಲಕರಣೆಗಳನ್ನು ಸಿದ್ಧಪಡಿಸಿಟ್ಟುಕೊಳ್ಳಿ.

## ಸೂಚನೆಗಳು

### ಹಂತ 1: ಬೀಜಗಳನ್ನು ವಿವರಿಸಿ ಹೆಸರಿಸಿ

1. ವಿವಿಧ ಬೀಜಗಳನ್ನು ತರಗತಿಯ ಬೇರೆ ಬೇರೆ ಜಾಗಗಳಲ್ಲಿ ಬಚ್ಚಿಡುವುದು.
2. ಮಕ್ಕಳನ್ನು 4–5 ಸಣ್ಣ ಸಣ್ಣ ಗುಂಪುಗಳಾಗಿ ವಿಂಗಡಿಸುವುದು.
3. ಪ್ರತಿ ಗುಂಪಿಗೂ ಒಂದೊಂದು ಬಟ್ಟಲನ್ನು ಹುಡುಕಿ ಅದನ್ನು ತರಗತಿಯ ಮಧ್ಯಕ್ಕೆ ತರಲು ಹೇಳುವುದು.
4. ಸಂಗ್ರಹಿಸಿದ ಎಲ್ಲಾ ಬೀಜಗಳನ್ನು ತರಗತಿಯ ಮಧ್ಯದಲ್ಲಿಡಿ.
5. ಮಿಂಚುಪಟ್ಟಿಗಳ ಸರಣಿ F5.3.1, F5.3.2, F5.3.3 ಚಿತ್ರಗಳನ್ನು ಕೆಲವು ಬೀಜಗಳ ಜೊತೆಗೆ ಇರಿಸಿ. (ಚಿತ್ರದಲ್ಲಿರುವ ಹಣ್ಣುಗಳು, ತರಕಾರಿಗಳು ಮತ್ತು ಬೀಜಗಳ ಜೊತೆಗೆ ನೀವು ಇರಿಸಿರುವ ಬೀಜಗಳು ಹೊಂದಾಣಿಕೆ ಆಗುತ್ತದೆಯೇ ಎಂದು ಖಾತ್ರಿಮಾಡಿಕೊಳ್ಳುವುದು.)
6. ಒಂದು ಮಗುವನ್ನು ಆಯ್ಕೆ ಮಾಡಿ ಆ ಮಗುವಿಗೆ ಒಂದು ಬೀಜವನ್ನು ಕೊಟ್ಟು ಅದನ್ನು ಮಿಂಚುಪಟ್ಟಿಯಲ್ಲಿನ ಸರಿಯಾದ ಹಣ್ಣು / ತರಕಾರಿ/ ಧಾನ್ಯ ಚಿತ್ರದ ಜೊತೆಗೆ ಹೊಂದಿಸಿ ಹೆಸರಿಸಲು ಹೇಳುವುದು.
7. ಅಕ್ಕಿ, ಗೋಧಿ, ಜೋಳ ಈ ಮೂರರ ಕೆಲವು ಕಾಳುಗಳನ್ನು ತೆಗೆದುಕೊಂಡು ಅವುಗಳ ಗುಣಲಕ್ಷಣಗಳಾದ ಬಣ್ಣ, ಮೇಲ್ಮೈರಚನೆ (ಟೆಕ್ಸ್ಚರ್) ಮತ್ತು ಆಕಾರಗಳ ಬಗ್ಗೆ ಮಾತನಾಡುವುದು.
8. ಬೇರೆ ಬೇರೆ ಬೀಜಗಳನ್ನು ಅವುಗಳ ಚಿತ್ರಗಳ ಜೊತೆ ಹೊಂದಿಸಿ ಪ್ಲಾಸ್ಟಿಕ್ ಚೀಲಗಳಲ್ಲಿ ಹಾಕಿ ಅವುಗಳನ್ನು ತರಗತಿಯಲ್ಲಿ ಗೋಡೆಗೆ ನೇತುಹಾಕುವುದು.



Scanned with CamScanner



### ಹಂತ 2: ಬೀಜಗಳು ಹೊಸ ಗಿಡಗಳು ಬೆಳೆಯಲು ಸಹಾಯ ಮಾಡುತ್ತವೆ

1. ಹೊಸ ಗಿಡಗಳು ಎಲ್ಲಿಂದ ಬರುತ್ತವೆ? ಬೀಜಗಳಿಂದ ಜನರು ಏನು ಮಾಡುತ್ತಾರೆ? ಎಂಬುದನ್ನು ನೀವು ಎಂದಾದರೂ ಯೋಚಿಸಿದ್ದೀರಾ ಅಥವಾ ಗಮನಿಸಿದ್ದೀರಾ? ಎಂದು ಕೇಳುತ್ತಾ..
2. "ಪ್ರಿಯಾ ಮತ್ತು ಅವಳ ಗಿಡ" ಕತೆಯನ್ನು ಪುನರಾವರ್ತಿಸಿ. ಪ್ರಿಯಾಳು ಅವಳ ತಾಯಿ ಕೊಟ್ಟ ಬೀಜಗಳನ್ನು ಕೈತೋಟದಲ್ಲಿ ಬಿತ್ತಿರುವುದನ್ನು ಜ್ಞಾಪಿಸಿ. ಪ್ರಿಯಾಳು ಹೇಗೆ ಗಿಡಗಳು ಬೆಳೆಯುವುದನ್ನು ನೋಡಲು ಕಾಯುತ್ತಿದ್ದಳು. ಒಂದು ದಿನ ಮಳೆ ಬಂದ ಮೇಲೆ ಒಂದು ಸಣ್ಣ ಗಿಡ ಆ ಬೀಜದಿಂದ ಹುಟ್ಟಿರುವುದನ್ನು ನೋಡಿದಳು. ನಂತರ ಗಿಡವು ಹೇಗೆ ಎತ್ತರವಾಗಿ ಬೆಳೆಯಿತು ಎಂಬುದನ್ನು ಜ್ಞಾಪಿಸುವುದು.
3. ಗಿಡಗಳು ಬೆಳೆಯುತ್ತಿದ್ದಂತೆ ನಿಧಾನವಾಗಿ ಅವುಗಳಲ್ಲಿ ಹೂವು/ ಕಾಯಿ. ಹಣ್ಣುಗಳು ಬೆಳೆಯುತ್ತವೆ. ಇವುಗಳಲ್ಲಿ ಹೆಚ್ಚು ಬೀಜಗಳು ಇರುತ್ತವೆ.
4. ಮಿಂಚುಪಟ್ಟಿಗಳ ಸರಣಿ F5.3.3 ನ್ನು ತೋರಿಸುವುದು: ಭತ್ತ, ಗೋಧಿ, ಜೋಳಗಳನ್ನು ತೋರಿಸಿ ಈ ಬೀಜಗಳೂ ಕೂಡ ಹೊಸ ಸಸ್ಯಗಳು ಬೆಳೆಯಲು ಸಹಾಯಮಾಡುತ್ತವೆ ಎಂದು ತಿಳಿಸಿ. ಭತ್ತದ ಪೈರು, ಗೋಧಿಯ ಪೈರು, ಜೋಳದ ಪೈರನ್ನು ಮತ್ತು ಅವುಗಳ ಬೀಜಗಳನ್ನು ತೋರಿಸಿ. ಈ ಸಸ್ಯಗಳಲ್ಲಿ ಧಾನ್ಯಗಳು ಬೆಳೆಯುತ್ತವೆ. ಮತ್ತು ಅವುಗಳನ್ನು ಬೇಯಿಸಿ ತಿನ್ನುತ್ತೇವೆ. ಆದರೆ ತಯಾರಿಸುವ ಆಹಾರಕ್ಕನುಗುಣವಾಗಿ ಮಾಡುವ ವಿಧಾನ ಬೇರೆಯಾಗಿರುತ್ತದೆ ಎಂಬುದನ್ನು ಮನವರಿಕೆ ಮಾಡಿಕೊಡಿ.



Scanned with CamScanner


ಸಂಭಾಷಣೆ 3

## ಧಾನ್ಯಗಳಿಂದ ಹೇಗೆ ಆಹಾರ ತಯಾರಿಸಿ ತಿನ್ನುವುದು



### ಕಲಿಕಾ ಫಲಿತಗಳು

ಧಾನ್ಯಗಳು ನಮ್ಮ ಆಹಾರದ ಮುಖ್ಯ ಭಾಗವಾಗಿವೆ ಮತ್ತು ಅವುಗಳನ್ನು ಹೇಗೆ ತಯಾರಿಸುವುದು ಮತ್ತು ತಿನ್ನುವುದು ಎನ್ನುವುದನ್ನು ಅರ್ಥಮಾಡಿಕೊಳ್ಳುವರು.




### ಕಲಿಕಾ ಸಾಮಗ್ರಿಗಳು

ಚಿತ್ರಪಟ P5.3.1 – ಭತ್ತದ ಗದ್ದೆ

### ಶಿಕ್ಷಕರ ಪೂರ್ವಸಿದ್ಧತೆ

ಮಿಂಚುಪಟ್ಟಿಗಳನ್ನು ಮತ್ತು ಇತರ ಸಲಕರಣೆಗಳನ್ನು ಸಿದ್ಧಪಡಿಸಿಟ್ಟುಕೊಳ್ಳಿ.

### ಸೂಚನೆಗಳು

**ಹಂತ 1: ಹಣ್ಣುಗಳು ಮತ್ತು ತರಕಾರಿಗಳನ್ನು ಹೇಗೆ ತಿನ್ನುವುದು ಎಂಬುದನ್ನು ಪುನರಾವರ್ತಿಸುವುದು**

1. ಗಿಡಗಳು ಹೇಗೆ ಹಂತ ಹಂತವಾಗಿ ಬೆಳೆಯುತ್ತವೆ ಎಂದು ಪುನರಾವರ್ತಿಸುತ್ತಾ – ಬೀಜ ಬಿತ್ತುವುದು, ಒಂದು ಮೊಳಕೆ ಬಂದು ಸಣ್ಣ ಗಿಡ ಬೆಳೆಯುತ್ತದೆ, ಆಮೇಲೆ ಅದರಲ್ಲಿ ಹೂವುಗಳು, ಕಾಯಿಗಳು ಮತ್ತು ಬೀಜಗಳಿರುವ ಹಣ್ಣುಗಳು ಬೆಳೆಯುತ್ತವೆ. ಈ ಬೀಜಗಳನ್ನು ಉಪಯೋಗಿಸಿ ಹೊಸ ಗಿಡಗಳನ್ನು ಬೆಳೆಯಬಹುದು.
2. ಮುಂದುವರಿಸುತ್ತಾ, ಅವರ ಅಮ್ಮ ಅಡುಗೆ ಮಾಡುವುದನ್ನು ನೋಡಿರುವಿರಾ? ಎಂದು ಕೇಳಿ ಮತ್ತು ಅಡುಗೆ ಮಾಡುವ ಹಂತಗಳನ್ನು ವಿವರಿಸಲು ಮಕ್ಕಳಿಗೆ ಹೇಳಿ. ಮಕ್ಕಳಿಗೆ ಉತ್ತರಿಸಲು ಸಹಕರಿಸಿ.
3. ಈ ಮುಂದಿನ ಪ್ರಶ್ನೆಗಳನ್ನು ಮಕ್ಕಳಿಗೆ ಕೇಳಿ.
   - ಅಡುಗೆ ಮಾಡುವುದಕ್ಕೆ ಮುನ್ನ ನಾವು ತರಕಾರಿಗಳನ್ನು ಏನು ಮಾಡಬೇಕು?
   - ಹಣ್ಣುಗಳನ್ನು ತಿನ್ನುವ ಮೊದಲು ಏನು ಮಾಡಬೇಕು?
   - ನಾವು ಹಣ್ಣು ಮತ್ತು ತರಕಾರಿಗಳನ್ನು ಹೇಗೆ ತೊಳೆಯಬೇಕು?
4. ತರಕಾರಿ ಮತ್ತು ಹಣ್ಣುಗಳನ್ನು ಅಡುಗೆ ಮಾಡುವ ಮುನ್ನ ಅಥವಾ ತಿನ್ನುವ ಮುನ್ನ ನೀರಿನಿಂದ ತೊಳೆಯುವುದು ತುಂಬಾ ಮುಖ್ಯ ಎಂದು ಮಕ್ಕಳಿಗೆ ವಿವರಿಸಿ.



Scanned with CamScanner



## ಹಂತ 2: ತಿನ್ನುವುದಕ್ಕೆ ತರಕಾರಿ, ಹಣ್ಣು, ಧಾನ್ಯಗಳನ್ನು ಸಿದ್ಧಪಡಿಸುವುದು

1. ಹಣ್ಣು, ತರಕಾರಿಗಳಿಗೂ ಮತ್ತು ಧಾನ್ಯಗಳಿಗೂ ಇರುವ ವ್ಯತ್ಯಾಸಗಳನ್ನು ಹೇಳಿ
   - ಗಿಡಗಳು ನಮಗೆ ಹಣ್ಣು ಮತ್ತು ತರಕಾರಿಗಳನ್ನು ಕೊಡಬೇಕಾದರೆ ನಾವು ಅವುಗಳ ಬೀಜ ಬಿತ್ತಿ ಗಿಡ ಬೆಳೆಸಬೇಕು.
2. ಭತ್ತದ ಬೀಜಗಳನ್ನು ಹೇಗೆ ಬಿತ್ತುವುದೆಂದು ನೋಡೋಣವೇ?
   - ಭತ್ತದ ಗದ್ದೆಯನ್ನು ಮತ್ತು ರೈತರು ಹೇಗೆ ಭತ್ತ ಬೆಳೆಯುತ್ತಾರೆ ಎಂದು ನೋಡಿದ್ದೀರಾ? ಎಂದು ಮಕ್ಕಳನ್ನು ಕೇಳಿ.
   - ಚಿತ್ರಪಟ P5.3.1 – ಭತ್ತದ ಗದ್ದೆಯನ್ನು ತೋರಿಸಿ. ಅದನ್ನು ಗಮನಿಸಿ ಮಿಂಚುಟ್ಟಿಯಲ್ಲಿ ಏನು ಕಾಣಿಸುತ್ತಿದೆ? ವಿವರಿಸಲು ಮಕ್ಕಳಿಗೆ ಹೇಳಿ.
   - ಟ್ರ್ಯಾಕ್ಟರ್ ನಿಂದ ಗದ್ದೆ ಉಳುತ್ತಿರುವ ನೇಗಿಲನ್ನು ತೋರಿಸಿ, ರೈತನು ಏನು ಮಾಡುತ್ತಿರುವನೆಂದು ನಿಮಗೆ ಅನಿಸುತ್ತದೆ? ಎಂದು ಮಕ್ಕಳನ್ನು ಕೇಳಿ.
   - ರೈತನು ಯಾವ ಉಪಕರಣವನ್ನು ಉಪಯೋಗಿಸುತ್ತಿದ್ದಾನೆ?
3. ಬೀಜ ಬಿತ್ತುತ್ತಿರುವ ರೈತನನ್ನು ತೋರಿಸಿ, **ರೈತನು ಬೀಜ ಬಿತ್ತುತ್ತಿದ್ದಾನೆ** ಮತ್ತು ಗಿಡ ನೆಡುತ್ತಿರುವ ರೈತನನ್ನು ತೋರಿಸಿ, **ರೈತ ಗಿಡ ನೆಡುತ್ತಿದ್ದಾನೆ** ಎಂದು ಹೇಳಿ. ಗಿಡಗಳನ್ನು ನೆಡುವುದಕ್ಕೂ, ಬೀಜ ಬಿತ್ತುವುದಕ್ಕೂ ವ್ಯತ್ಯಾಸವೇನು?
4. ಹಣ್ಣುಗಳು ಮತ್ತು ತರಕಾರಿಗಳನ್ನು ಗಿಡಗಳಿಂದ ಅಥವಾ ಮರಗಳಿಂದ ಕೊಯ್ಯುತ್ತೇವೆ. ಭತ್ತದ ಕೊಯ್ಲು ಮಾಡುತ್ತಿರುವ ರೈತನನ್ನು ತೋರಿಸಿ ಇಲ್ಲಿ ರೈತನು ಭತ್ತದ ಕೊಯ್ಲು ಮಾಡುತ್ತಿದ್ದಾನೆ ಎಂದು ಹೇಳಿ. ಹಣ್ಣುಗಳು ಮತ್ತು ತರಕಾರಿಗಳನ್ನು ಕೀಳುವುದಕ್ಕೂ ಭತ್ತದ ಕೊಯ್ಲು ಮಾಡುವುದಕ್ಕೂ ವ್ಯತ್ಯಾಸವೇನು? ಎಂದು ಪ್ರಶ್ನಿಸಿ.
5. ತರಕಾರಿಗಳ ಮತ್ತು ಹಣ್ಣುಗಳ ಸಿಪ್ಪೆ ಬಿಡಿಸುವುದನ್ನು ತೋರಿಸಿ. ನಾವು ಏನು ಮಾಡುತ್ತಿದ್ದೇವೆ? ತೆನೆ ಬಡಿದು ಕಾಳು ಬೇರ್ಪಡಿಸುತ್ತಿರುವ ರೈತನನ್ನು ತೋರಿಸಿ ರೈತನು ಭತ್ತದಿಂದ ಅಕ್ಕಿಯ ಕಾಳುಗಳನ್ನು ತೆಗೆಯುತ್ತಿದ್ದಾನೆಂದು ಹೇಳಿ. ಅವನು ಅದನ್ನು ಏಕೆ ಮಾಡುತ್ತಿದ್ದಾನೆಂದು ನಿಮಗೆ ಅನಿಸುತ್ತದೆ? ರೈತನು ಭತ್ತದ ಹೊಟ್ಟಿನಿಂದ ಅಕ್ಕಿಯನ್ನು ಬೇರ್ಪಡಿಸುತ್ತಿದ್ದಾನೆ ಮತ್ತು ಅದನ್ನು ಬೇಯಿಸಿ ತಿನ್ನಬಹುದು ಎಂದು ವಿವರಿಸಿ.
6. ತರಕಾರಿಗಳನ್ನು ಮತ್ತು ಹಣ್ಣುಗಳನ್ನು ತೊಳೆದು ತಿನ್ನಬೇಕು. ಅಕ್ಕಿ ಅಥವಾ ಗೋಧಿಯನ್ನು ತೊಳೆಯುತ್ತಿರುವುದನ್ನು ತೋರಿಸಿ
7. ಕೊನೆಯಲ್ಲಿ, ನಾವು ತರಕಾರಿಗಳನ್ನು ಹೇಗೆ ಬೇಯಿಸುತ್ತೇವೆ ಎಂದು ನಿಮಗನಿಸುತ್ತದೆ? ಎಂದು ಕೇಳಿ. ಉತ್ತರಗಳನ್ನು ಪಡೆಯುತ್ತಾ, "ತರಕಾರಿಗಳನ್ನು ಹಬೆಯಲ್ಲಿ ಬೇಯಿಸಿದರೆ, ಅಕ್ಕಿಯಂತಹ ಧಾನ್ಯಗಳನ್ನು ಹೇಗೆ ಬೇಯಿಸುತ್ತೇವೆ?" ಎಂದು ಕೇಳಿ. ಮಕ್ಕಳಿಂದ ಉತ್ತರಗಳನ್ನು ಪಡೆಯಿರಿ ಮತ್ತು ಧಾನ್ಯವನ್ನು ಹೇಗೆ ಬೇಯಿಸುತ್ತೇವೆ? ಎಂದು ವಿವರಿಸಿ.

ಗಮನಿಸಿ: ಇಲ್ಲಿ ಮುಖ್ಯ ಅಂಶವೆಂದರೆ ಮಕ್ಕಳು ಗಮನಿಸಿ ಉತ್ತರಿಸುವುದು. ಇದು ಅವರ ಯೋಚನಾಶಕ್ತಿಯನ್ನು ಮತ್ತು ಪದಸಂಪತ್ತನ್ನು ಬೆಳೆಸಲು ಸಹಾಯಕವಾಗುತ್ತದೆ.



Scanned with CamScanner

ಯೋಜನಾ ಕಾರ್ಯ 1

## ವಿವಿಧ ಗಿಡಗಳು ಮತ್ತು ಎಲೆಗಳ ಮಾದರಿ ಚಿತ್ರಗಳನ್ನು ಸಂಗ್ರಹಿಸುವುದು

### ಕಲಿಕಾ ಫಲಿತಗಳು

ತೂಕವನ್ನು ಅಂದಾಜು ಮಾಡುವುದು, ವಾಕ್ಯಗಳ ಸಂರಚನೆ, ಹಣ್ಣುಗಳು ಮತ್ತು ತರಕಾರಿಗಳನ್ನು ಕೊಳ್ಳುವ ಅವರ ಅನುಭವದ ತಿಳುವಳಿಕೆಗಳನ್ನು ಒಟ್ಟುಗೂಡಿಸಿ ಉಪಯೋಗಿಸುವುದು.

### ಕಲಿಕಾ ಸಾಮಗ್ರಿಗಳು

- ಸಣ್ಣ ಮೇಜುಗಳು
- ಆಟದ ನೋಟುಗಳು
- ಒಂದೇ ಗಾತ್ರದ ದಿನಪತ್ರಿಕೆಯ ಚೀಲಗಳು
- ಪ್ಲ್ಯಾಸ್ಟಿಕ್ ಹಣ್ಣುಗಳು ಮತ್ತು ತರಕಾರಿಗಳು
- ಬೇಳೆಗಳು/ ದ್ವಿದಳ ಧಾನ್ಯಗಳು
- ಅಕ್ಕಿ
- ಗೋಧಿ

ಎಲ್ಲಾ ವಸ್ತುಗಳನ್ನು ಒಂದೇ ರೀತಿಯ (ಅಂದರೆ 2 ಬೇರೆ ಬೇರೆ ತೂಕಗಳಾಗುವಂತೆ) ಚೀಲಗಳಿಗೆ ತುಂಬಿ, ಅವುಗಳನ್ನು ಎತ್ತುವುದರ ಮೂಲಕ ತೂಕ ಮತ್ತು ಗಾತ್ರದ ವ್ಯತ್ಯಾಸ ತಿಳಿಯುವಂತೆ ಹೇಳಿ.

### ಶಿಕ್ಷಕರ ಪೂರ್ವಸಿದ್ಧತೆ

1. ಒಂದು ವಾರಕ್ಕೆ ಮುಂಚಿತವಾಗಿ ಸಂತೆಯ ದಿನಕ್ಕೆ ತಯಾರಿ ಮಾಡಿಕೊಳ್ಳಲು ಪ್ರಾರಂಭಿಸಿ.
2. 1, 2, 3 ನೇ ದಿವಸಗಳು: ಒಳಾಂಗಣ ಚಟುವಟಿಕೆ/ ಸೃಜನಾತ್ಮಕ ಸಮಯವನ್ನು ಬಳಸಿ (ಅ) ಮಕ್ಕಳ ಜೊತೆಗೆ ದಿನಪತ್ರಿಕೆಗಳ ಚೀಲಗಳನ್ನು ಮಾಡುವುದು, ಮತ್ತು (ಆ) ಆಟದ ನೋಟುಗಳನ್ನು ಮಾಡುವುದಕ್ಕೆ ಉಪಯೋಗಿಸಿ. ನೀವು ಕಲಿಕಾ ಸಾಮಗ್ರಿಗಳ ಕಿಟ್ ಜೊತೆಗೆ ಕೊಟ್ಟಿರುವ ಆಟದ ನೋಟುಗಳನ್ನು ಕೂಡಾ ಉಪಯೋಗಿಸಬಹುದು.
3. ಮಕ್ಕಳು ಸಂತೆಯಲ್ಲಿ ಉಪಯೋಗಿಸಬಹುದಾದ, "ನಾನು 1 ಕಿ.ಗ್ರಾಂ. ಅಥವಾ 1/2 ಕಿ.ಗ್ರಾಂ. ________ ನ್ನು ಕೊಳ್ಳಬೇಕೆಂದಿರುವೆ", "ಇದರ ಬೆಲೆ ಎಷ್ಟು?" ಮುಂತಾದ ವಾಕ್ಯಗಳನ್ನು ಅಭ್ಯಾಸ ಮಾಡಲು ಮಕ್ಕಳಿಗೆ ಸಹಾಯ ಮಾಡುವುದು.

### ಸೂಚನೆಗಳು

1. ಮುಂದೆ ಬರಲಿರುವ ಸಂತೆಯ ದಿನದ ಬಗ್ಗೆ ಮಕ್ಕಳ ಜೊತೆಗೆ ಚರ್ಚಿಸಲು ಪ್ರಾರಂಭಿಸಿ. ಈ ಕೆಳಗಿನ ಪ್ರಶ್ನೆಗಳನ್ನು ಕೇಳುತ್ತಾ ಸಂಭಾಷಣೆಯನ್ನು ಪ್ರಾರಂಭಿಸಿ.
   - ನೀವು ನಿಮ್ಮ ಮನೆಯವರೊಂದಿಗೆ ಸಂತೆಗೆ ಹೋಗುತ್ತೀರಾ?
   - ಅಲ್ಲಿ ನೀವು ಏನೇನು ಕೊಂಡುಕೊಳ್ಳುತ್ತೀರಿ?
   - ಎಂದಾದರೂ ನೀವು ಹಣ್ಣುಗಳು ಮತ್ತು ತರಕಾರಿಗಳನ್ನು ಕೊಂಡುಕೊಂಡಿದ್ದೀರಾ? ಯಾರಾದರೂ ಕೊಂಡುಕೊಳ್ಳುವುದನ್ನು ಗಮನಿಸಿದ್ದೀರಾ?
   - ನೀವು ಮಾರುವವರಿಂದ ಕೊಂಡುಕೊಂಡಾಗ ಅವನು/ಳು ಅದನ್ನು ಯಾವುದರಲ್ಲಿ ಹಾಕುತ್ತಾನೆ/ಳೆ?
   - ವಸ್ತುಗಳು ಇರಬೇಕಾದಷ್ಟು ತೂಕದಲ್ಲಿವೆ ಎಂದು ನಿಮಗೆ ಹೇಗೆ ತಿಳಿಯುತ್ತದೆ? ಎತ್ತುವುದರ ಮೂಲಕ ಅದನ್ನು ಅಂದಾಜು ಮಾಡಬಹುದೇ? ಹೇಗೆ?



Scanned with CamScanner

## ವಿವಿಧ ಗಿಡಗಳು ಮತ್ತು ಎಲೆಗಳ ಮಾದರಿ ಚಿತ್ರಗಳನ್ನು ಸಂಗ್ರಹಿಸುವುದು

2. ಶಾಲೆಯಲ್ಲಿ 'ಸಂತೆಯ ದಿನ' ಮಾಡುವುದಾಗಿ ಮಕ್ಕಳು ನಿಮಗೆ ಸಹಾಯ ಮಾಡಬೇಕೆಂದು ಹೇಳಿ.
3. ಮಕ್ಕಳನ್ನು 'ಮಾರುವವರು' ಮತ್ತು 'ಕೊಳ್ಳುವವರು' ಎಂದು ಎರಡು ಗುಂಪುಗಳಾಗಿ ವಿಂಗಡಿಸಿಕೊಳ್ಳಿ. ಕೊಳ್ಳುವವರು 1 ಕಿ.ಗ್ರಾಂ. ಅಥವಾ 1/2 ಕಿ.ಗ್ರಾಂ ತೂಕದ ಎರಡು ವಸ್ತುಗಳನ್ನು ಕೇಳುತ್ತಾರೆ ಎಂದು ಮಾರುವವರಿಗೆ ಹೇಳಿ. ಕೊಳ್ಳುವವರ ಬೇಡಿಕೆಗೆ ತಕ್ಕಂತೆ ಚೀಲಗಳನ್ನು ಕೊಡಬೇಕು. ಚೀಲಗಳು ಒಂದೇ ರೀತಿ ಕಾಣಿಸಿದರೂ ಅವುಗಳನ್ನು ನಿರ್ಣಯಿಸಿ ನೋಡಿ ಯಾವುದು 1 ಕಿಲೋ ಗ್ರಾಂ ಅಥವಾ 1/2 ಕಿಲೋ ಗ್ರಾಂನ ಚೀಲ ಎಂದು ನಿರ್ಧರಿಸಿ ಕೊಡಬೇಕು ಎಂದು ಅವರು ನೆನಪಿಟ್ಟುಕೊಳ್ಳಬೇಕು.
4. ಕೊಳ್ಳುವವರು 1 ಕಿಲೋ ಗ್ರಾಂ ಅಥವಾ 1/2 ಕಿಲೋ ಗ್ರಾಂ ತೂಕದ ಯಾವುದೇ ಎರಡು ವಸ್ತುಗಳನ್ನು ಕೇಳಬಹುದೆಂದು ಹೇಳಿ. ಮಾರಾಟಗಾರನು ಅದನ್ನು ಕೊಟ್ಟಾಗ, ಅವರು ಅವುಗಳನ್ನು ಎರಡೂ ಕೈಗಳಲ್ಲಿ ಎತ್ತಿ ಹಿಡಿದು ನಿರ್ಣಯಿಸಿ ನೋಡಿ ಅವೆರಡೂ ಒಂದೇ ತೂಕದ್ದು ಅಥವಾ ಅಲ್ಲವೆಂದು ಖಚಿತಪಡಿಸಿಕೊಳ್ಳಬೇಕು.

   ಗಮನಿಸಿ: ಇವರಲ್ಲಿ ಬದಲಾವಣೆಗಳನ್ನು ಮಾಡಿಕೊಂಡು ಆಡಬಹುದು.
5. ಮಾರಾಟಗಾರನು ಯಾವುದಾದರೂ ಎರಡು ಚೀಲಗಳನ್ನು ಎತ್ತಿಕೊಂಡಾಗ (ಅಂದಾಜು ಮಾಡದೆ), ಕೊಳ್ಳುವವನು ತೂಕಗಳನ್ನು ಅಂದಾಜು ಮಾಡಿ ಮಾರಾಟಗಾರನು ಸರಿಯಾದ ಪ್ರಮಾಣದಲ್ಲಿ ವಸ್ತುಗಳನ್ನು ಕೊಟ್ಟಿದ್ದಾನೆ ಎಂದು ಖಚಿತಪಡಿಸಿಕೊಳ್ಳಬೇಕು.
6. ಕೊಳ್ಳುವವನು 1 ಕಿ.ಗ್ರಾಂ. ಮತ್ತು 1/2 ಕಿ.ಗ್ರಾಂ.ಗಳ ವಸ್ತುಗಳನ್ನು ಕೇಳಿ ನಂತರ ಚೀಲಗಳನ್ನು ಎತ್ತಿ ಅಂದಾಜು ಮಾಡಿ ಅವೆರಡೂ ಬೇರೆ ಬೇರೆ ತೂಕವುಳ್ಳದ್ದಾಗಿವೆ ಎಂದು ಖಚಿತಪಡಿಸಿಕೊಳ್ಳಬೇಕು.

### ಸಂತೆಯ ದಿನ

1. ಹಿರಿಯ ತರಗತಿಯ ಮಕ್ಕಳ ಸಹಾಯದಿಂದ ಸಂತೆಯ ವ್ಯವಸ್ಥೆ ಮಾಡಿ. ವಸ್ತುಗಳಿಗೆ ಒಂದೊಂದು ಜಾಗಮಾಡಿ ಇಟ್ಟು ಪ್ರತಿಯೊಂದು ವಸ್ತುವಿಗೂ ಅದರ ತೂಕದ ಬಗ್ಗೆ ಅಳೆದು ಚೀಟಿ ಅಂಟಿಸಿ.
2. ತಮ್ಮ ವಸ್ತುಗಳನ್ನು ಮಾರಾಟಮಾಡಲು ಮಾರಾಟಗಾರರಿಗೆ ಈ ಕೆಳಗಿನ ವಾಕ್ಯಗಳನ್ನು ಉಪಯೋಗಿಸಲು ಕಲಿಸಿ.
   - ನಮಸ್ಕಾರ, ನಿಮಗೇನು ಕೊಡಲಿ?
   - ಇಲ್ಲಿ ಬನ್ನಿ.
   - ಬಂದಿರುವುದಕ್ಕೆ ಧನ್ಯವಾದಗಳು. ಶುಭದಿನ.
3. ಕೊಳ್ಳುವವರಿಗೆ ಕೆಲವು ವಾಕ್ಯಗಳನ್ನು ಕಲಿಸಿ.
   - ನಮಸ್ಕಾರ, ಶುಭ ಮುಂಜಾನೆ
   - ನಾನು ಕೆಲವು ________ ಕೊಳ್ಳಬೇಕೆಂದಿದ್ದೇನೆ. ನನಗೆ 1 ಕಿ.ಗ್ರಾಂ. ________ ಮತ್ತು 1 ಕಿ. ಗ್ರಾಂ. ________ ನ್ನು ಕೊಡಿ.
   - ಎರಡೂ ಚೀಲಗಳು ಒಂದೇ ರೀತಿ ಭಾರವಾಗಿವೆ/ ಧನ್ಯವಾದಗಳು. ಅಥವಾ ಈ ಚೀಲ ಹೆಚ್ಚು ಭಾರವಾಗಿದೆ. ನೀವು ಸರಿಯಾದ ತೂಕದ ಚೀಲ ಕೊಟ್ಟಿದ್ದೀರಿ.
   - ಧನ್ಯವಾದಗಳು. ಶುಭದಿನ.
4. ಸಂತೆಯ ದಿನದ ಮೊದಲ ಭಾಗದಲ್ಲಿ ಮಕ್ಕಳ ಜೊತೆಗೆ ನಡೆಯುತ್ತಾ ಈ ಮಾತುಕತೆಗಳನ್ನು ಪರಿಚಯಿಸಿ.



Scanned with CamScanner

## ಶಿಶುಗೀತೆಗಳ ಸೂಚನೆಗಳು

### ಕಲಿಕಾ ಫಲಿತಗಳು

"ಸುಗ್ಗಿ ಕಾಲ" ಶಿಶುಗೀತೆಯನ್ನು ಸರಿಯಾದ ಉಚ್ಚಾರಣೆಗಳು ಮತ್ತು ಅಭಿನಯಗಳೊಂದಿಗೆ ಹಾಡಲು ಅರಿಯುವುದು.

### ಶಿಕ್ಷಕರ ಪೂರ್ವಸಿದ್ಧತೆ

ಶಿಶುಗೀತೆ ಮತ್ತು ಅದಕ್ಕನುಗುಣವಾದ ಅಭಿನಯವನ್ನು ರೂಢಿ ಮಾಡಿಕೊಳ್ಳುವುದು.

### ಸೂಚನೆಗಳು

1. "ಸುಗ್ಗಿ ಕಾಲ" ಶಿಶುಗೀತೆಯನ್ನು ಪರಿಚಯಿಸುವುದು ಮತ್ತು ಅದು ಯಾವುದರ? ಬಗ್ಗೆ ಎಂದು ಹೇಳುವುದು.
2. ಶಿಶುಗೀತೆಯನ್ನು ಲಯಬದ್ಧವಾಗಿ ಧ್ವನಿಯ ಏರಿಳಿತದೊಂದಿಗೆ ಹಾವಭಾವದೊಂದಿಗೆ ಪೂರ್ತಿಯಾಗಿ ಮಕ್ಕಳು ಕೇಳಿಸಿಕೊಳ್ಳುವಂತೆ ಹಾಡುವುದು.
3. ಗೀತೆಯ ಪ್ರತಿಯೊಂದು ಸಾಲನ್ನೂ ನೀವು ಹಾಡಿದ ಮೇಲೆ ಹಾಡುವಂತೆ ಮಕ್ಕಳಿಗೆ ಹೇಳಿ ಮತ್ತು ಚಿತ್ರವನ್ನು ತೋರಿಸಿ ಅದರ ಅರ್ಥವನ್ನು ವಿವರಿಸುವರು.
4. ಶಿಶುಗೀತೆಯನ್ನು ಅಭಿನಯಿಸಿ ತೋರಿಸಿ, ಮಕ್ಕಳು ಅನುಸರಿಸಲು ಹೇಳುವುದು.
5. ಈಗ ನಿಮ್ಮ ಜೊತೆಗೆ ಅಭಿನಯ ಮಾಡುತ್ತಾ ಹಾಡಲು ಹೇಳುವುದು.
6. ಮಕ್ಕಳು ಗುಂಪಿನಲ್ಲಿ ಅಥವಾ ಒಬ್ಬೊಬ್ಬರಾಗಿ ಹಾಡಲು ಪ್ರೋತ್ಸಾಹಿಸುವುದು.



Scanned with CamScanner

ಶಿಶುಗೀತೆ 1

**ಉಂಡೆ ಉಂಡೆ ತೆಂಗಿನಕಾಯಿ**

# ಸುಗ್ಗಿ ಕಾಲ

ಸುಗ್ಗಿ ಬರಲು ಹಿಗ್ಗಿ ಹಾಡಿ
ದುಡಿವರೆಲ್ಲ ರೈತರು
ಬೆಳೆಯ ಕೊಯ್ದು ರಾಶಿ ಮಾಡಿ
ಮನೆಗೆ ಧಾನ್ಯ ತರುವರು
ಸುಗ್ಗಿಯಲ್ಲಿ ಜಗ್ಗಿ ಕಾಳು
ತುಂಬಿ ಇಡಲು ಮನೆಯಲಿ
ವರುಷವೆಲ್ಲ ಅವರ ಬಾಳು
ಹರುಷ ತರುವ ನಗುವಲಿ





Scanned with CamScanner

ಶಿಶುಗೀತೆ 2

# SHRUBS AND TREES



## THE FARMER

The farmer plants the seed
The farmer plants the seed
Hey ho the dairy O
Hey farmer plants the seed

The sun comes out to shine
The sun comes out to shine
Hey ho the dairy O
The sun comes out to shine

The rain begins to fall
The rain begins to fall
Hey ho the dairy O
The rain begins to fall

The seed begins to grow
The seed begins to grow
Hey ho the dairy O
The seed begins to grow

The vegetables are here
The vegetables are here
Hey ho the dairy O
The vegetables are here





Scanned with CamScanner

# ಹಶೀಮ ಮಾಡಿದ ಉಪ್ಪಿನಕಾಯಿ!



## ಕಲಿಕಾ ಫಲಿತಗಳು

"ಹಶೀಮ ಮಾಡಿದ ಉಪ್ಪಿನಕಾಯಿ!" ಕಥೆಯನ್ನು ಅರ್ಥಮಾಡಿಕೊಂಡು ಹಾಗೂ ನೆನಪಿಸಿಕೊಂಡು, "ಏನು, ಏಕೆ, ಹೇಗೆ ಮತ್ತು ಯಾವಾಗ" ಎಂಬ ಸರಳ ಪ್ರಶ್ನೆಗಳಿಗೆ ಉತ್ತರಿಸುವರು.

## ಶಿಕ್ಷಕರ ಪೂರ್ವಸಿದ್ಧತೆ

ಕಥೆಯನ್ನು ಮೊದಲೇ ಓದಿ ಅದನ್ನು ಸರಿಯಾಗಿ ಅರ್ಥೈಸಿಕೊಳ್ಳುವುದು. ಕಥೆಯನ್ನು ಧ್ವನಿಯ ಏರಿಳಿತಗಳೊಂದಿಗೆ ಹೇಳುವುದನ್ನು ಅಭ್ಯಾಸ ಮಾಡಿಕೊಳ್ಳುವುದು.

## ಕಲಿಕಾ ಸಾಮಗ್ರಿಗಳು

ಕಥೆ ಪುಸ್ತಕ




### ಕಥೆಯ ಸಂಕ್ಷಿಪ್ತ ರೂಪ

**ಹಶೀಮ ಮಾಡಿದ ಉಪ್ಪಿನಕಾಯಿ!**

ಹಶೀಮನಿಗೆ ಮಾವಿನಕಾಯಿ ತುಂಬಾ ಇಷ್ಟ.

ಪ್ರತಿ ಬೇಸಿಗೆಯಲ್ಲಿ ಅಜ್ಜಿ, ಹಶೀಮನ ಮನೆಗೆ ಬರುತ್ತಿದ್ದಳು. ಮಾವಿನಕಾಯಿ ಉಪ್ಪಿನಕಾಯಿ ಮಾಡುತ್ತಿದ್ದರು.

ಈ ಬೇಸಿಗೆಯಲ್ಲಿ ಮಾವಿನಕಾಯಿಗಳು ಹಾಳಾಗುತ್ತಿವೆ.

ಆದರೆ ಅಜ್ಜಿ ಇನ್ನೂ ಊರಿನಿಂದ ಬಂದೇ ಇಲ್ಲ!

"ಮಾವಿನಕಾಯಿಯಲ್ಲಿನ ನೀರು ತೆಗೆದರೆ, ಬೇಗ ಹಾಳಾಗಲ್ಲ" ಎನ್ನುತ್ತಾರೆ ಅಪ್ಪ.

"ನೀರೇ ಇಲ್ಲದಿದ್ದರೆ ಎಂಥ ಹುಳವೂ ಸಾಯುತ್ತೆ" ಎಂಬುದು ಅವರ ಉಪಾಯ.

"ಮಾವಿನ ಕಾಯಿಂದ ನೀರು ತೆಗೆಯುವುದು ಹೇಗೆ?" ಹಶೀಮ ಕೇಳಿದ

"ಉಪ್ಪು ಬೆರೆಸಿಡು!" ಎಂದರು ಅಪ್ಪ.

ಹಶೀಮ ಮತ್ತು ಅಪ್ಪ, ಕಾಯಿಗಳನ್ನು ಬಿಸಿಲಿಗಿಟ್ಟರು.

ಒಣಗಿದ ಮಾವಿನಕಾಯನ್ನು ಭರಣಿಗೆ ತುಂಬಿ, ಸ್ವಲ್ಪ ಎಣ್ಣೆ ಹಾಕಿದರು.

ಎಣ್ಣೆ ಹಾಕಿದರೆ ಗಾಳಿಯಲ್ಲಿನ ಹುಳಗಳು ಕಾಯಿಗೆ ಹತ್ತಲ್ಲ.

"ಅಪ್ಪ, ನಾವು ಅಜ್ಜಿಯಂತೆ ಉಪ್ಪಿನ ಕಾಯಿ ಮಾಡಿ ಬಿಟ್ಟೆವು!" ಎಂದು ಕುಣಿದ ಹಶೀಮ.

ನಮಗೆ ಪ್ರಿಯವಾದ ತರಕಾರಿ ಮತ್ತು ಹಣ್ಣುಗಳನ್ನು ಕೆಡದಂತೆ ಇಡುವುದು ಹೇಗೆ?

ಆಲೂಗಡ್ಡೆ ತುಂಡು + ಬೇಯಿಸಿ + ಒಣಗಿಸು = ಆಲೂಗಡ್ಡೆ ಚಿಪ್ಸ್ (ಕರಿದು ತಿನ್ನಬಹುದು).

ಸೇಬು (ಅಥವಾ ಯಾವುದೇ ಹಣ್ಣು) + ಸಕ್ಕರೆ + ನಿಂಬೆಹುಳಿ + ಬೇಯಿಸಿ = ಜಾಮ್.

ಟೊಮೇಟೋ + ಉಪ್ಪು + ಒಣಗಿಸಿ + ಎಣ್ಣೆ = ಒಣ ಟೊಮೇಟೋ.

ನಿಂಬೆಹಣ್ಣು + ಉಪ್ಪು = ನಿಂಬೆ ಹಣ್ಣು ಕೆಡುವುದಿಲ್ಲ.



Scanned with CamScanner

## ಹಶೀಮ ಮಾಡಿದ ಉಪ್ಪಿನಕಾಯಿ!



### ಸೂಚನೆಗಳು

**ಹಂತ 1.** ಮೇಲಿನ ಕಥೆಯನ್ನು ಪರಿಚಯಿಸಿ. (ಮಕ್ಕಳೊಂದಿಗೆ ವಿಷಯದ ಬಗ್ಗೆ ಚರ್ಚಿಸುತ್ತಾ ಅದನ್ನು ಅವರ ದಿನನಿತ್ಯದ ಅನುಭವಗಳಿಗೆ ಹೋಲಿಸುವುದು. ಹಾಗೂ ಪುಸ್ತಕದ ಮುಖಪುಟವನ್ನು ತೋರಿಸುತ್ತಾ ಕಥೆ ಯಾವುದರ ಬಗ್ಗೆ ಇರಬಹುದು ಎಂಬುದರ ಬಗ್ಗೆ ಚರ್ಚಿಸಿ.)

**ಹಂತ 2.** ಕಥೆಯನ್ನು ಹಾವಭಾವದೊಂದಿಗೆ ಹೇಳುವುದು.

**ಹಂತ 3.** ಕಥೆ ಓದುತ್ತಾ ಹೋದಂತೆ ಅದಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ಕೇಳುತ್ತಾ ಮತ್ತು ಮುಖ್ಯ ಪದಗಳನ್ನು ವಿವರಿಸುತ್ತಾ ಕಥೆಯಲ್ಲಿನ ಮುಖ್ಯ ಪಾತ್ರಗಳು ಹಾಗೂ ಘಟನೆಗಳ ಕಡೆಗೆ ಗಮನ ಸೆಳೆಯಿರಿ.

ಕಥೆಗೆ ಸಂಬಂಧಿಸಿದ ಸರಳ ಪ್ರಶ್ನೆಗಳನ್ನು ಕೇಳುವುದು.

- ಹಶೀಂಗೆ ಮಾವಿನಕಾಯಿಗಳೆಂದರೆ ತುಂಬಾ ಇಷ್ಟ. ಹಶೀಂಗೆ ಏನು ತುಂಬಾ ಇಷ್ಟ?
- ಹಶೀಂ ಮಾವಿನಕಾಯಿಗಳನ್ನು ಉಳಿಸಿಕೊಳ್ಳಲು ಬಯಸಿದನು. ಹಶೀಂ ಏನನ್ನು ಉಳಿಸಿಕೊಳ್ಳಲು ಬಯಸಿದನು?
- ಹಶೀಂನ ತಂದೆ "ಅವಕ್ಕೆ ಉಪ್ಪು ಸೇರಿಸು" ಎಂದು ಹೇಳಿದರು. ಹಶೀಂನ ತಂದೆ ಮಾವಿನಕಾಯಿಗಳಿಗೆ ಏನು ಸೇರಿಸಲು ಹೇಳಿದರು?

**ಹಂತ 4.** ನೆನಪಿಸಿಕೊಳ್ಳುವ ಮತ್ತು ಗ್ರಹಿಕೆಯ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯಿರಿ.

- ಹಶೀಂ ಮಾವಿಕಾಯಿಗಳನ್ನು ಏಕೆ ಉಳಿಸಿಕೊಳ್ಳಬೇಕೆಂದು ಬಯಸಿದನು?
- ಹಶೀಂ ಮಾವಿನಕಾಯಿಗಳಿಂದ ನೀರನ್ನು ಏಕೆ ತೆಗೆಯಬೇಕೆಂದು ಬಯಸಿದನು?
- ಮಾವಿನಕಾಯಿಗಳಿಗೆ ಗಾಳಿಯಿಂದ ಕೀಟಾಣುಗಳು ಸೇರದಂತೆ ಹಶೀಂ ಮತ್ತು ಅವನ ತಂದೆ ಮಾವಿನಕಾಯಿಗಳಿಗೆ ಏನನ್ನು ಸೇರಿಸಿದರು? ಮಾವಿನಕಾಯಿಯ ಉಪ್ಪಿನಕಾಯಿ ಮಾಡಲು ಹಶೀಂ ಮತ್ತು ಅವನ ತಂದೆ ಮಾವಿನಕಾಯಿಗಳಿಗೆ ಏನು ಸೇರಿಸಿದರು?

**ಹಂತ 5.** ಕಥೆಯಲ್ಲಿನ ಪಾತ್ರಗಳೊಂದಿಗೆ ಸಂವೇದನೆ ತೋರಿಸುವ ಸರಳ ಪ್ರಶ್ನೆಗಳನ್ನು ಕೇಳಿ.

- ಮಾವಿನಕಾಯಿಗಳು ಕೆಡುವಂತಿವೆ ಎಂದು ತಿಳಿದಾಗ ಹಶೀಂ ಏನು ಭಾವಿಸಿದನೆಂದು ನೀವು ಯೋಚಿಸುತ್ತೀರಿ?
- ಮಾವಿನಕಾಯಿಗಳಿಂದ ಉಪ್ಪಿನಕಾಯಿ ಮಾಡಿದ ಮೇಲೆ ಅವನಿಗೆ ಹೇಗನಿಸಿತು?

**ಹಂತ 6.** ಊಹಿಸಲು ಸಾಧ್ಯವಾಗುವಂತಹ ಪ್ರಶ್ನೆಗಳನ್ನು ಕೇಳುವುದು.

- ಹಣ್ಣುಗಳು ಕೆಡದಂತೆ ಹೇಗೆ ರಕ್ಷಿಸಬಹುದು?
- ಮಾವಿನಕಾಯಿಯ ಉಪ್ಪಿನಕಾಯಿ ಹೇಗೆ ಮಾಡಬಹುದು?

**ಹಂತ 7.** ಕಥೆಯನ್ನು 2–4 ವಾಕ್ಯಗಳಲ್ಲಿ ವಿವರಿಸಲು ಮಕ್ಕಳಿಗೆ ಸಹಾಯ ಮಾಡುವುದು.



Scanned with CamScanner

ಚಟುವಟಿಕೆ 1


## ಸೂರ್ಯಕಾಂತಿ ಹೂವನ್ನು ಮಾಡುವುದು

### ಕಲಿಕಾ ಸಾಮಗ್ರಿಗಳು

ಅಭ್ಯಾಸ ಹಾಳೆ, ಸೂರ್ಯಕಾಂತಿ ಹೂವಿನ ರೇಖಾಚಿತ್ರ, ವಿವಿಧ ಬೀಜಗಳು, ಬಣ್ಣದ ಪೆನ್ಸಿಲ್‌ಗಳು

### ಸೂಚನೆಗಳು

1. ಅಭ್ಯಾಸ ಹಾಳೆಯನ್ನು ಮಕ್ಕಳಿಗೆ ನೀಡಿ.
2. ಸೂರ್ಯಕಾಂತಿ ಹೂವಿನ ರೇಖಾಚಿತ್ರದ ಮಧ್ಯದಲ್ಲಿ ಬೀಜಗಳನ್ನು ಅಂಟಿಸಬೇಕೆಂದು ವಿವರಿಸಿ.
3. ಸೂರ್ಯಕಾಂತಿ ಹೂವಿನ ದಳಗಳನ್ನು ತೋರಿಸಿ ಅವುಗಳಿಗೆ ಬಣ್ಣ ಹಾಕಬೇಕೆಂದು ವಿವರಿಸಿ.
4. ಈ ಚಟುವಟಿಕೆಗೆ ಅವರು ಯಾವುದೇ ಬೀಜಗಳನ್ನು ಮತ್ತು ಬಣ್ಣವನ್ನು ಬಳಸಲು ಮುಕ್ತ ಅವಕಾಶ ನೀಡಿ.
5. ಎಲ್ಲಾ ಮಕ್ಕಳು ಈ ಕೆಲಸವನ್ನು ಮುಗಿಸಿದ ಮೇಲೆ ಒಬ್ಬರಿಗೊಬ್ಬರು ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸಲು ಹೇಳುವುದು.
6. ಮಕ್ಕಳು ಮಾಡಿದ ಚಟುವಟಿಕೆಯ ಹಾಳೆಗಳನ್ನು ಸಂಗ್ರಹಿಸಿ, ಒಂದು ಪುಸ್ತಕ ಮಾಡಿ ಓದಿನ ಮೂಲೆಯಲ್ಲಿಡಿ.





Scanned with CamScanner

## ಸೃಜನಾತ್ಮಕ ಚಟುವಟಿಕೆಗಳು

### ಚಟುವಟಿಕೆ 2

### ಪುಸ್ತಕ ಮಾಡುವುದು

#### ಕಲಿಕಾ ಸಾಮಗ್ರಿಗಳು

ಮರುಬಳಕೆ ಮಾಡಬಹುದಾದ ಕಾಗದ, ಪ್ರತಿ ಗುಂಪಿಗೆ ಒಂದು. ಅಕ್ಕಿ, ರಾಗಿ ಅಥವ ಜೋಳದ ಕಾಳುಗಳು.

#### ಸೂಚನೆಗಳು

1. ಎರಡು ಅಥವಾ ಮೂರು ಮಕ್ಕಳಿರುವಂತೆ ಗುಂಪುಗಳನ್ನು ಮಾಡುವುದು.
2. ಕಾಗದದ ಮೇಲೆ ತೊಟ್ಟಿನಂತಹ ಒಂದು ಗೆರೆ ಎಳೆದು ಪ್ರತಿಯೊಂದು ಗುಂಪಿಗೂ ಒಂದೊಂದು ಕಾಗದ ಕೊಡುವುದು.
3. ಅಕ್ಕಿಯ, ಗೋಧಿಯ, ಜೋಳದ ಕಾಳುಗಳನ್ನು ಅದರ ಮೇಲೆ ಅಂಟಿಸಲು ಹೇಳುವುದು.
4. ಬೇರೆಬೇರೆ ಗುಂಪುಗಳಿಗೆ ಗೋಧಿ, ಜೋಳ, ರಾಗಿ ಇತ್ಯಾದಿ ಧಾನ್ಯಗಳನ್ನು ಕೊಡುವುದು.
   - ಧಾನ್ಯ ಅಂಟಿಸಿದ ಎಲ್ಲಾ ಕಾಗದಗಳನ್ನು ತೆಗೆದುಕೊಂಡು, ಪುಸ್ತಕ ಮಾಡುವುದು.
   - ಅದರಲ್ಲಿ ಧಾನ್ಯಗಳ ಹೆಸರುಗಳನ್ನು ಬರೆದು, ಓದುವ ಮೂಲೆಯಲ್ಲಿ ಇಡುವುದು.
   - ಅವರ ಉತ್ತಮ ಕೆಲಸಕ್ಕಾಗಿ ಮಕ್ಕಳನ್ನು ಪ್ರಶಂಸಿಸಿ.

---

### ಚಟುವಟಿಕೆ 3

### ಕಾಗದದ ನೋಟು ಮಾಡುವುದು

#### ಕಲಿಕಾ ಸಾಮಗ್ರಿಗಳು

ನೋಟಿನ ಗಾತ್ರಕ್ಕೆ ಸರಿಯಾಗಿ ಕತ್ತರಿಸಿದ ದಿನಪತ್ರಿಕೆ/ ಬಿಳಿ ಕಾಗದ, ಬಣ್ಣದ ಪೆನ್ಸಿಲ್‌ಗಳು.

#### ಸೂಚನೆಗಳು

1. ಎರಡು ಅಥವಾ ಮೂರು ಮಕ್ಕಳಿರುವಂತೆ ಗುಂಪುಗಳನ್ನು ಮಾಡುವುದು.
2. ಪೇಪರಿನ ಕತ್ತರಿಸಿದ ನೋಟುಗಳನ್ನು ಕೊಡುವುದು.
3. ಕಾಗದದ ನೋಟಿನ ಒಂದು ಮಾದರಿಯನ್ನು ಕೊಡುವುದು.
4. ನೋಟಿಗೆ ಬಣ್ಣ ಹಚ್ಚಲು ಹೇಳಿ ಮತ್ತು ಅದರ ಮೌಲ್ಯಕ್ಕೆ ತಕ್ಕಂತೆ ಸಂಖ್ಯೆಯನ್ನು ಬರೆಯಲು ಹೇಳುವುದು.
5. ಮಕ್ಕಳು ಮಾಡಿದ ಚಟುವಟಿಯ ನೋಟುಗಳನ್ನು ಪುಸ್ತಕ ಮಾಡಿ ಕಲಿಕಾ ಮೂಲೆಯಲ್ಲಿಡುವುದು.



Scanned with CamScanner

## ಚಟುವಟಿಕೆ 1

## ಬೀಜಗಳನ್ನು ವಿಂಗಡಿಸುವುದು

### ಕಲಿಕಾ ಸಾಮಗ್ರಿಗಳು

ಮಿಶ್ರಮಾಡಿದ ವಿವಿಧ ರೀತಿಯ ಬೀಜಗಳು

### ಸೂಚನೆಗಳು

1. ತರಗತಿಯ ಮಕ್ಕಳನ್ನು ಮೂರು ಅಥವಾ ನಾಲ್ಕು ಮಕ್ಕಳಿರುವಂತೆ ಗುಂಪುಗಳನ್ನು ಮಾಡುವುದು.
2. ಪ್ರತಿ ಗುಂಪಿಗೂ ಒಂದೊಂದು ಮುಷ್ಟಿ ಮಿಶ್ರ ಮಾಡಿದ ಬೀಜಗಳನ್ನು ಕೊಡುವುದು.
3. ಒಂದೇ ವಿಧವಾದ ಬೀಜಗಳನ್ನು ಪ್ರತ್ಯೇಕಿಸಲು ಹೇಳುವುದು.
4. ಚಟುವಟಿಕೆಯ ಕೊನೆಯಲ್ಲಿ ಈ ಬೀಜಗಳು ಯಾವ ಹಣ್ಣು ಅಥವಾ ತರಕಾರಿಗೆ ಸೇರಿದ್ದೆಂದು ನೆನಪಿದೆಯೇ? ಎಂದು ಕೇಳುವುದು.
5. ಅವರ ಉತ್ತರಗಳಿಗೆ ಚಪ್ಪಾಳೆ ತಟ್ಟಿ ಪ್ರೋತ್ಸಾಹಿಸಿ, ತಪ್ಪಿದ್ದರೆ ತಿದ್ದಿ ಹೇಳುವುದು.

---

## ಚಟುವಟಿಕೆ 2

## ಬೀಜಗಳನ್ನು ವಿಂಗಡಿಸಿ ಡಬ್ಬಗಳಲ್ಲಿ ಹಾಕಿ ತೂಕದ ಡಬ್ಬಗಳನ್ನು ಮಾಡುವುದು

### ಕಲಿಕಾ ಸಾಮಗ್ರಿಗಳು

ಖಾಲಿ ಬೆಂಕಿಪೆಟ್ಟಿಗೆಗಳು, ಒಂದು ಬಟ್ಟಲಿನಲ್ಲಿ ಹುಣಿಸೆಬೀಜಗಳು, ಇನ್ನೊಂದು ಬಟ್ಟಲು ಯಾವುದಾದರೂ ಸ್ಥಳೀಯವಾಗಿ ಸಿಗುವಂತಹ ಬೀಜಗಳು

### ಸೂಚನೆಗಳು


1. ತರಗತಿಯ ಮಕ್ಕಳನ್ನು ಮೂರು ಅಥವಾ ನಾಲ್ಕು ಮಕ್ಕಳಿರುವಂತೆ ಗುಂಪುಗಳನ್ನು ಮಾಡಿ.
2. ಕೊಟ್ಟಿರುವಂತಹ ಬೆಂಕಿಪೆಟ್ಟಿಗೆಗಳಲ್ಲಿ ಅಥವಾ ಪ್ಲಾಸ್ಟಿಕ್ ಚೀಲಗಳಲ್ಲಿ ಬೀಜಗಳನ್ನು ಹೇಗೆ ವಿಂಗಡಿಸಿ ಹಾಕಬೇಕೆಂದು ತೋರಿಸಿ.
3. ಬೇರೆ ಬೇರೆ ಪೆಟ್ಟಿಗೆಗಳಿಗೆ ಬೀಜಗಳನ್ನು ಹಾಕಿ
4. ಒಬ್ಬೊಬ್ಬರಾಗಿ ವಿಂಗಡಿಸಲು ಅವರಿಗೆ ಹೇಳುವುದು.
5. ಇದನ್ನು ಮಾಡಿದ ಮೇಲೆ, ಪೆಟ್ಟಿಗೆಗಳ ತೂಕವನ್ನು ಈ ಕೆಳಗಿನಂತೆ ಅಂದಾಜು ಮಾಡಲು ಹೇಳಿ:
   - ಒಂದೇ ರೀತಿಯ ತೂಕದ ಪೆಟ್ಟಿಗೆಗಳು
   - ಇನ್ನೂ ಹೆಚ್ಚಿನ ತೂಕದ ಪೆಟ್ಟಿಗೆಗಳು
6. ಅವಶ್ಯವಿದ್ದರೆ ಮಕ್ಕಳು ಒಬ್ಬರಿಗೊಬ್ಬರು ಸಹಾಯ ಮಾಡಬಹುದು ಹಾಗೂ ಪರಸ್ಪರ ಜೊತೆಯಾಗಿ ಕೆಲಸ ಮಾಡಲು ಪ್ರೋತ್ಸಾಹಿಸಿ
7. ಅವರು ಪರಸ್ಪರ ತಮ್ಮ ಕೆಲಸಗಳನ್ನು ನೋಡಿಕೊಂಡು "ಉತ್ತಮ ಕೆಲಸ" ಎಂದು ಹೇಳಿಕೊಳ್ಳಲಿ.



Scanned with CamScanner

## ಚಟುವಟಿಕೆ 1

## ಹುಡುಕುವ ಆಟ



### ಸೂಚನೆಗಳು

1. ಒಂದು ವೃತ್ತಾಕಾರದಲ್ಲಿ ನಿಲ್ಲಲು ಮಕ್ಕಳಿಗೆ ಹೇಳಿ ಅವರೊಡನೆ ನೀವು ನಿಲ್ಲುವುದು.
2. ಹುಡುಕುವ ಆಟ ಆಡುವುದು ಹೇಗೆಂದು ತೋರಿಸಿ.
3. ನಾನು ಹುಡುಕುತ್ತೇನೆ. 'ನೀಲಿ ಬಣ್ಣದ್ದನ್ನು' ಎಂದು ಜೋರಾಗಿ ಹೇಳಿ. ಅವರ ಉತ್ತರಕ್ಕೆ ಕಾಯಿರಿ. ಅವರು ಆಕಾಶ, ನೀಲಿಬಣ್ಣದ ಬೋರ್ಡು, ನೀಲಿ ಬಣ್ಣದ ಡ್ರಮ್ ಎಂದು ಹೇಳಬಹುದು.
4. ಮತ್ತೆ ಅದೇ ರೀತಿಯಾಗಿ, ನಾನು ಹುಡುಕುತ್ತೇನೆ, ಹಸಿರು ಬಣ್ಣದ್ದು ಎಂದು ಹೇಳುವುದು.
5. ಮಕ್ಕಳಿಗೆ ಪರಿಚಿತವಾಗಿರುವ ಬಣ್ಣಗಳನ್ನು ಉಪಯೋಗಿಸಿ.
6. ದುಂಡಾದ ಗಡಿಯಾರ, ಚೌಕಾಕಾರದ ಪೆಟ್ಟಿಗೆ, ಆಯತಾಕಾರದ ಪುಸ್ತಕ ಇತ್ಯಾದಿ ವಸ್ತುಗಳ ಆಕಾರಗಳನ್ನು ಉಪಯೋಗಿಸಿಕೊಳ್ಳಿ, ಚಟುವಟಿಕೆಯಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬಹುದು.

---

## ಚಟುವಟಿಕೆ 2

## ಚಾರ್ಟಿನ ಮೇಲೆ ಹೆಬ್ಬೆರಳಚ್ಚು ಮಾಡುವುದು

### ಕಲಿಕಾ ಸಾಮಗ್ರಿಗಳು

ಚಾರ್ಟ್ (ಸಸ್ಯದ ಚಿತ್ರಪಟ), ವಿವಿಧ ಬಣ್ಣಗಳು

### ಸೂಚನೆಗಳು

1. ಸಸ್ಯದ ಚಾರ್ಟ್ ಅನ್ನು ಮರದ ಮೇಲೆ ಅಥವಾ ಶಾಲೆಯ ಹೊರಗಿನ ಗೋಡೆಗೆ ತೂಗುಹಾಕುವುದು.
2. ತಮ್ಮ ಹೆಬ್ಬೆರಳನ್ನು ಬಣ್ಣದಲ್ಲಿ ಅದ್ದಿ ಚಿತ್ರಪಟದ ಮೇಲೆ ಅಚ್ಚು ಒತ್ತಬೇಕೆಂದು ಮಾಡಿ ತೋರಿಸುವುದು.
3. ಅವರಿಗೆ ಇಷ್ಟವಾದ ಯಾವುದೇ ಬಣ್ಣವನ್ನು ಉಪಯೋಗಿಸಬಹುದು. ಚಾರ್ಟ್ ಅನ್ನು ಪೂರ್ತಿಯಾಗಿ ಹೆಬ್ಬೆರಳಚ್ಚಿನಿಂದ ತುಂಬಿದ್ದಾರೆಂದು ಖಚಿತಪಡಿಸಿಕೊಳ್ಳುವುದು.
4. ಎಲ್ಲಾ ಮಕ್ಕಳಿಗೂ ಚಾರ್ಟ್‌ನ ಮೇಲೆ ಹೆಬ್ಬೆರಳಿನ ಅಚ್ಚು ಒತ್ತಲು ಅವಕಾಶ ನೀಡಿ. ಎಲ್ಲಾ ಮಕ್ಕಳು ಚಾರ್ಟ್‌ನ ಮೇಲೆ ತಮ್ಮ ಹೆಬ್ಬೆರಳಿನ ಅಚ್ಚು ಹಾಕಿದ ನಂತರ "ಅದು ಹೇಗೆ ಕಾಣುತ್ತದೆ?" ಎಂದು ಕೇಳಿ. ತಮ್ಮ ಹೆಬ್ಬೆರಳಚ್ಚನ್ನು ಗುರುತಿಸಲು ಸಾಧ್ಯವೇ ಎಂದು ಕೇಳಿ. ಮಕ್ಕಳ ಉತ್ತರಕ್ಕಾಗಿ ಕಾಯಿರಿ.
5. ಎಲ್ಲಾ ಹೆಬ್ಬೆರಳಚ್ಚುಗಳೂ ಒಂದೇ ರೀತಿಯಾಗಿ ಕಾಣುವುದರಿಂದ ತಮ್ಮ ತಮ್ಮ ಹೆಬ್ಬೆರಳಿನ ಅಚ್ಚನ್ನು ಗುರುತಿಸಲು ಸಾಧ್ಯವಾಗದಿದ್ದರೆ ತೊಂದರೆ ಇಲ್ಲ, ಹೀಗೆ ಗುಂಪಿನಲ್ಲಿ ಕೆಲಸ ಮಾಡಿ ಸ್ನೇಹಿತರಾಗುವುದು ಒಳ್ಳೆಯದು ಎಂದು ವಿವರಿಸುವರು.



Scanned with CamScanner

## ಹಣ್ಣುಗಳು, ತರಕಾರಿಗಳು ಮತ್ತು ಬೀಜಗಳು

1. Curl up like a seed
2. Rise out of the ground
3. Look up to the sun

1. Curl up like a seed
2. Rise out of the ground
3. Look up to the sun

1. Curl up like a seed
2. Rise out of the ground
3. Look up to the sun

1. Grow branches
2. Let the flowers bloom
3. Grow tall and strong

1. Grow branches
2. Let the flowers bloom
3. Grow tall and strong

1. Grow branches
2. Let the flowers bloom
3. Grow tall and strong


Say
gesture
model

1. Curl up like a seed
2. Rise out of the ground
3. Look up to the sun
4. Grow branches
5. Let the flowers bloom
6. Grow tall and strong

1. Let the flowers bloom
2. Curl up like a seed
3. Rise out of the ground
4. Grow branches
5. Grow tall and strong
6. Look up to the sun



Scanned with CamScanner



# ತೂಕ ಮತ್ತು ಅಳತೆಗಳು




Scanned with CamScanner

# ತೂಕ ಮತ್ತು ಅಳತೆಗಳು




## ಕಲಿಕಾ ಉದ್ದೇಶಗಳು

- ದೈನಂದಿನ ಭಾಷೆಯಲ್ಲಿ ವಸ್ತುಗಳ ತೂಕಕ್ಕನುಗುಣವಾಗಿ ಅವುಗಳನ್ನು ವಿವರಿಸುವರು. ಉದಾಹರಣೆಗೆ: ಭಾರವಾದ, ಹಗುರವಾದ, ತಳ್ಳಲು ಕಷ್ಟವಾದ ಮತ್ತು ಎಳೆಯಲು ಕಷ್ಟವಾದ – ಇತ್ಯಾದಿ...
- ದೈನಂದಿನ ಜೀವನದಲ್ಲಿನ ವಸ್ತುಗಳನ್ನು 'ಭಾರವಾದ' ಮತ್ತು 'ಹೆಚ್ಚು ಭಾರವಾದ' ಎಂಬ ಹೋಲಿಕೆಯನ್ನು ವ್ಯಕ್ತಪಡಿಸುವ ಭಾಷೆಯನ್ನು ಉಪಯೋಗಿಸಿ ವಿವರಿಸುವರು.
- ಗಾತ್ರ ಮತ್ತು ತೂಕದ ಆಧಾರದ ಮೇಲೆ ಅಂದಾಜು ಮಾಡಿ ವಸ್ತುಗಳನ್ನು ಹೊಂದಿಸುವರು.
- ವಸ್ತುಗಳನ್ನು ಅಥವಾ ಚಿತ್ರಗಳನ್ನು ಅವುಗಳ ತೂಕದ ಆಧಾರದಲ್ಲಿ ಅನುಕ್ರಮವಾಗಿ ಜೋಡಿಸುವರು.
- ದೈನಂದಿನ ಜೀವನದಲ್ಲಿನ ತೂಕಕ್ಕೆ ಸಂಬಂಧಿಸಿದ ಸರಳ ಸಮಸ್ಯೆಗಳನ್ನು ಬಿಡಿಸುವರು.



Scanned with CamScanner

ಕಥೆ

## ಆಸೆಬುರುಕ ಇಲಿ

### ಕಲಿಕಾ ಫಲಿತಗಳು

ದೈನಂದಿನ ಭಾಷೆಯಲ್ಲಿ ವಸ್ತುಗಳ ತೂಕಕ್ಕನುಗುಣವಾಗಿ ಅವುಗಳನ್ನು ವಿವರಿಸುವರು. ಉದಾ: ಭಾರ, ಹಗುರ, ಎಳೆಯುವುದು, ತಳ್ಳುವುದು ಇತ್ಯಾದಿ.

### ಕಲಿಕಾ ಸಾಮಗ್ರಿಗಳು

"ಆಸೆಬುರುಕ ಇಲಿ" ಕಥೆ ಪುಸ್ತಕ.

### ಶಿಕ್ಷಕರ ಪೂರ್ವಸಿದ್ಧತೆ

"ಆಸೆಬುರುಕ ಇಲಿ" ಕಥೆಯನ್ನು ಮೊದಲೇ ಓದಿ, ಬೇಕಾದ ಮಿಂಚುಪಟ್ಟಿಗಳನ್ನು ತಯಾರಿಸಿಟ್ಟುಕೊಳ್ಳುವುದು.




### ಕಥೆಯ ಸಂಕ್ಷಿಪ್ತ ರೂಪ

**ದುರಾಸೆಯ ಇಲಿ**

ಒಂದು ದಿನ ಒಂದು ಇಲಿಗೆ ದೊಡ್ಡ ರೊಟ್ಟಿ ಸಿಕ್ಕಿತು. "ಇದನ್ನು ನಾನು ಮನೆಗೆ ತೆಗೆದುಕೊಂಡು ಹೋಗುವೆ" ಎಂದು ಹೇಳಿತು. ರೊಟ್ಟಿಯನ್ನು ಹಿಂದಿನಿಂದ ತಳ್ಳಿತು, ರೊಟ್ಟಿ ಅಲ್ಲಾಡಲಿಲ್ಲ. ಮತ್ತೆ ಅದನ್ನು ಬಲಭಾಗದಿಂದ ತಳ್ಳಿತು, ಆಗಲೂ ಅಲ್ಲಾಡಲಿಲ್ಲ. ನಂತರ ಓಡಿ ಬಂದು ಸುತ್ತು ಹಾಕಿ ಎಡಭಾಗದಿಂದ ತಳ್ಳಿತು, ಆದರೆ ರೊಟ್ಟಿ ಅಲ್ಲಾಡಲಿಲ್ಲ. "ಹುಂ, ಇದಕ್ಕೆ ಒಂದು ದಾರ ಕಟ್ಟಿ ಅದನ್ನು ಮನೆಗೆ ಎಳೆದೊಯ್ಯುವೆ" ಎಂದು ಹೇಳಿ ಇಲಿ ಮನೆಯ ಒಳಗೆ ಓಡಿ ಹೋಗಿ ಒಂದು ದಾರ ತಂದಿತು, ಆದರೆ ದಾರ ತುಂಬಾ ಚಿಕ್ಕದಾಗಿತ್ತು. ಮತ್ತೆ ಹೋಗಿ ಇನ್ನೊಂದು ಉದ್ದವಾದ ದಾರ ತಂದಿತು. ರೊಟ್ಟಿಯನ್ನು ಉದ್ದದ ದಾರಕ್ಕೆ ಕಟ್ಟಿ ಎಳೆಯಿತು, ಮತ್ತೆ ಮತ್ತೆ ಎಳೆಯಿತು, ಆದರೂ ರೊಟ್ಟಿ ಅಲ್ಲಾಡಲಿಲ್ಲ. ಈಗ ಇಲಿ ಅಲ್ಲಿಯೇ ಕುಳಿತು ರೊಟ್ಟಿಯ ಚೂರೊಂದನ್ನು ತಿಂದಿತು; ಅದು ತುಂಬಾ ಚೆನ್ನಾಗಿತ್ತು. ಆಗ ಇನ್ನೂ ಸ್ವಲ್ಪ ತಿಂದಿತು, ಇನ್ನೂ ಸ್ವಲ್ಪ, ಇನ್ನೂ ಸ್ವಲ್ಪ, ಇನ್ನೂ ಸ್ವಲ್ಪ ತಿಂದಿತು. ಹಾಗೆ ತಿಂದು ತಿಂದು ರೊಟ್ಟಿಯು ಚಿಕ್ಕದಾಗುತ್ತಾ ಹೋಯಿತು. ಅದು ರೊಟ್ಟಿಯನ್ನು ತಳ್ಳಿತು ಮತ್ತು ರೊಟ್ಟಿಯು ಉರುಳುತ್ತಾ ಹೋಗಿ ಅದರ ಮನೆಯೊಳಕ್ಕೆ ಬಿತ್ತು. ಇಲಿಗೆ ತುಂಬಾ ಸಂತೋಷವಾಯಿತು. ರೊಟ್ಟಿಯ ತುಂಡು ಮನೆಯೊಳಗೆ ಸುರಕ್ಷಿತವಾಗಿತ್ತು. ಆದರೆ ಇಲಿಯು ತುಂಬಾ ರೊಟ್ಟಿ ತಿಂದಿದ್ದರಿಂದ ಅದರ ಹೊಟ್ಟೆಯು ದೊಡ್ಡದಾಯಿತು. ಇಲಿಯ ಹೊಟ್ಟೆ ದೊಡ್ಡದಾಗಿದ್ದರಿಂದ ತನ್ನನ್ನು ತಾನೇ ತಳ್ಳಿಕೊಂಡು ಮನೆಯೊಳಗೆ ಹೋಗಲು ಪ್ರಯತ್ನಿಸಿತು. ಆದರೆ ಅದಕ್ಕೆ ಮನೆಯೊಳಕ್ಕೆ ಹೋಗಲು ಆಗಲೇ ಇಲ್ಲ. ಇಲಿಯು ಹೊಟ್ಟೆ ಹಿಡಿದುಕೊಂಡು ಮನೆಯ ಬಾಗಿಲಲ್ಲಿ ಕುಳಿತು "ನಾನು ಅಷ್ಟೊಂದು ರೊಟ್ಟಿ ತಿನ್ನಬಾರದಿತ್ತು, ಬೇರೆಯವರ ಜೊತೆಗೆ ಹಂಚಿಕೊಳ್ಳಬೇಕಾಗಿತ್ತು" ಎಂದು ಯೋಚಿಸಿತು.





Scanned with CamScanner

## ಆಸೆಬುರುಕ ಇಲಿ

### ಸೂಚನೆಗಳು

1. ಸೂಕ್ತ ಹಾವಾಭಾವ ಮತ್ತು ಧ್ವನಿಯ ಏರಿಳಿತಗಳೊಂದಿಗೆ ಪೂರ್ತಿ ಕಥೆಯನ್ನು ಹೇಳುವುದು, ಮತ್ತು ಅದರ ಜೊತೆಗೆ ಪ್ರತಿ ದೃಶ್ಯಕ್ಕೂ ಸಂಬಂಧಿಸಿದ ಚಿತ್ರ ತೋರಿಸಿ ಅಲ್ಲಿ ಏನಾಗುತ್ತಿದೆಯೆಂದು? ಮಕ್ಕಳಿಗೆ ವಿವರಿಸುವರು.
2. ರೊಟ್ಟಿ ಮತ್ತು ಇಲಿಯ ಚಟುವಟಿಕೆಗಳ ಕಡೆಗೆ ಗಮನ ಸೆಳೆಯುತ್ತಾ ಕಥೆಯನ್ನು ಓದುವುದು.
3. ರೊಟ್ಟಿಯನ್ನು ಇಲಿ ಸ್ವಲ್ಪ ಸ್ವಲ್ಪ ತಿಂದಿದ್ದರಿಂದ ರೊಟ್ಟಿಯ ಗಾತ್ರ ಏನಾಗುತ್ತಿದೆಯೆಂಬುದರ? ಬಗ್ಗೆ ಪ್ರಶ್ನೆ ಕೇಳುತ್ತಾ ಗಾತ್ರದ ಬಗ್ಗೆ ಗಮನ ಸೆಳೆಯುವುದು.
4. ಪ್ರತಿ ಪುಟದ ವಿವರಣೆಯ ನಂತರ ಅಲ್ಲಿ ಏನಾಯಿತೆಂದು? ಮಕ್ಕಳನ್ನು ಕೇಳುವುದು. ಮುಂದೆ ಏನಾಗಬಹುದು? ಎಂದು ಕೇಳುವುದು.
5. ಕಥೆ ಪೂರ್ತಿಯಾಗಿ ಹೇಳಿದ ನಂತರ ಸಂಬಂಧಿತ ಚಿತ್ರಗಳನ್ನು ತೋರಿಸುತ್ತಾ ಈ ಕೆಳಗಿನ ಪ್ರಶ್ನೆಗಳನ್ನು ಕೇಳುವುದು.
   - ಇಲಿ ರೊಟ್ಟಿಯನ್ನು ತಳ್ಳಲು ಪ್ರಯತ್ನಿಸಿದಾಗ ಏನಾಯಿತು?
   - ಇಲಿ ರೊಟ್ಟಿಯನ್ನು ಎಳೆಯಲು ಪ್ರಯತ್ನಿಸಿದಾಗ ಏನಾಯಿತು?
   - ಇಲಿಗೆ ರೊಟ್ಟಿಯನ್ನು ಅಲ್ಲಾಡಿಸಲು ಏಕೆ ಸಾಧ್ಯವಾಗಲಿಲ್ಲ ಎಂದು ನಿಮಗೆ ಅನಿಸುತ್ತದೆ? (ಮಕ್ಕಳು ರೊಟ್ಟಿಯ ಗಾತ್ರವನ್ನು ಗಮನದಲ್ಲಿಟ್ಟುಕೊಂಡು ಅದು ದೊಡ್ಡದಾಗಿರುವುದರಿಂದ ಎಂದು ಹೇಳಬಹುದು) ಪ್ರಶ್ನೆ ಮುಂದುವರಿಸುತ್ತಾ, ವಸ್ತುಗಳು ದೊಡ್ಡದಾಗಿದ್ದರೆ ಏನಾಗುತ್ತದೆ? ನಮಗೆ ಅವುಗಳನ್ನು ಅಲ್ಲಾಡಿಸಲು ಅಥವಾ ಎತ್ತಲು ಏಕೆ ಸಾಧ್ಯವಾಗುವುದಿಲ್ಲ? ಎಂದು ಮಕ್ಕಳನ್ನು ಕೇಳುವುದು. ಮಕ್ಕಳು ಇದನ್ನು ಯೋಚಿಸುವಂತೆ ಮಾಡಲು ಪ್ರಯತ್ನಿಸುವುದು.
   - ಒಂದು ಭಾಗವನ್ನು ತಿಂದ ಮೇಲೆ ರೊಟ್ಟಿಯನ್ನು ಅಲ್ಲಾಡಿಸಲು ಇಲಿಗೆ ಹೇಗೆ ಸಾಧ್ಯವಾಯಿತು?
   - ರೊಟ್ಟಿಯ ಸ್ವಲ್ಪ ಭಾಗವನ್ನು ಇಲಿ ತಿಂದ ಮೇಲೆ ಏನಾಯಿತು?
   - ಇಲಿಗೆ ತನ್ನ ಜಾಗದಿಂದ ಅಲ್ಲಾಡಲು ಏಕೆ ಸಾಧ್ಯವಾಗಲಿಲ್ಲವೆಂದು ನಿಮಗೆ ಅನಿಸುತ್ತದೆ?
   - ಇಲಿ ಏನು ಮಾಡಬಹುದಾಗಿತ್ತು?
   - ದೊಡ್ಡ ವಸ್ತುಗಳು ಭಾರವಾಗಿರುವುದರಿಂದ ಅವುಗಳನ್ನು ಅಲ್ಲಾಡಿಸಲು ಕಷ್ಟವೆಂದು ವಿವರಿಸುತ್ತಾ ರೊಟ್ಟಿಯು ದೊಡ್ಡದಾಗಿದ್ದುದರಿಂದ ಅದು ಭಾರವಾಗಿತ್ತು. ಇಲಿ ರೊಟ್ಟಿಯನ್ನು ತಿಂದ ಮೇಲೆ ರೊಟ್ಟಿ ಚಿಕ್ಕದಾಯಿತು ಮತ್ತು ಹಗುರವಾಯಿತು. ಆದರೆ ಇಲಿ ದೊಡ್ಡದಾಯಿತು ಮತ್ತು ಮನೆಯ ಬಾಗಿಲಿನೊಳಗೆ ಹೋಗಲು ಸಾಧ್ಯವಾಗಲಿಲ್ಲ. ಈ ಸಾರಾಂಶದೊಂದಿಗೆ ಕಥೆಯನ್ನು ಮುಕ್ತಾಯಗೊಳಿಸುವುದು.


Scanned with CamScanner

## ಪರಿಶೋಧನಾತ್ಮಕ ಚಟುವಟಿಕೆಗಳು

### ಕಲಿಕಾ ಫಲಿತಗಳು

ತಮ್ಮ ದಿನನಿತ್ಯದ ಜೀವನದಲ್ಲಿ ಬರುವ ಭಾರ ಮತ್ತು ಹಗುರಗಳ ವಸ್ತುಗಳ ಪರಿಕಲ್ಪನೆ ಮೂಡಿಸುವುದು. ಅವುಗಳ ಬಗ್ಗೆ ಯೋಚಿಸಿ ತೀರ್ಮಾನ ತೆಗೆದುಕೊಳ್ಳಲು ಸಹಾಯ ಮಾಡುವುದು.

### ಕಲಿಕಾ ಸಾಮಗ್ರಿಗಳು

ಘನಾಕೃತಿ, ತಟ್ಟೆ (ಟ್ರೇ), ಸಣ್ಣ ನೀರಿನ ಬಾಟಲಿಗಳು, ಸ್ಲೇಟು, ಮಣಿಗಳು, ಚೆಂಡು, ಪುಸ್ತಕ, ಕಲ್ಲಿನ ಚೂರುಗಳು, ಬಣ್ಣದ ಪೆನ್ಸಿಲ್‌ಗಳು, ಕಾಗದದ ಹಾಳೆಗಳು, ಬೆಂಚು, ಡೆಸ್ಕ್ ಮತ್ತು ಕುರ್ಚಿ.

ಆನೆ, ಮೊಲ, ಕೋತಿ, ಕರಡಿ, ಕಾರು, ಬೈಕ್, ಬಸ್, ಬೈಸಿಕಲ್, ಕಲ್ಲಂಗಡಿ ಹಣ್ಣು, ಮಾವಿನ ಹಣ್ಣು, ಕುಂಬಳಕಾಯಿ, ಸೌತೆಕಾಯಿ, ಮೇಜು, ಸ್ಟೂಲ್, ಪುಸ್ತಕ, ಪೆನ್ಸಿಲ್‌ಗಳ ಚಿತ್ರವಿರುವ ಮಿಂಚು ಪಟ್ಟಿಗಳು.

### ಶಿಕ್ಷಕರ ಪೂರ್ವಸಿದ್ಧತೆ

1. ತರಗತಿಯಲ್ಲಿ ಸಿಗಬಹುದಾದ ವಿವಿಧ ವಸ್ತುಗಳ ಪಟ್ಟಿ ಮಾಡಿಟ್ಟುಕೊಳ್ಳುವುದು.
2. ಮನೆಯಲ್ಲಿ ಮತ್ತು ಹೊರಗಡೆ ಸಿಗಬಹುದಾದ ಬೇರೆ ಬೇರೆ ವಸ್ತುಗಳ ಪಟ್ಟಿ ಮಾಡಿಟ್ಟುಕೊಳ್ಳುವುದು.
3. ಮಾಡಲಿರುವ ಚಟುವಟಿಕೆಯ ಹಂತಗಳನ್ನು ಮತ್ತು ಚಟುವಟಿಕೆಯನ್ನು ಮೊದಲೇ ಓದಿ ಅರ್ಥಮಾಡಿಕೊಳ್ಳುವರು.

---

**ಚಟುವಟಿಕೆ 1**

### ಗುಂಪು ಚಟುವಟಿಕೆ

1. ಒಂದು ಜಾಗದಲ್ಲಿ ಕಲ್ಲಿನ ಚೂರುಗಳು, ಬಣ್ಣದ ಪೆನ್ಸಿಲ್, ಮಣಿಗಳು, ಚೆಂಡು, ಘನಾಕೃತಿ, ಕಾಗದದ ಹಾಳೆ ಮುಂತಾದ ಸಣ್ಣ ವಸ್ತುಗಳನ್ನಿಟ್ಟು ಆ ಜಾಗಕ್ಕೆ 'ಅ' ಎಂದು ಹೆಸರು ಕೊಡುವುದು.
2. ಸ್ವಲ್ಪ ದೂರದಲ್ಲಿ ಸ್ಲೇಟ್, ಪೆನ್ಸಿಲ್ ಬಾಕ್ಸ್, ಪುಸ್ತಕಗಳು ಮತ್ತು ಇತರ ಭಾರವಾದ ವಸ್ತುಗಳನ್ನಿಟ್ಟು ಅದಕ್ಕೆ 'ಆ' ಎಂದು ಹೆಸರು ಕೊಡುವುದು.
3. ತರಗತಿಯ ಒಳಗೆ ಸುತ್ತುತ್ತಾ, 'ಅ' ಮತ್ತು 'ಆ' ಜಾಗಗಳಿಂದ ಒಂದೊಂದು ಕೈಯಲ್ಲಿ ಒಂದೊಂದು ವಸ್ತುವನ್ನು ತೆಗೆದುಕೊಳ್ಳಲು ಮಕ್ಕಳಿಗೆ ಹೇಳುವುದು.
4. ಮಕ್ಕಳನ್ನು ಪುನಃ ಗುಂಪಾಗಿ ವೃತ್ತಾಕಾರದಲ್ಲಿ ಕುಳಿತುಕೊಳ್ಳಲು ಹೇಳುವುದು.
5. ತಮ್ಮ ಎರಡೂ ಕೈಗಳಲ್ಲಿ ಒಂದೊಂದು ವಸ್ತುವನ್ನು ಹಿಡಿದುಕೊಂಡು ಎರಡೂ ಕೈಗಳಿಗಿರುವ ವಸ್ತುಗಳ ವ್ಯತ್ಯಾಸವನ್ನು ಗ್ರಹಿಸಲು ಹೇಳುವುದು.
6. ಉತ್ತರಕ್ಕಾಗಿ ಕಾಯುವುದು ಮತ್ತು ಯಾವುದಾದರೊಂದು ಕೈಯಲ್ಲಿರುವ ವಸ್ತು ಭಾರವಾಗಿದೆಯೇ? ಎಂದು ಕೇಳುವುದು.

Scanned with CamScanner

## ಪರಿಶೋಧನಾತ್ಮಕ ಚಟುವಟಿಕೆಗಳು

### ಚಟುವಟಿಕೆ 2

### ಒಳಾಂಗಣ ಚಟುವಟಿಕೆ

1. ಒಂದು ಮಗುವನ್ನು ಕರೆದು ತಟ್ಟೆಯನ್ನು ಎತ್ತಿ ಕೆಳಗಿಡಲು ಹೇಳುವುದು. ನಂತರ ಕುರ್ಚಿಯನ್ನು ಎತ್ತಲು ಹೇಳುವುದು. ಯಾವುದು ಮೇಲೆತ್ತಲು ಸುಲಭವಾಗಿತ್ತು ಮತ್ತು ಏಕೆ? ಎಂದು ಕೇಳುವುದು. ಮಕ್ಕಳು ಉತ್ತರಿಸಲು ಪ್ರಯತ್ನಿಸಲಿ. ಈಗಾಗಲೇ ಅವರು ಭಾರ ಮತ್ತು ಹಗುರ ಎಂಬ ಪದಗಳನ್ನು ತಿಳಿದಿರುತ್ತಾರೆ.
2. ಇದೇ ರೀತಿ ಬೇರೆ ಮಕ್ಕಳನ್ನು ಕರೆದು ತಟ್ಟೆ ಮತ್ತು ಕುರ್ಚಿಗಳನ್ನು ಎತ್ತಲು ಹೇಳುವುದು. ಮೇಲೆತ್ತಲು ಯಾವುದು ಸುಲಭವಾಗಿತ್ತೆಂದು? ಕೇಳಿ ಉತ್ತರ ಪಡೆಯುವುದು.
3. ಕುರ್ಚಿ ಭಾರವಾಗಿದೆ ಮತ್ತು ತಟ್ಟೆ ಹಗುರವಾಗಿದೆ, ಆದ್ದರಿಂದ ತಟ್ಟೆಯನ್ನು ಎತ್ತುವುದು ಕುರ್ಚಿಯನ್ನು ಎತ್ತುವುದಕ್ಕಿಂತ ಸುಲಭ ಎಂದು ವಿವರಿಸುವರು.
4. ಇನ್ನೊಂದು ಮಗುವನ್ನು ಕರೆದು ಒಂದು ಕೈಯಲ್ಲಿ ಪುಸ್ತಕ ಮತ್ತು ಇನ್ನೊಂದು ಕೈಯಲ್ಲಿ ಕಲ್ಲಿನ ಚೂರು ಹಿಡಿದುಕೊಳ್ಳಲು ಹೇಳುವುದು.
5. ಎರಡರ ನಡುವಿನ ವ್ಯತ್ಯಾಸವನ್ನು ಹೇಳಲು ಹೇಳುವುದು.
6. ತರಗತಿಯಲ್ಲಿನ ವಿವಿಧ ವಸ್ತುಗಳನ್ನು ಉಪಯೋಗಿಸಿಕೊಂಡು ಮಕ್ಕಳ ಜೊತೆಗೆ ಈ ಚಟುವಟಿಕೆಯನ್ನು ಮುಂದುವರಿಸುವುದು.
7. ಎತ್ತಲು ಸುಲಭವಾಗಿರುವ ವಸ್ತುಗಳು ಹಗುರವಾಗಿರುತ್ತವೆ ಮತ್ತು ಎತ್ತಲು ಕಷ್ಟವಾಗುವ ವಸ್ತುಗಳು ಭಾರವಾಗಿರುತ್ತವೆ, ಎಂದು ಹೇಳುವುದರೊಂದಿಗೆ ಚಟುವಟಿಕೆಯನ್ನು ಮುಕ್ತಾಯಗೊಳಿಸುವುದು.

### ಚಟುವಟಿಕೆ 3

### ಗುಂಪು ಚಟುವಟಿಕೆ

1. ತರಗತಿಯ ಮಕ್ಕಳನ್ನು 5 ಗುಂಪುಗಳಾಗಿ ವಿಂಗಡಿಸುವುದು ಹಾಗೂ 5 ಪೀಠೋಪಕರಣಗಳನ್ನು ಅಥವಾ ಭಾರವಾದ ವಸ್ತುಗಳನ್ನು ಆಯ್ಕೆ ಮಾಡಿಕೊಂಡು ಒಂದೊಂದು ಗುಂಪಿಗೆ ಕೊಡುವುದು.
2. ಸ್ಟೂಲ್ ಅನ್ನು ಮಧ್ಯದಲ್ಲಿಡುವುದು. ನಂತರ 5 ವಸ್ತುಗಳನ್ನು ಬೇರೆ ಬೇರೆ ಜಾಗಗಳಲ್ಲಿಟ್ಟು ಯಾವ ವಸ್ತುವು ತಳ್ಳುವುದಕ್ಕೆ ಸುಲಭ ಎಂದು ಅಂದಾಜು ಮಾಡಿ ಹೇಳಲು ಹೇಳುವುದು.
3. ಮಕ್ಕಳಿಗೆ ಚರ್ಚೆ ಮತ್ತು ಊಹೆ ಮಾಡಲು ಅವಕಾಶ ಕೊಡುವುದು. ತರಗತಿಯ ಮಕ್ಕಳೆಲ್ಲರೂ ಪ್ರಯತ್ನಿಸಿ ಅವರಿಂದ ಬಂದ ಉತ್ತರಗಳನ್ನು ಪರೀಕ್ಷಿಸುವುದು.
4. ಕೆಲವು ಮಕ್ಕಳನ್ನು ಕರೆದು ಒಬ್ಬೊಬ್ಬರಾಗಿ ಡೆಸ್ಕ್ ಅನ್ನು ತಳ್ಳಲು ಅಥವಾ ಎಳೆಯಲು ಪ್ರಯತ್ನಿಸಲು ಹೇಳುವುದು.
5. ಅವರಿಗೆ ಅದನ್ನು ತಳ್ಳಲು ಅಥವಾ ಎಳೆಯಲು ಸಾಧ್ಯವಾಯಿತೇ? ಅದು ಸುಲಭವಾಗಿತ್ತೇ? ಕಷ್ಟವಾಗಿತ್ತೇ? ಎಂದು ಕೇಳುವುದು.
6. ಇನ್ನೂ ಕೆಲವು ಮಕ್ಕಳನ್ನು ಕರೆದು ಸ್ಟೂಲ್ ಅನ್ನು ತಳ್ಳಲು ಅಥವಾ ಎಳೆಯಲು ಪ್ರಯತ್ನಿಸಲು ಹೇಳುವುದು.
7. ಅವರಿಗೆ ಸ್ಟೂಲ್ ಅನ್ನು ತಳ್ಳಲು ಅಥವಾ ಎಳೆಯಲು ಸಾಧ್ಯವಾಯಿತೇ? ಅದು ಸುಲಭವಾಗಿತ್ತೇ? ಕಷ್ಟವಾಗಿತ್ತೇ? ಎಂದು ಕೇಳುವುದು.
8. ಮಕ್ಕಳ ಉತ್ತರಗಳಿಗಾಗಿ ಕಾಯುವುದು.
9. ಇನ್ನೂ ಕೆಲವು ವಸ್ತುಗಳನ್ನು, ಉದಾಹರಣೆಗೆ, ಷೆಲ್ಫು (ತೆರೆದ ಕಪಾಟು), ಮರಳಿನ ಚೀಲ, ಸಣ್ಣ ಪೆಟ್ಟಿಗೆ ಮುಂತಾದವುಗಳನ್ನು ತೋರಿಸಿ ಪ್ರತಿಯೊಂದೂ ತಳ್ಳಲು ಅಥವಾ ಎಳೆಯಲು ಸುಲಭವೇ? ಕಷ್ಟವೇ? ಎಂದು ಕೇಳುವುದು.
10. ವಸ್ತು ಭಾರವಾಗಿದ್ದರೆ ತಳ್ಳಲು ಅಥವಾ ಎಳೆಯಲು ಕಷ್ಟ, ಹಾಗೆಯೇ ವಸ್ತು ಹಗುರವಾಗಿದ್ದರೆ ತಳ್ಳಲು ಅಥವಾ ಎಳೆಯಲು ಹೆಚ್ಚು ಸುಲಭ, ಎಂದು ಹೇಳುವುದರೊಂದಿಗೆ ಚಟುವಟಿಕೆಯನ್ನು ಮುಕ್ತಾಯಗೊಳಿಸುವುದು.

Scanned with CamScanner

## ಚಟುವಟಿಕೆ 4

## ಜೊತೆಯಾಗಿ/ ಒಬ್ಬೊಬ್ಬರಾಗಿ ಚಟುವಟಿಕೆಯನ್ನು ಮಾಡುವುದು

**ಜೊತೆಯಾಗಿ ಮಾಡುವ ಚಟುವಟಿಕೆ:**

1. ಮಕ್ಕಳನ್ನು ಜೋಡಿಯಾಗಿ ನಿಲ್ಲಲು ಹೇಳುವುದು.
2. ಈ ಕೆಳಗಿನ ಚಿತ್ರಗಳ ಮಿಂಚುಪಟ್ಟಿಗಳನ್ನು ಅದೇ ಅನುಕ್ರಮದಲ್ಲಿ ಇಡುವುದು.
   - ಆನೆ ಮತ್ತು ಮೊಲ.
   - ಕೋತಿ ಮತ್ತು ಕರಡಿ.
   - ಕಾರು ಮತ್ತು ಮೋಟಾರು ಬೈಕ್.
   - ಬಸ್ ಮತ್ತು ಬೈಸಿಕಲ್.
   - ಕುಂಬಳಕಾಯಿ ಮತ್ತು ಸೌತೆಕಾಯಿ.
   - ಮೇಜು ಮತ್ತು ಸ್ಟೂಲ್.
   - ಪುಸ್ತಕ ಮತ್ತು ಪೆನ್ಸಿಲ್.
   - ಕಲ್ಲಂಗಡಿ ಹಣ್ಣು ಮತ್ತು ಮಾವಿನಹಣ್ಣು.
3. ಈಗ ಪ್ರತಿಯೊಂದು ಮಿಂಚುಪಟ್ಟಿಯ ಚಿತ್ರಗಳನ್ನು ಹೋಲಿಸಿ, ಯಾವುದು ಭಾರ? ಯಾವುದು ಹಗುರ? ಯಾವುದು ತಳ್ಳಲು ಕಷ್ಟ? ಯಾವುದು ಎಳೆಯಲು ಹಗುರ? ಎಂದು ಕೇಳುವುದು.
4. ತರಗತಿಯ ಎಲ್ಲಾ ಮಕ್ಕಳು ಚಟುವಟಿಕೆಯಲ್ಲಿ ಭಾಗವಹಿಸಿ ಹಗುರ ಮತ್ತು ಭಾರವಾದ ವಸ್ತುಗಳ ಬಗ್ಗೆ ಮಾತನಾಡಲು ಹೇಳುವುದು.



Scanned with CamScanner


## ವಿಸ್ತರಣಾ ಚಟುವಟಿಕೆ


### ಕಲಿಕಾ ಫಲಿತಗಳು


ತೂಕದ ಆಧಾರದ ಮೇಲೆ ವಸ್ತುಗಳನ್ನು ಪ್ರತ್ಯೇಕಿಸುವುದು. (ವಿಂಗಡಿಸುವುದು ಮತ್ತು ಹೊಂದಿಸುವುದು).

### ಕಲಿಕಾ ಸಾಮಗ್ರಿಗಳು

1. ತಟ್ಟೆ (ಟ್ರೇ), ಸ್ಲೇಟ್, ಮಣಿಗಳು, ಚೆಂಡು, ಘನಾಕೃತಿ, ಕಲ್ಲಿನ ಚೂರುಗಳು, ಬಣ್ಣದ ಪೆನ್ಸಿಲ್‌ಗಳು, ಪೆನ್ಸಿಲ್ ಬಾಕ್ಸ್, ಕಾಗದದ ಹಾಳೆಗಳು, ಪುಸ್ತಕ, ತರಕಾರಿಗಳು, ರೆಂಬೆಗಳು, ಹಣ್ಣುಗಳು ಮತ್ತು ಎಲೆಗಳು.
2. ಈ ಕೆಳಗಿನವುಗಳಿಗೆ ಮಿಂಚುಪಟ್ಟಿಗಳು.
    - ಸಣ್ಣ ಬಾಳೆಹಣ್ಣು ಮತ್ತು ದೊಡ್ಡ ಬಾಳೆಹಣ್ಣು.
    - ಗಿಡ ಮತ್ತು ಮರ.
    - ಜಿರಾಫೆ ಮತ್ತು ಇಲಿ.
    - ಅರ್ಧಚೀಲ ಅಕ್ಕಿ ಮತ್ತು ಪೂರ್ತಿ ಚೀಲ ಅಕ್ಕಿ.
    - 2 ಸೇಬುಗಳು ಮತ್ತು 5 ಸೇಬುಗಳು.











### ಶಿಕ್ಷಕರ ಪೂರ್ವಸಿದ್ಧತೆ

1. ಮಕ್ಕಳು ಗುಂಪಿನಲ್ಲಿ ಕೆಲಸ ಮಾಡುವುದರಿಂದ ತರಗತಿಗೂ ಮುನ್ನ ಸಲಕರಣೆಗಳನ್ನು ಬೇರೆ ಬೇರೆ ಗುಂಪುಗಳಾಗಿ ವಿಂಗಡಿಸಿ ಇಟ್ಟುಕೊಳ್ಳುವುದು. ಗುಂಪುಗಳಾಗಿ ವಿಂಗಡಿಸಿದ ತಕ್ಷಣ ಅವರು ಚಟುವಟಿಕೆ ಪ್ರಾರಂಭಿಸಬಹುದು.
2. ಎಷ್ಟು ಗುಂಪುಗಳು ಮತ್ತು ಪ್ರತಿ ಗುಂಪಿಗೆ ಯಾವ ಯಾವ ವಸ್ತುಗಳೆಂದು ನಿರ್ಧರಿಸುವುದು. ತರಗತಿಯಲ್ಲಿ ಮಕ್ಕಳು ಹೆಚ್ಚಾಗಿದ್ದರೆ ಗುಂಪುಗಳನ್ನು ವಿಂಗಡಿಸಿಕೊಂಡು ಗುಂಪುಗಳ ಹೆಸರುಗಳನ್ನು ಬರೆದುಕೊಳ್ಳುವುದು.
3. ಚಟುವಟಿಕೆಯ ಜಾಗವನ್ನು ನಿರ್ಧರಿಸಿ ಸೂಚನೆಯ ಕಾರ್ಡುಗಳು ಮತ್ತು ವಸ್ತುಗಳನ್ನು ಆಯಾ ಜಾಗದಲ್ಲಿ ಇರಿಸುವುದು.
4. ಕಾರ್ಡುಗಳನ್ನು ಸಿದ್ಧಪಡಿಸಿಟ್ಟುಕೊಳ್ಳುವುದು ಮತ್ತು ಮಕ್ಕಳ ಗುಂಪುಗಳನ್ನು ನಿರ್ಧರಿಸುವುದು.

Scanned with CamScanner

## ವಿಸ್ತರಣಾ ಚಟುವಟಿಕೆ

### ಚಟುವಟಿಕೆ 1

### ಗುಂಪು ಚಟುವಟಿಕೆ

1. ತರಗತಿಯ ಮಕ್ಕಳ ಸಣ್ಣ ಸಣ್ಣ ಗುಂಪುಗಳನ್ನು ಮಾಡುವುದು.
2. ಎಲ್ಲಾ ವಸ್ತುಗಳನ್ನು ನಿರ್ದಿಷ್ಟ ಕ್ರಮಾನುಸರಣೆಯಿಲ್ಲದಂತೆ ನೆಲದಲ್ಲಿ ಇಡುವುದು.
3. ಭಾರವಾದ ಹಾಗೂ ಹಗುರವಾದ ವಸ್ತುಗಳನ್ನು ಮಿಶ್ರಮಾಡಿ ಇಡಲಾಗಿದೆ ಎಂದು ಮಕ್ಕಳಿಗೆ ಹೇಳುವುದು.
4. ಅವುಗಳ ತೂಕಕ್ಕನುಗುಣವಾಗಿ ಭಾರವಾದ ಹಾಗೂ ಹಗುರವಾದ ವಸ್ತುಗಳನ್ನು ವಿಂಗಡಿಸಲು ಹೇಳುವುದು.

### ಚಟುವಟಿಕೆ 2

### ಗುಂಪು ಚಟುವಟಿಕೆ

1. ತರಗತಿಯ ಮಕ್ಕಳನ್ನು 4 – 5 ಮಕ್ಕಳ ಸಣ್ಣ ಗುಂಪು ಮಾಡುವುದು.
2. ಈಗ ಒಂದು ವಸ್ತುವನ್ನು ಎತ್ತಿಕೊಂಡು ಅದೇ ರೀತಿ ತೂಕವಿರುವ ಇನ್ನೊಂದು ವಸ್ತುವನ್ನು ಹುಡುಕಲು ಮಕ್ಕಳಿಗೆ ಹೇಳುವುದು. ಉದಾಹರಣೆಗೆ, ಘನಾಕೃತಿ ಮತ್ತು ಮಣಿಗಳು ಸಮವಾಗಿ ಒಂದೇ ತೂಕವಿರಬಹುದು.
3. ಒಂದು ಗುಂಪು ಈ ರೀತಿ ವಸ್ತುಗಳ ಗುಂಪು ಮಾಡುವುದು ಮತ್ತು ಇನ್ನೊಂದು ಗುಂಪು ಅದನ್ನು ಪರೀಕ್ಷಿಸಲು ಬಿಡುವುದು. ನಂತರ ಎರಡನೆಯ ಗುಂಪು ಅದೇ ರೀತಿಯ ಚಟುವಟಿಕೆ ಮಾಡುವುದು ಮತ್ತು ಮೊದಲನೆಯ ಗುಂಪು ಅದನ್ನು ಪರೀಕ್ಷಿಸುವುದು.
4. ಈ ಚಟುವಟಿಕೆಯನ್ನು ಅಂದಾಜಿಸುವ ಮೂಲಕ ತೂಕಗಳು ಸರಿಯಾಗಿ ಒಂದೇ ಆಗಿ ಇರಲಾರದು. ಆದರೆ ಬಹುತೇಕ ಒಂದೇ ಆಗಿರುತ್ತವೆ.

### ಚಟುವಟಿಕೆ 3

### ಜೊತೆಯಾಗಿ/ಒಬ್ಬೊಬ್ಬರಾಗಿ ಚಟುವಟಿಕೆಯನ್ನು ಮಾಡುವುದು

1. ಮಕ್ಕಳನ್ನು ಜೋಡಿಯಾಗಿ ನಿಲ್ಲಲು ಹೇಳುವುದು.
2. ಈ ಕೆಳಗಿನ ಮಿಂಚುಪಟ್ಟಿಗಳನ್ನು ಯಾವುದೇ ನಿರ್ದಿಷ್ಟ ಕ್ರಮವಿಲ್ಲದೆ ಇಡುವುದು.
   - ಸಣ್ಣ ಬಾಳೆಹಣ್ಣು ಮತ್ತು ದೊಡ್ಡ ಬಾಳೆಹಣ್ಣು.
   - ಗಿಡ ಮತ್ತು ಮರ.
   - ಜಿರಾಫೆ ಮತ್ತು ಇಲಿ.
   - ಅರ್ಧಚೀಲ ಅಕ್ಕಿ ಮತ್ತು ಪೂರ್ತಿ ಚೀಲ ಅಕ್ಕಿ.
   - 2 ಸೇಬುಗಳು ಮತ್ತು 5 ಸೇಬುಗಳು.
3. ಅವುಗಳ ತೂಕಕ್ಕನುಗುಣವಾಗಿ ಭಾರವಾದ ಹಾಗೂ ಹಗುರವಾದ ವಸ್ತುಗಳ ಚಿತ್ರಗಳನ್ನು ವಿಂಗಡಿಸಲು ಹೇಳುವುದು.

ಸೂಚನೆ: ಮೇಲಿನ ವಸ್ತುಗಳು ಲಭ್ಯವಿಲ್ಲದಿದ್ದಲ್ಲಿ ಸ್ಥಳೀಯವಾಗಿ ದೊರೆಯುವ ವಸ್ತುಗಳನ್ನು ಉಪಯೋಗಿಸಿ ಚಟುವಟಿಕೆ ನಿರ್ವಹಿಸುವುದು.



Scanned with CamScanner

# ವಿಸ್ತರಣಾ ಚಟುವಟಿಕೆ

## ಕಲಿಕಾ ಫಲಿತಗಳು

ತೂಕದ ಆಧಾರದಲ್ಲಿ ವಸ್ತುಗಳನ್ನು ಮೂರು ಹಂತಗಳವರೆಗೆ ಅನುಕ್ರಮವಾಗಿ ಜೋಡಿಸುವುದು.

## ಕಲಿಕಾ ಸಾಮಗ್ರಿಗಳು

ಘನಾಕೃತಿ, ತಟ್ಟೆ (ಟ್ರೇ), ನೀರಿನ ಬಾಟಲ್, ಸ್ಲೇಟು, ಮಣಿಗಳು, ಚೆಂಡು, ಪುಸ್ತಕಗಳು, ಬಣ್ಣದ ಪೆನ್ಸಿಲ್‌ಗಳು, ಕಾಗದದ ಹಾಳೆಗಳು, ತೂಕದ ಚೀಲಗಳು.

## ಶಿಕ್ಷಕರ ಪೂರ್ವಸಿದ್ಧತೆ

1. ಮಕ್ಕಳು ಗುಂಪಿನಲ್ಲಿ ಚಟುವಟಿಕೆ ಮಾಡುವುದರಿಂದ ತರಗತಿಗೂ ಮುನ್ನ ಸಲಕರಣೆಗಳನ್ನು ಬೇರೆ ಬೇರೆ ಗುಂಪುಗಳಾಗಿ ವಿಂಗಡಿಸಿ ಇಟ್ಟುಕೊಳ್ಳುವುದು. ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿದ ತಕ್ಷಣ ಅವರು ಚಟುವಟಿಕೆ ಪ್ರಾರಂಭಿಸಬಹುದು.
2. ಎಷ್ಟು ಗುಂಪುಗಳು ಹಾಗು ಪ್ರತಿ ಗುಂಪಿಗೆ ಯಾವ ಯಾವ ವಸ್ತುಗಳೆಂದು ನಿರ್ಧರಿಸುವುದು. ತರಗತಿಯಲ್ಲಿ ಮಕ್ಕಳು ಹೆಚ್ಚಾಗಿದ್ದರೆ ಗುಂಪುಗಳನ್ನು ವಿಂಗಡಿಸಿಕೊಂಡು, ಗುಂಪುಗಳ ಹೆಸರುಗಳನ್ನು ಬರೆದುಕೊಳ್ಳುವುದು. ಚಟುವಟಿಕೆಯ ಜಾಗವನ್ನು ನಿರ್ಧರಿಸಿ ಸೂಚನೆಯ ಕಾರ್ಡುಗಳು ಮತ್ತು ವಸ್ತುಗಳನ್ನು ಆಯಾ ಜಾಗದಲ್ಲಿ ಇರಿಸುವುದು.
3. ಕಾರ್ಡುಗಳನ್ನು ಸಿದ್ಧಪಡಿಸಿಟ್ಟುಕೊಳ್ಳುವುದು ಮತ್ತು ಮಕ್ಕಳ ಗುಂಪುಗಳನ್ನು ನಿರ್ಧರಿಸುವುದು.

---

## ಗುಂಪು ಚಟುವಟಿಕೆ

1. ಮಕ್ಕಳಿಗೆ ಜೋಡಿಯಾಗಿ ನಿಲ್ಲಲು ಹೇಳುವುದು.
2. ಪ್ರತಿಯೊಂದು ಗುಂಪಿಗೂ 6 ವಸ್ತುಗಳನ್ನು ಕೊಡುವುದು. ಉದಾಹರಣೆಗೆ, ಒಂದನೇ ಗುಂಪಿಗೆ ಘನಾಕೃತಿ, ಮಣಿಗಳು, ತಟ್ಟೆ, ಸ್ಲೇಟ್, ಪುಸ್ತಕ, ಕಾಗದದ ಹಾಳೆ.
3. ಮಕ್ಕಳಿಗೆ ಅವುಗಳಿಂದ ಮೂರು ವಸ್ತುಗಳನ್ನು ತೆಗೆದುಕೊಂಡು ಅವುಗಳನ್ನು ಹಗುರವಾದ, ಸ್ವಲ್ಪ ಹಗುರವಾದ ಮತ್ತು ಭಾರವಾದ ವಸ್ತುಗಳೆಂದು ಅನುಕ್ರಮವಾಗಿ ಇಡಲು ಹೇಳುವುದು.
4. ಉದಾಹರಣೆಗೆ, ಮಕ್ಕಳು ತಟ್ಟೆ, ಪುಸ್ತಕ ಮತ್ತು ಘನಾಕೃತಿಗಳನ್ನು ಆರಿಸಿಕೊಂಡರೆ, ಅವುಗಳನ್ನು ಎತ್ತಿಕೊಂಡು ಯಾವುದು ಹಗುರವಾಗಿದೆ, ಹಗುರವಾಗಿದೆ ಮತ್ತು ಯಾವುದು ತುಂಬಾ ಭಾರವಾಗಿದೆ ಎಂದು ನಿರ್ಧರಿಸಲು ಹೇಳುವುದು. ಅನುಕ್ರಮವಾಗಿ ಸ್ವಲ್ಪ ಹಗುರವಾದ, ಹಗುರವಾದ ಹಾಗೂ ಭಾರವಾದ ವಸ್ತುಗಳೆಂದು ಇಡಲು ಹೇಳುವುದು.
5. ಈಗ ಇನ್ನುಳಿದ ಮೂರು ವಸ್ತುಗಳನ್ನು ಉಪಯೋಗಿಸಿಕೊಂಡು ಅದೇ ಚಟುವಟಿಕೆಯನ್ನು ಪುನರಾವರ್ತಿಸಲು ಹೇಳುವುದು.
6. ಜೊತೆಯಾಗಿ/ ಒಬ್ಬೊಬ್ಬರಾಗಿ ಚಟುವಟಿಕೆಯನ್ನು ಮಾಡುವುದು. ಒರಿಯ ವಿದ್ಯಾರ್ಥಿಗಳು ಈ ಮೊದಲೇ ಮಾಡಿದ ತೂಕದ ಚೀಲಗಳನ್ನು ಉಪಯೋಗಿಸಿಕೊಂಡು ಈ ಮೇಲಿನ ಚಟುವಟಿಕೆಯನ್ನು ಪುನರಾವರ್ತಿಸುವುದು.



Scanned with CamScanner

## ವಿಸ್ತರಣಾ ಚಟುವಟಿಕೆ

### ಕಲಿಕಾ ಫಲಿತಗಳು

ದೈನಂದಿನ ಜೀವನದಲ್ಲಿ ತೂಕಕ್ಕೆ ಸಂಬಂಧಿಸಿದ ಸರಳ ಸಮಸ್ಯೆಗಳನ್ನು ಬಿಡಿಸುವುದು.

### ಕಲಿಕಾ ಸಾಮಗ್ರಿಗಳು

ತಕ್ಕಡಿ, ತೂಕದ ಬಟ್ಟುಗಳು, ಕಡಲೆಕಾಯಿ ಬೀಜಗಳು, ಬಾಳೆಹಣ್ಣುಗಳು, ಅಕ್ಕಿ, ಆಟದ ನೋಟುಗಳು, ಮಕ್ಕಳ ಉಡುಗೆಗಳು, ತರಕಾರಿಗಳು, ಕಾಳುಗಳು/ ಅಕ್ಕಿಯ ಚೀಲ.

### ಸೂಚನೆಗಳು

1. ತರಗತಿಯ ಒಳಗೆ ಮತ್ತು ಹೊರಗೆ, ತರಕಾರಿ, ಹಣ್ಣುಗಳು, ಅಕ್ಕಿ, ಧಾನ್ಯಗಳು ಮುಂತಾದವುಗಳನ್ನು ಮಾರುವ ಒಂದು ಮಾರುಕಟ್ಟೆಯ ಸನ್ನಿವೇಶವನ್ನು ನಿರ್ಮಿಸುವುದು. ಇದಕ್ಕಾಗಿ ಕೃತಕ ವಸ್ತುಗಳನ್ನೂ ಉಪಯೋಗಿಸಬಹುದು.
2. ಮಕ್ಕಳಿಗೆ ಸಿಗುವ ಹಾಗೆ ತಕ್ಕಡಿಯನ್ನು ಇಡುವುದು
3. ಮಕ್ಕಳು ಮಾರುಕಟ್ಟೆಯಲ್ಲಿ ಕೊಳ್ಳುವ ಹಾಗೂ ಮಾರುವ ವ್ಯಕ್ತಿಗಳಾಗಿ ವಿವಿಧ ಪಾತ್ರವಹಿಸಲು ಹೇಳುವುದು.
4. ಮಕ್ಕಳಿಗೆ ಪಾತ್ರಾಭಿನಯ ಮಾಡಲು ಹೇಳಿ, ಕೆಲವರಿಗೆ ಮಾರುವ, ಕೆಲವರಿಗೆ ಕೊಳ್ಳುವವರ ಪಾತ್ರ ಕೊಡುವುದು. ಎಲ್ಲಾ ಮಕ್ಕಳು ಭಾಗವಹಿಸುವಂತೆ ನೋಡಿಕೊಳ್ಳುವುದು.
5. ಪಾತ್ರಾಭಿನಯದ ಮಧ್ಯದಲ್ಲಿ ಅಥವಾ ನಂತರ ಈ ಕೆಳಗಿನ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವುದು.
    - ಮಾರುಕಟ್ಟೆಯಲ್ಲಿರುವ ಯಾವ ವಸ್ತುಗಳು ಭಾರವಾಗಿರುತ್ತವೆ?
    - ಮಾರುಕಟ್ಟೆಯಲ್ಲಿರುವ ಯಾವ ವಸ್ತುಗಳು ಹಗುರವಾಗಿರುತ್ತವೆ?
    - ನಿಮಗೆ ಒಂದು ಚೀಲ (ಮೂಟೆ) ಅಕ್ಕಿಯನ್ನು ಮೇಲೆತ್ತಲು ಸಾಧ್ಯವೇ?
    - ಈರುಳ್ಳಿ ತುಂಬಿದ ಚೀಲವನ್ನು ಮೇಲೆತ್ತಲು ನಿಮಗೆ ಸಾಧ್ಯವೇ?
    - ಒಂದು ಚೀಲ ತರಕಾರಿ ಹೆಚ್ಚು ಭಾರವೇ, ಅಥವಾ ಒಂದು ಮೂಟೆ ಧಾನ್ಯವೇ?
    - ಮಾರುವವನು ಏನು ಮಾಡುತ್ತಾನೆ?
    - ಕೊಳ್ಳುವವನು ಏನು ಮಾಡುತ್ತಾನೆ?



Scanned with CamScanner

# ಶಿಕ್ಷಕರ ಕೈಪಿಡಿ - 4 ರಿಂದ 5 ವರ್ಷದವರಿಗೆ



Printed for

ಸಮಗ್ರ ಶಿಕ್ಷಣ ಕರ್ನಾಟಕ

**Department of Primary & Secondary Education, Samagra Shikshana Karnataka**

New Public Offices, Annexe Building, Nrupathunga Road, Sampangi Rama Nagar, Bengaluru - 560001, Karnataka

Designed by: Zinc & Broccoli, www.zandb.in

Printed at: SCPL, www.scpl.net